ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ


ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME - 13 ಸಂಪುಟ-13 | ISSUE - 83 ಸಂಚಿಕೆ- 83 | PAGE- 8 ಪುಟ-8 | ಬುಧುವಾರ 07.05.2025 | RS.2/- ಬೆಲೆ 2/-

# ರೆಡ್ಡಿಗೆ 7 ವರ್ಷ ಜೈಲು



ಮಲ್ಲಮ್ಮ ನುಡಿ ವಾರ್ತೆ

ಹೈದರಾಬಾದ್:ಮೇ.6: ದೇಶಾದ್ಯಂತ ಸಂಚಲನ ಸೃಷ್ಟಿಸಿದ್ದ ಓಬಳಾಪುರಂ ಮೈನಿಂಗ್ ಕಂಪನಿ(ಒಎಂಸಿ)ಯ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಮಾಜಿ ಸಚಿವ ಹಾಗೂ ಗಂಗಾವತಿ ಹಾಲಿ ಶಾಸಕ ಗಾಲಿ ಜನಾರ್ದನ ರೆಡ್ಡಿಗೆ ಏಳು ವರ್ಷ ಜೈಲು ಶಿಕ್ಷೆ ವಿಧಿಸಿ ಸಿಬಿಐ ವಿಶೇಷ ಕೋರ್ಟ್ ಮಂಗಳವಾರ ತೀರ್ಪು ನೀಡಿದೆ.ಒಎಂಸಿ ಅಕ್ರಮ ಗಣಿಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದ–ಪ್ರತಿವಾದ ಆಲಿಸಿದ್ದ ಹೈದರಾಬಾದ್ ಸಿಬಿಐ ನ್ಯಾಯಾಲಯ ತೀರ್ಪನ್ನು ಇಂದಿಗೆ ಕಾಯ್ದಿರಿಸಿತ್ತು. ಇಂದು ತೀರ್ಪು ಪ್ರಕಟಿಸಿದ ಕೋರ್ಟ್, ಒಎಂಸಿ ಕಂಪನಿ ಮಾಲೀಕ ಜನಾರ್ದನ ರೆಡ್ಡಿಗೆ ಏಳು ವರ್ಷ ಜೈಲು ಶಿಕ್ಷೆ ವಿಧಿಸಿ ಆದೇಶಿಸಿದೆ.

ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಓಬಳಾಪುರಂನಲ್ಲಿ ನಡೆದಿದೆ ಎನ್ನಲಾದ ಅಕ್ರಮ ಗಣಿಗಾರಿಕೆ ಪ್ರಕರಣ ಸಂಬಂಧ ಬರೋಬ್ಬರಿ 13 ವರ್ಷಗಳಿಂದ ನಡೆದ ಸುದೀರ್ಘ ವಿಚಾರಣಾ ಪ್ರಕ್ರಿಯೆಯಲ್ಲಿ 3,400ಕ್ಕೂ ಹೆಚ್ಚು ದಾಖಲೆಗಳನ್ನು ಪರಿಶೀಲಿಸಲಾಗಿದೆ ಮತ್ತು 219 ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ.

ಏಳು ವರ್ಷ ಜೈಲು ಶಿಕ್ಷೆಗೆ ಗುರಿಯಾಗಿರುವ ಜನಾರ್ದನ ರೆಡ್ಡಿ ಅವರ ಶಾಸಕ ಸ್ಥಾನಕ್ಕೆ ಕುತ್ತು ಬರುವ ಸಾಧ್ಯತೆ ಇದೆ. ಇನ್ನು, ಇದೇ ಪ್ರಕರಣದಲ್ಲಿ ವಿ.ಡಿ.ರಾಜಗೋಪಾಲ್, ದಿ. ರಾವ್ ಲಿಂಗಾರೆಡ್ಡಿ, ಕೆ.ಮೆಹಫೂಸ್ ಅಲಿ ಖಾನ್ ಕೂಡ ಅಪರಾಧಿ ಎಂದು ಕೋರ್ಟ್ ತೀರ್ಪು ನೀಡಿದೆ.

ಜನಾರ್ದನ ರೆಡ್ಡಿ, ಬಿ.ವಿ ಶ್ರೀನಿವಾಸ ರೆಡ್ಡಿ (ಒಎಂಸಿ ವ್ಯವಸ್ಥಾಪಕ ನಿರ್ದೇಶಕ), ಮೆಫಾಜ್ ಅಲಿ ಖಾನ್ (ಜನಾರ್ದನ ರೆಡ್ಡಿ ಆಪ್ತ ಸಹಾಯಕ), ವಿ ಡಿ ರಾಜಗೋಪಾಲ್ (ಗಣಿ ಇಲಾಖೆಯ ಮಾಜಿ ನಿರ್ದೇಶಕ), ಕೃಪಾನಂದಂ (ನಿವೃತ್ತ ಐಎಎಸ್ ಅಧಿಕಾರಿ), ಸಬಿತಾ ಇಂದ್ರಾರೆಡ್ಡಿ (ತೆಲಂಗಾಣದ ಮಾಜಿ ಸಚಿವೆ ಹಾಗೂ ಹಾಲಿ ಶಾಸಕಿ), ವೈ. ಶ್ರೀಲಕ್ಷ್ಮಿ (2022ರಲ್ಲಿ ಸೇವೆಯಿಂದ ಬಿಡುಗಡೆಯಾದ ಐಎಎಸ್ ಅಧಿಕಾರಿ) ಮತ್ತು ದಿವಂಗತ ಆರ್. ಲಿಂಗಾ ರೆಡ್ಡಿ (ಅಂದಿನ ಗಣಿ ಇಲಾಖೆಯ ಸಹಾಯಕ ನಿರ್ದೇಶಕ) ಈ ಪ್ರಕರಣದ ಆರೋಪಿಗಳಾಗಿದ್ದಾರೆ. ಇವರ ವಿರುದ್ಧ ಐಪಿಸಿ ಸೆಕ್ಷನ್ 120 ಬಿ, 420, 409, 468 ಮತ್ತು 471 ಹಾಗೂ ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 13(2) ಜೊತೆಗೆ 13(1)(ಡಿ) ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

2009 ರಲ್ಲಿ ಸಿಬಿಐ ಒಎಂಸಿ ಕಂಪನಿಯ ಅಕ್ರಮ ಗಣಿಗಾರಿಕೆ ಆರೋಪ ಸಂಬಂಧ ತನಿಖೆ ಪ್ರಾರಂಭಿಸಿತ್ತು. ವೈ.ಎಸ್. ರಾಜಶೇಖರ ರೆಡ್ಡಿ ಅವಿಭಜಿತ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದ

(2ನೇ ಪುಟ ನೋಡಿ)

## ಪಹಲ್ಗಾಮ್ ದಾಳಿಗೆ 3 ದಿನ ಮೊದಲೇ ಮೋದಿಗೆ ಮಾಹಿತಿ ಇತ್ತು, ಹೀಗಾಗಿ ಕಾಶ್ಮೀರ ಭೇಟಿ ರದ್ದು:ಖರ್ಗೆ ಆರೋಪ



ಮಲ್ಲಮ್ಮನುಡಿವಾರ್ತೆ ರಾಂಚಿ:ಮೇ.6: ಕಳೆದ ತಿಂಗಳು ಪಹಲ್ಗಾಮ್ ನಲ್ಲಿ ನಡೆದ ಭಯೋತ್ಪಾದಕ ದಾಳಿಯ ಬಗ್ಗೆ "ಮೂರು ದಿನ ಮೊದಲೇ" ಗುಪ್ತಚರ ವರದಿಯನ್ನು ಸ್ವೀಕರಿಸಿದ ನಂತರ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಕಾಶ್ಮೀರ ಭೇಟಿಯನ್ನು ರದ್ದುಗೊಳಿಸಿದ್ದಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಂಗಳವಾರ ಗಂಭೀರ ಆರೋಪ ಮಾಡಿದ್ದಾರೆ.

ಸರ್ವಪಕ್ಷ ಸಭೆಯಲ್ಲಿ ಕೇಂದ್ರ ಸರ್ಕಾರ "ಗುಪ್ತಚರ ವೈಫಲ್ಯ"ವನ್ನು ಒಪ್ಪಿಕೊಂಡಿದೆ. ದಾಳಿ ಬಗ್ಗೆ ಅವರಿಗೆ ಮಾಹಿತಿ ಇದ್ದರೂ, ಅವರು ಏಕೆ ಭದ್ರತೆಯನ್ನು ಹೆಚ್ಚಿಸಲಿಲ್ಲ?. ದಾಳಿಗೆ ಮೂರು ದಿನಗಳ ಮೊದಲು ಪ್ರಧಾನಿ ಮೋದಿಗೆ ಗುಪ್ತಚರ ವರದಿಯನ್ನು ಕಳುಹಿಸಲಾಗಿದೆ. ಆದ್ದರಿಂದ ಅವರು ಕಾಶ್ಮೀರಕ್ಕೆ ಭೇಟಿ ನೀಡುವ ತಮ್ಮ ಕಾರ್ಯಕ್ರಮವನ್ನು ರದ್ದುಗೊಳಿಸಿದರು ಎಂಬುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ." ಎಂದು ಖರ್ಗೆ ಹೇಳಿದ್ದಾರೆ.

ಪ್ರಧಾನಿ ಮೋದಿ ಕಾಶ್ಮೀರ ಭೇಟಿ ರದ್ದುಗೊಳಿಸಿದರು. ಆದರೆ ಅಮಾಯಕರು ಬಲಿಯಾದರು. ಜನರನ್ನು ರಕ್ಷಿಸಲು ಕಾಶ್ಮೀರದಲ್ಲಿ ಭದ್ರತೆಯನ್ನು ಹೆಚಿಸಲಿಲ್ಲ. ಅವರು ಭದ್ರತಾ ವೈಫಲ್ಯದ ಹೊಣೆ ಹೊರಬೇಕು ಎಂದು ಕಾಂಗ್ರೆಸ್ ಅಧ್ಯಕ್ಷರು ಆಗ್ರಹಿಸಿದರು.

"ನಿಮ್ಮ ಭದ್ರತೆ ದೃಷ್ಟಿಯಿಂದ ನೀವು ಅಲ್ಲಿಗೆ ಭೇಟಿ ನೀಡುವುದು ಸೂಕ್ತವಲ್ಲ ಎಂದು ಗುಪ್ತಚರ ವರದಿ ಹೇಳಿದಾಗ, ಜನರನ್ನು ರಕ್ಷಿಸಲು ನೀವು ಭದ್ರತಾ ಪಡೆ, ಗುಪ್ತಚರ ಸಂಸ್ಥೆಗಳು, ಸ್ಥಳೀಯ ಪೊಲೀಸರು ಮತ್ತು ಗಡಿ ಪಡೆಗೆ ಏಕೆ ತಿಳಿಸಲಿಲ್ಲ? ನಿಮಗೆ ಮಾಹಿತಿ ಸಿಕ್ಕಾಗ, ನೀವು ನಿಮ್ಮ ಕಾರ್ಯಕ್ರಮವನ್ನು ರದ್ದುಗೊಳಿಸಿದ್ದೀರಿ. ಆದರೆ ಅಲ್ಲಿ ಬಲಿಯಾದ ಅಮಾಯಕ ಪ್ರವಾಸಿಗರನ್ನು ರಕ್ಷಿಸಲು ಹೆಚ್ಚಿನ ಪಡೆಗಳನ್ನು ಏಕೆ ಕಳುಹಿಸಲಿಲ್ಲ?" ಎಂದು ಖರ್ಗೆ ಪ್ರಶ್ನಿಸಿದ್ದಾರೆ.

ಜಾರ್ಖಂಡ್‌ನ ರಾಂಚಿಯಲ್ಲಿ ನಡೆದ 'ಸಂವಿಧಾನ್ ಬಚಾವೋ' ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಅಧ್ಯಕ್ಷರು, "ಸರ್ವಪಕ್ಷ ಸಭೆಯಲ್ಲಿ, ನೀವು (ಪ್ರಧಾನಿ ಮೋದಿ) ಗುಪ್ತಚರ ವೈಫಲ್ಯವನ್ನು ಒಪ್ಪಿಕೊಂಡಿದ್ದೀರಿ" ಎಂದು ಹೇಳಿದರು."ಗುಪ್ತಚರ ವೈಫಲ್ಯವನ್ನು ಒಪ್ಪಿಕೊಂಡಾಗ

ಪಹಲ್ಗಾಮ್ ದಾಳಿಯ ಜೀವಹಾನಿಗೆ ಕೇಂದ್ರವೇ ಹೊಣೆಗಾರನಾಗಬೇಕಲ್ಲವೇ" ಎಂದು ಖರ್ಗೆ ಪ್ರಶ್ನಿಸಿದರು.

"ಪಹಲ್ಗಾಮ್ ದಾಳಿಯ ನಂತರ ಪಾಕಿಸ್ತಾನದ ವಿರುದ್ಧ ಯಾವುದೇ ಕ್ರಮಕ್ಕೆ" ಕಾಂಗ್ರೆಸ್ ಕೇಂದ್ರದ ಬೆಂಬಲಕ್ಕೆ ನಿಲ್ಲುತ್ತದೆ ಎಂದು ಖರ್ಗೆ ಘೋಷಿಸಿದರು. ಏಕೆಂದರೆ ದೇಶ "ಪಕ್ಷ, ಧರ್ಮ ಮತ್ತು ಜಾತಿಯನ್ನು ಮೀರಿದ್ದು ಮತ್ತು ಸರ್ವೋಚ್ಚ" ಎಂದರು.

## ರಾಯಚೂರ ಸೇರಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕುಡಿವ ನೀರು ಪೂರೈಕೆ ಸಮರ್ಪಕವಾಗಿರಲಿ: ಸಿದ್ದರಾಮಯ್ಯ

ಮಲ್ಲಮ್ಮನುಡಿವಾರ್ತೆ ರಾಯಚೂರು :ಮೇ 06 : ಬಿಸಿಲಿನ ತಾಪಮಾನ ಅತೀ ಹೆಚ್ಚು ಇರುವ ರಾಯಚೂರ ಜಿಲ್ಲೆ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಎಲ್ಲಾ ಜಿಲ್ಲೆಗಳಲ್ಲಿ ಸಹ ಸಾರ್ವಜನಿಕರಿಗೆ ಸಮರ್ಪಕವಾಗಿ ಕುಡಿಯುವ ನೀರಿನ ಸರಬರಾಜಿಗೆ ವ್ಯವಸ್ಥೆ ಮಾಡಬೇಕು ಎಂದು ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ ಅವರು ಹೇಳಿದರು.ಮೇ 05ರಂದು, ಸಂಜೆ ರಾಜ್ಯದ ವಿವಿಧ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಾಕ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿ, ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಪರಿಸ್ಥಿತಿಯ ಕುರಿತು ಚರ್ಚಿಸಿದರು.ಕಳೆದ ವರ್ಷಕ್ಕಿಂತ ಈ ವರ್ಷ ಕುಡಿಯುವ ನೀರಿನ ಅಭಾವ ಕಡಿಮೆ ಇದೆ. ಆದರು ಸಹ ಅಗತ್ಯ ಇರುವ ಕಡೆಗೆ ಟ್ಯಾಂಕರ್ ಮುಖಾಂತರ ಹಾಗೂ ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆ ಪಡೆದು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದರು.

ಕುಡಿಯುವ ನೀರಿನ ಸಲುವಾಗಿ ಯಾವುದೇ ಜಿಲ್ಲೆಯಲ್ಲಿ ಹಣದ ಕೊರತೆ ಇಲ್ಲ. ಆದ್ಯತೆ ಮೇರೆಗೆ ಜನತೆಗೆ ಕುಡಿಯುವ ನೀರನ್ನು ಒದಗಿಸಬೇಕು. ಗ್ರಾಮ ಪಂಚಾಯಿತಿ ವ್ಯಾಪ್ತಿಯ ತೆರಿಗೆ ಸಂಗ್ರಹಣೆಯಲ್ಲಿ ಶೇಕಡ 30ರಷ್ಟು ತೆರಿಗೆ ಹಣವನ್ನು ಕುಡಿಯುವ ನೀರಿಗೆ ಬಳಸಕೊಂಡು ಕುಡಿಯುವ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು ಎಂದು ಮುಖ್ಯಮಂತ್ರಿಗಳು ಸಲಹೆ ಮಾಡಿದರು.ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ತುಕಾರಾಂ ಪಾಂಡ್ವೆ, ರಾಯಚೂರು ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹಪಾತ್ರ, ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ, ರಾಯಚೂರು ಸಹಾಯಕ ಆಯುಕ್ತರಾದ ಗಜಾನನ ಬಾಳೆ, ಜಿಲ್ಲಾ ಪಂಚಾಯತ್ ಯೋಜನಾ

(2ನೇ ಪುಟ ನೋಡಿ)



## ಒಂದನೇ ಪುಟದಿಂದ

# ಶಾಸಕ ಜನಾರ್ದನ ರೆಡ್ಡಿಗೆ 7 ವರ್ಷ ಜೈಲು

ಅವಧಿಯಲ್ಲಿ ಗಾಲಿ ಜನಾರ್ದನ ರೆಡ್ಡಿ ಅವರ ಓಎಂಸಿ ಕಂಪನಿಗೆ ಓಬಳಾಪುರಂ ಮತ್ತು ಡಿ. ಹಿರೇಹಾಳದಲ್ಲಿ ಕ್ರಮವಾಗಿ 68.5 ಹೆಕ್ಟೇರ್ ಮತ್ತು 39.5 ಹೆಕ್ಟೇರ್ ಪ್ರದೇಶದಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆ ಗುತ್ತಿಗೆ ನೀಡುವಲ್ಲಿ ಅಕ್ರಮ ನಡೆದಿದೆ ಎಂದು ಆರೋಪ ಕೇಳಿ ಬಂದಿತ್ತು. ಅಂದಿನ ಗಣಿ ಇಲಾಖೆಯ ಸಹಾಯಕ ನಿರ್ದೇಶಕ ಲಿಂಗಾ ರೆಡ್ಡಿ ಕಬ್ಬಿಣದ ಅದಿರು ಗಣಿಗಾರಿಕೆ ಗುತ್ತಿಗೆ ನೀಡುವ ವೇಳೆ 23 ಅರ್ಜಿದಾರರನ್ನು ನಿರ್ಲಕ್ಷಿಸಿ, ಓಎಂಸಿ ಕಂಪನಿಗೆ ಗುತ್ತಿಗೆ ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂಬ ಆರೋಪ ಇದೆ.

# ಕುಡಿವ ನೀರು ಪೂರೈಕೆ ಸಮರ್ಪಕವಾಗಿರಲಿ: ಸಿದ್ದರಾಮಯ್ಯ




ನಿರ್ದೇಶಕರಾದ ಶರಣಬಸವರಾಜ ಕೆಸರಟ್ಟಿ, ರಾಯಚೂರು ತಹಶೀಲ್ದಾರ್ ಸುರೇಶ ವರ್ಮ, ದೇವದುರ್ಗ ತಹಶೀಲ್ದಾರ್ ಚನ್ನಮಲ್ಲಪ್ಪ ಘಂಟಿ, ಕೃಷಿ ಇಲಾಖೆ ಜಂಟಿ ನಿರ್ದೇಶಕರಾದ ಜಯಪ್ರಕಾಶ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಚಿದಾನಂದ ಸೇರಿದಂತೆ ವಿವಿಧ ತಾಲೂಕಿನ ತಹಶೀಲ್ದಾರಗಳು ಹಾಗೂ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಇದ್ದರು.

# ಭೀಕರ ಅಪಘಾತ: ಐವರ ಸಾವು

ಹುಬ್ಬಳ್ಳಿ,ಮೇ6-ಲಾರಿ ಮತ್ತು ಕಾರಿನ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಐವರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಹುಬ್ಬಳ್ಳಿ,ವಿಜಯಪುರ ರಾಷ್ಟ್ರೀಯ ಹೆದ್ದಾರಿಯ ಇಂಗಳಹಳ್ಳಿ ಕ್ರಾಸ್ ಬಳಿ ಸಂಭವಿಸಿದೆ.ಮೃತರನ್ನು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಶ್ವೇತ (29), ಅಂಜಲಿ (26), ಸಂದೀಪ್ (26), ವಿಠ್ಠಲ್ (55) ಹಾಗೂ ಶಶಿಕಲಾ (40) ಎಂದು ಗುರುತಿಸಲಾಗಿದೆ.ವಿಜಯಪುರ ಕಡೆಯಿಂದ ಹುಬ್ಬಳ್ಳಿಗೆ ಬರುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ ಎದುರುಗಡೆ ಬರುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ.

ಡಿಕ್ಕಿಯ ರಭಸಕ್ಕೆ ಕಾರಿನಲ್ಲಿದ್ದ ಐವರು ಸ್ಥಳದಲ್ಲೇ ಅಸುನೀಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಹೋಟೆಲ್ ವ್ಯಾಪಾರಕ್ಕೆಂದು ಬಾಗಲಕೋಟೆಗೆ ತೆರಳಿದ್ದರು. ವಾಪಾಸ್ ಬರುವ ವೇಳೆ ಹುಬ್ಬಳ್ಳಿ ಮಾರ್ಗವಾಗಿ ಶಿವಮೊಗ್ಗ ಕಡೆ ಬರುವಾಗ ಈ ಅಪಘಾತ ಸಂಭವಿಸಿದೆ.

## ರಸ್ತೆ ಮೇಲೆ ಪಾಕ್ ಧ್ವಜ ಅಂಟಿಸಿ ಪ್ರತಿಭಟಿಸಿದವರಿಗೆ ನೋಟಿಸ್!

ಮಲ್ಲಮ್ಮನುಡಿ ವಾರ್ತೆ ಬೀದರ. ಮೇ. 06 : ಪಹಲ್ಗಾಮ್ ಪೈಶಾಚಿಕ ಕೃತ್ಯ ಖಂಡಿಸಿ, ರಸ್ತೆ ಮೇಲೆ ಪಾಕ್ ಧ್ವಜ ಅಂಟಿಸಿ ಪ್ರತಿಭಟಿಸಿದವರಿಗೆ ನೋಟಿಸ್ ನೀಡಲಾಗಿದ್ದು, ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ. ಬೀದರ್ ನ ಮಾರ್ಕೆಟ್ ಪೊಲೀಸರು, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸಂತೋಷ್ ಬಿರಾದಾರ್ ಗೆ ಮೇ 7ರಂದು ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿದ್ದಾರೆ. ಪಹಲ್ಗಾಮ್ ಕೃತ್ಯ ಖಂಡಿಸಿ ಏ. 26ರಂದು ಬೀದರ್‌ನ ಅಂಬೇಡ್ಕರ್ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಈ ವೇಳೆ ಪಾಕಿಸ್ತಾನ ಧ್ವಜದ ಪೋಸ್ಟರ್ ಅಂಟಿಸಿ ಆಕ್ರೋಶ ಹೊರಹಾಕಿದ್ದರು. ಹೀಗಾಗಿ ಸಂತೋಷ್ ಬಿರಾದಾರ್‌ಗೆ ನೋಟಿಸ್ ನೀಡಲಾಗಿದೆ. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 35(3)ರಡಿ ಪೊಲೀಸರು ನೋಟಿಸ್ ನೀಡಿದ್ದಾರೆ. ಆದರೆ, ಇದಕ್ಕೆ ಬಿಜೆಪಿ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಪೊಲೀಸರ ನೋಟಿಸ್ ಶೇರ್ ಮಾಡಿ ಆಕ್ರೋಶ ಹೊರ ಹಾಕಿದ್ದಾರೆ. ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದವರ ವಿರುದ್ಧ ಕ್ರಮ ಕೈಗೊಳ್ಳಲಿಲ್ಲ. ದೇಶಭಕ್ತನಾಗಿ, ಶತ್ರು ರಾಷ್ಟ್ರದ ವಿರುದ್ಧ ಪ್ರತಿಭಟನೆ ಮಾಡಿದರೆ ತಪ್ಪೇನು? ಎಂದು ಪ್ರಶ್ನಿಸಿ ಆಕ್ರೋಶ ಹೊರ ಹಾಕಿದ್ದಾರೆ. ಸಿಎಂ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ನಾಯಕರಿಗೆ ಟ್ಯಾಗ್ ಮಾಡಿ ಬಿಜೆಪಿ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

# ಪಾಕಿಸ್ತಾನಿಯರ ಜೊತೆ ವಿವಾಹ ಸಂಬಂಧ:ಹೊರಟ್ಟಿ ಅಸಮಾಧಾನ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.6-ಭಾರತೀಯರು ಪಾಕಿಸ್ತಾನಿ ಮಹಿಳೆಯರ ಜೊತೆ ವಿವಾಹ ಸಂಬಂಧ ಬೆಳೆಸುತ್ತಿರುವ ವಿಷಯಕ್ಕೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾರತೀಯರ ಜೊತೆ ಪಾಕಿಸ್ತಾನಿಯರು ಸಂಬಂಧ ಬೆಳೆಸುವುದರ ಉದ್ದೇಶವೇ ಬೇರೆಯಾಗಿರುತ್ತದೆ. ಭಾರತಕ್ಕೆ ಏನಾದರೂ ಧಕ್ಕೆ ಮಾಡಬೇಕು



ಎಂಬುದೇ ಅವರ ಮೂಲ ಉದ್ದೇಶವಾಗಿರುತ್ತದೆ ಎಂದರು.

ಯಾಕೆ ಭಾರತೀಯರಿಗೆ ನಮ್ಮಲ್ಲಿ ಗಂಡು-ಹೆಣ್ಣು ಸಿಗುವುದಿಲ್ಲವಾ, ಅಲ್ಲಿಯವರನ್ನೇಕೆ ವಿವಾಹ ಮಾಡಿಕೊಳ್ಳಬೇಕು ಎಂದು ಪ್ರಶ್ನಿಸಿದ ಅವರು, ಅಲ್ಲಿಯ ಸಂಬಂಧ ಬೆಳೆಸುವ ಅವಶ್ಯಕತೆಯೇನಿದೆ. ಅವರು ಉಗ್ರಗಾಮಿ(ಟೆರರಿಸ್ಟ್)ಚಟುವಟಿಕೆಗಳಲ್ಲಿ ತೊಡಗಿರುವಾಗ ನಾವುಗಳು ಅವರ ಜೊತೆ ಸಂಬಂಧ ಬೆಳೆಸುವುದು ಸರ್ವತಾ ಸರಿಯಲ್ಲ ಎಂದು ಹೇಳಿದರು. ನಮ್ಮ ಸಿ.ಆರ್.ಪಿ.ಎಫ್ ಯೋಧನ ಪತ್ನಿ ಪಾಕಿಸ್ತಾನ ಪ್ರಜೆಯಾಗಿರುವ ವಿಚಾರವಾಗಿ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಹೊರಟ್ಟಿ, ಇದೊಂದು ಪ್ರಕರಣ ಈಗ ಸಿಕ್ಕಿದೆ. ಇಂತಹ ಇನ್ನೆಷ್ಟೋ ಪ್ರಕರಣಗಳು ಇರಬಹುದು. ನಮ್ಮ ಇಂಟಲಿಜೆನ್ಸಿ ಸಂಪೂರ್ಣ ವಿಫಲವಾಗಿದೆ. ಇದೆಲ್ಲಗೊತ್ತಿದ್ದರೂ ಅವರು ಸುಮ್ಮನಿರುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

# ಜಾತಿ ವಿಚಾರ- ಜೇನುಗೂಡಿಗೆ ಕೈ ಹಾಕಿದಂತೆ:ಬಸವರಾಜ ಹೊರಟ್ಟಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.6-ಯಾರೇ ಅಧಿಕಾರದಲ್ಲಿದ್ದರೂ ಜಾತಿ ಸಮೀಕ್ಷಾ ವರದಿ ಮತ್ತು ಒಳ ಮೀಸಲಾತಿ ಸಮೀಕ್ಷೆ ವಿಚಾರಕ್ಕೆ ಕೈ ಹಾಕಿದರೇ ಅದು ಜೇನುಗೂಡಿಗೆ ಕೈ ಹಾಕಿದಂತೆ. ಸುಮ್ಮನೇ ಇದನ್ನು ಮಾಡುವುದು ಸರಿಯಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು. ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ಮೀಸಲಾತಿಯಿರಲಿ ಶೇ.50ಕ್ಕಿಂತ ಹೆಚ್ಚು ಪ್ರಮಾಣ ಇರಬಾರದು ಅಂತ ಸುಪ್ರೀಂಕೋರ್ಟ ಹೇಳಿದೆ. ಹೀಗಾಗಿ ಇದೆಲ್ಲ ಒಂದಕ್ಕೊಂದು ಜಗಳಕ್ಕೆ ಕಾರಣವಾಗಿ ನಾಳೆ ಗಂಭೀರ ಚಿಂತನೆಗೆ ಒಳಗಾಗುತ್ತದೆ. ಇಂತಹ ಸಂದರ್ಭದಲ್ಲಿ ಜಾತಿ ಸಮೀಕ್ಷೆ ಮಾಡುವುದು ಅವಶ್ಯಕತೆ ಇರಲಿಲ್ಲ ಅಂತ ನನ್ನ ವೈಯಕ್ತಿಕ ಅಭಿಪ್ರಾಯ ಎಂದರು. ಎಲ್ಲಿಯತನಕ ದುಡ್ಡು ಕೊಟ್ಟು ಹಾಗೂ ಪಡೆದು ಓಟ ಪಡೆಯುವ ಪ್ರಕ್ರಿಯೆ ನಡೆಯುತ್ತದೆಯೋ ಆತನಕ ಕೆಟ್ಟ ಪರಿಸ್ಥಿತಿ ಇದ್ದದ್ದೇ. ನಮ್ಮ ಪ್ರಜಾಪ್ರಭುತ್ವಗಟ್ಟಿಯಾಗಬೇಕೆಂದರೆ ಮತದಾನ ನ್ಯಾಯಯುತವಾಗಿ ಆಗಬೇಕು ಎಂದ ಹೊರಟ್ಟಿ, ದೇಶದಲ್ಲಿ ಪುಕ್ಕಟ್ಟೆ ಕೊಡುವ ಯೋಜನೆಗಳಿಂದಾಗಿ ದೇಶವಾಗಲಿ, ರಾಜ್ಯಗಳಾಗಲಿ ಉದ್ಧಾರವಾಗೋದಿಲ್ಲ. ಇದರಿಂದ ಆರ್ಥಿಕ ಪರಿಸ್ಥಿಯ ಮೇಲೂ ವ್ಯತಿರಿಕ್ತ ಪರಿಣಾಮವಾಗುತ್ತದೆ ಎಂದು ಹೇಳಿದರು. ಸಿ.ಟಿ.ರವಿ ಹಾಗೂ ಸಚಿವೆ ಲಕ್ಷ್ಮೀ ಹೆಬ್ಬಾಳಕರ ನಡುವಿನ ಅವಾಚ್ಯ ಪದ ಬಳಕೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಬಸವರಾಜ ಹೊರಟ್ಟಿ, ಈ ಬಗ್ಗೆ ಇಬ್ಬರ ಜೊತೆ ಮಾತಾಡಿ ನನ್ನ ನಿರ್ಧಾರ ಕೊಟ್ಟಿದ್ದೇನೆ. ಸಧ್ಯ ನೀತಿ ನಿರೂಪಣಾ ಸಮಿತಿಯಲ್ಲಿದೆ. ಅಲ್ಲಿ ಏನಾಗುತ್ತದೋ ನೋಡೋಣ ಎಂದರು. ಬಿಟಿಡಿಎ ಅಧ್ಯಕ್ಷ, ಶಾಸಕ ಎಚ್.ವೈ.ಮೇಟಿ, ರೆಡ್ ಕ್ರಾಸ್ ಸಂಸ್ಥೆಯ ಚೇರಮನ್ ಆನಂದ ಜಿಗಜಿನ್ನಿ, ಪ್ರಕಾಶ ಜಿಗಜಿನ್ನಿ, ವಿನೋದ ಜಿಗಜಿನ್ನಿ, ಪ್ರಮೋದ ಜಿಗಜಿನ್ನಿ ಇದ್ದರು.

# ನಾಳೆ ಮೊಳಗಲಿದೆ ಯುದ್ಧದ ಸೈರನ್: ರಾಜ್ಯದ ಮೂರು ಸ್ಥಳಗಳಲ್ಲಿ ಮಾಕ್ ಡ್ರಿಲ್

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಮೇ.6: ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಪಾಕಿಸ್ತಾನದ ವಿರುದ್ಧ ಭಾರತ ಯುದ್ಧಕ್ಕೆ ಸನ್ನದ್ಧವಾಗಿದ್ದು, ಮೇ 7ರಂದು ಮಾಕ್ ಡ್ರಿಲ್ ನಡೆಸುವಂತೆ ನಡೆಸುವಂತೆ ಕೇಂದ್ರ ಗೃಹ ಸಚಿವಾಲಯವು ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಿಗೆ ಸೂಚಿಸಿದೆ. ಈ ಹಿನ್ನೆಲೆಯಲ್ಲಿ ನಾಳೆ ಬೆಂಗಳೂರು, ಕಾರವಾರ ಮತ್ತು ರಾಯಚೂರಿನಲ್ಲಿ ಅಣಕು ಕವಾಯತುಗಳು ನಡೆಯಲಿವೆ. ಈ ಕುರಿತು ಮಾಹಿತಿ ನೀಡಿದ ಡಿಜೆಪಿ ಪ್ರಶಾಂತ್ ಕುಮಾರ್ ಠಾಕೂರ್ ಅವರು, ಈ ಕವಾಯತುಗಳು ಒಂದು ವಾರ ಮುಂದುವರಿಯಲಿವೆ ಮತ್ತು ಸನ್ನದ್ಧತೆ ಹಾಗೂ ಸಂಪನ್ಮೂಲಗಳಲ್ಲಿನ ಅಂತರವನ್ನು ಗುರುತಿಸುವ ಮತ್ತು ಪರಿಹರಿಸುವ ಗುರಿಯನ್ನು ಹೊಂದಿದೆ ಎಂದು ಹೇಳಿದರು. "ಬೆಂಗಳೂರು ನಗರ ಸೇರಿದಂತೆ ರಾಜ್ಯದ ಮೂರು ಸ್ಥಳಗಳಲ್ಲಿ ಅಣಕು ಕವಾಯತುಗಳು ನಡೆಯಲಿವೆ. ಬೆಂಗಳೂರು ಹಲವಾರು ರಕ್ಷಣಾ ಕಚೇರಿಗಳನ್ನು ಹೊಂದಿರುವ ಮಹಾನಗರ ಪ್ರದೇಶವಾಗಿದೆ ಮತ್ತು ಬಹಳ ಸೂಕ್ಷ್ಮ ಜಿಲ್ಲೆಯಾಗಿದೆ" ಎಂದು ಠಾಕೂರ್ ತಿಳಿಸಿದರು. "ಎರಡನೇ ಸ್ಥಳ ಉತ್ತರ ಕನ್ನಡ ಜಿಲ್ಲೆಯ ಕಾರವಾರವಾಗಿದ್ದು, ಅದು ಕೈಗಾ ಪರಮಾಣು ವಿದ್ಯುತ್ ಸ್ಥಾವರದ ನೆಲೆಯಾಗಿದೆ. ಮೂರನೆಯದು ರಾಯಚೂರು, ಅಲ್ಲಿ ಉಷ್ಣ ವಿದ್ಯುತ್ ಸ್ಥಾವರ ಇರುವುದರಿಂದ ಆಯ್ಕೆ ಮಾಡಲಾಗಿದೆ" ಎಂದು ಅವರು ಹೇಳಿದರು.

"ನಾವು ಕೇಂದ್ರ ಗೃಹ ಸಚಿವಾಲಯದೊಂದಿಗೆ ಮಾಕ್ ಡ್ರಿಲ್ ಘಟಕಗಳ ಬಗ್ಗೆ ಚರ್ಚಿಸಿದ್ದೇವೆ. ಸೈರನ್‌ಗಳು ಈ ಕವಾಯತಿನ ಏಕೈಕ ಅಂಶವಲ್ಲ" ಎಂದು ಅವರು ಸ್ಪಷ್ಟಪಡಿಸಿದರು. ಈ ಮಾಕ್ ಡ್ರಿಲ್ ಆಸ್ಪತ್ರೆಗಳನ್ನು ಸಜ್ಜುಗೊಳಿಸುವುದು, ಪರಿಹಾರ ಪ್ರಯತ್ನಗಳು ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ಸಹ ಒಳಗೊಂಡಿದೆ. ಬೆಂಗಳೂರಿನಲ್ಲಿ ವೈದ್ಯರು, ವಿದ್ಯಾರ್ಥಿಗಳು, ಎನ್‌ಸಿಸಿ ಕೆಡೆಟ್‌ಗಳು ಮತ್ತು ಇತರರು ಸೇರಿದಂತೆ ಸುಮಾರು 5,000 ನಾಗರಿಕ ರಕ್ಷಣಾ ಸಿಬ್ಬಂದಿಗಳಿದ್ದು, ಅವರೆಲ್ಲರು ಈ ಮಾಕ್ ಡ್ರಿಲ್ ನಲ್ಲಿ ಭಾಗವಹಿಸುತ್ತಾರೆ. ನಾಳೆ ಸಂಜೆ 4 ಗಂಟೆಗೆ ಡ್ರಿಲ್ ನಡೆಯಲಿದೆ ಎಂದು ಠಾಕೂರ್ ಹೇಳಿದರು. ವಿವಿಧ ಪೊಲೀಸ್ ಮತ್ತು ಅಗ್ನಿಶಾಮಕ ಠಾಣೆಗಳಲ್ಲಿ ಸೈರನ್‌ಗಳನ್ನು ಸ್ಥಾಪಿಸಲಾಗಿದೆ. ಬೆಂಗಳೂರಿನಲ್ಲಿ, 35 ಸೈರನ್‌ಗಳನ್ನು ನಿಯೋಜಿಸಲಾಗಿದ್ದು, ಅವುಗಳಲ್ಲಿ 32 ಕಾರ್ಯನಿರ್ವಹಿಸುತ್ತಿವೆ, ಪ್ರತಿಯೊಂದೂ ಸುಮಾರು 3 ಕಿ.ಮೀ ವ್ಯಾಪ್ತಿಯನ್ನು ಹೊಂದಿದೆ ಎಂದು ಅವರು ತಿಳಿಸಿದರು. "ಸೈರನ್ ಕೇಳಿದಾಗ ಜನರು ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಿಳಿದಿರಬೇಕು. ಈ ಕುರಿತು ದೆಹಲಿಯಿಂದ ಔಪಚಾರಿಕ ಮಾರ್ಗಸೂಚಿಯನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಈ ಕವಾಯತಿಗೆ ಸಂಬಂಧಿಸಿದ ನಿರ್ಧಾರವನ್ನು ನಿನ್ನೆ ದೆಹಲಿಯಲ್ಲಿ ತೆಗೆದುಕೊಳ್ಳಲಾಗಿದೆ ಮತ್ತು ನಿನ್ನೆ ರಾತ್ರಿ ನಮಗೆ ಮಾಹಿತಿ ನೀಡಲಾಗಿದೆ" ಎಂದರು.

# ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಿ:ಡಾ.ಮಹೇಶ್ವರಪ್ಪ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.6-ಮಕ್ಕಳ ಬೆಳವಣಿಗೆಯಲ್ಲಿ ಶಿಕ್ಷಕರ ಪಾತ್ರ ಮಹತ್ವವಾಗಿದ್ದು, ಅವರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವಂತೆ ತೋಟಗಾರಿಕೆ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಡಾ.ಎಚ್.ಪಿ.ಮಹೇಶ್ವರಪ್ಪ ಕರೆ ನೀಡಿದರು. ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಅಜೀಂ ಪ್ರೇಮಜಿ ಫೌಂಡೇಶನ್ ಸಹಯೋಗದಲ್ಲಿ ಸರಳ ವಿಜ್ಞಾನ ಪ್ರಯೋಗಾಲಯ ಕುರಿತು ಶಿಕ್ಷಕರಿಗೆ ಹಮ್ಮಿಕೊಂಡ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಕರು ಕಾರ್ಯಾಗಾರದ ಸದುಪಯೋಗವನ್ನು ಪಡೆದು-ಕೊಂಡು ಮಕ್ಕಳ ವೈಜ್ಞಾನಿಕ ಮನೋಭಾವ ಬೆಳೆಸಲು ಮುಂದಾಗಬೇಕು ಎಂದರು.

ಅಜೀಂಪ್ರೇಮ್‌ಜಿಫೌಂಡೇಶನ್‌ನ ವತಿಯಿಂದ ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಶ್ರೀಕಾಂತ ಮತ್ತು ಅರುಣಕುಮಾರ್ ಶಿಕ್ಷಕರಿಗಾಗಿ ವಿವಿಧ ಚಟುವಟಿಕೆಗಳನ್ನು ನೀಡುವುದರ ಮೂಲಕ ಶಾಲಾ ವಾತಾವರಣದಲ್ಲಿ ಸರಳ ವಿಜ್ಞಾನ ಪ್ರಯೋಗಾಲಯವನ್ನು ನಿರ್ಮಿಸುವ ಬಗ್ಗೆ ಮಾಹಿತಿ ನೀಡಿದರು. ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ವಿಜ್ಞಾನ ಶಿಕ್ಷಕರು ಎಲ್ಲ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ, ತಾವು ಮಾಡಿದ ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ಸರಳ ರೀತಿಯಲ್ಲಿ ತಿಳಿಸುವ ಬಗ್ಗೆ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸುವ ಮೂಲಕ ವಿಸ್ತಾರವಾದ ಸಮಾಲೋಚನೆಯನ್ನು ನಡೆಸಿದರು. ಶಿಕ್ಷಕರಿಗೆ ಕೇಂದ್ರದಲ್ಲಿ ಸ್ಥಾಪಿಸಿರುವ ಒಳಾಂಗಣ ಮತ್ತು ಹೊರಾಂಗಣ ವಿಜ್ಞಾನ ಪ್ರದರ್ಶಿಕೆಗಳ ಪ್ರಾತ್ಯಕ್ಷಿಕೆ ನಡೆಸಲಾಯಿತು. ಕಾರ್ಯಾಗಾರದಲ್ಲಿ 35 ಜನ ಶಿಕ್ಷಕರು ಪಾಲ್ಗೊಂಡಿದ್ದರು. ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸಹಾಯಕ ಗಂಗನಗೌಡ ಪಾಟೀಲ, ಕ್ಯೂರೇಟರ್ ಈರಣ್ಣ ಬುಳ್ಳಾ, ತಾಂತ್ರಿಕ ಸಹಾಯಕ ಆಸೀಫ್ ಬಾಗವಾನ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಅಬಕಾರಿ ತನಿಖಾ ಕಾರ್ಯಕ್ಕೆ ನೂತನ ವಾಹನ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.6-ಅಬಕಾರಿ ಇಲಾಖೆಗೆ ಸರಕಾರ ನೀಡಿರುವ ಹೊಸ ವಾಹನಗಳ ಬಳಕೆಗೆ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಮಂಗಳವಾರ ಚಾಲನೆ ನೀಡಿದರು. ವಾಹನಗಳ ಬಳಕೆಗೆ ಚಾಲನೆ ನೀಡಿ ಮಾತನಾಡಿದ ಸಚಿವ ಆರ್.ಬಿ.ತಿಮ್ಮಾಪೂರ, ಜಿಲ್ಲಾ ವ್ಯಾಪ್ತಿಯಲ್ಲಿ ಚುರುಕಿನ ಜಾರಿ ಮತ್ತು ತನಿಖಾ ಕಾರ್ಯಕ್ರಮಗಳನ್ನು ಕೈಗೊಳ್ಳಲು ಮತ್ತು ಅಬಕಾರಿ ಅಕ್ರಮಗಳನ್ನು ತಡೆಗಟ್ಟಲು ಹೊಸ ವಾಹನಗಳು ಅನುಕೂಲವಾಗಲಿದೆ ಎಂದರು. ಈ ಸಂದರ್ಭದಲ್ಲಿ ಚಾಲಕ ಸಿಬ್ಬಂದಿಗಳಿಗೆ ಸಿಹಿ ವಿತರಿಸಲಾಯಿತು. ಅಬಕಾರಿ ಜಿಲ್ಲಾಧಿಕಾರಿ ಹನಮಂತಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು

# ಕಸಾಪ ಕನ್ನಡಿಗರ ಹೆಮ್ಮೆ, ಅಭಿಮಾನದ ಸಂಸ್ಥೆ:ಸಂಗಮೇಶ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.6-ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಹೆಮ್ಮೆಯ, ಅಭಿಮಾನದ ಸಂಸ್ಥೆಯಾಗಿದೆ ಎಂದು ಬಾಗಲಕೋಟೆ ಶಾಸಕರ ಮಾದರಿ ಶಾಲೆಯ ಮುಖ್ಯೋಪಾಧ್ಯಾಯ, ಸಾಹಿತಿ ಸಂಗಮೇಶ ಸಣ್ಣತಂಗಿ ಹೇಳಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕಸಾಪ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಕಸಾಪ 111ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಅತಿಥಿ ಉಪನ್ಯಾಸಕರಾಗಿ ಮಾತನಾಡಿದ ಅವರು, ಕನ್ನಡಿಗರ ಹಿತ ಕಾಪಾಡುವುದು, ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ, ನೆಲ, ಜಲ ಸಂರಕ್ಷಣೆ, ಇವುಗಳ ಬೆಳವಣಿಗೆ, ಕನ್ನಡ ಗ್ರಂಥಗಳನ್ನು ಪ್ರಕಟಿಸುವುದು, ಸಮ್ಮೇಳನಗಳ ಆಯೋಜನೆ, ಜನಜಾಗೃತಿ ಮೂಡಿಸುವ ಧ್ಯೇಯೋದ್ಧೇಶಗಳೊಂದಿಗೆ ಸದಾಕಾಲ ಕಸಾಪ ಕಾರ್ಯೋನ್ಮುಖವಾದ ಹೆಮ್ಮೆಯ ಸಂಸ್ಥೆಯಾಗಿದೆ ಎಂದರು. ನಾಡು ನುಡಿ ಒಳಿತಿಗಾಗಿ ವೈಶಿಷ್ಟಪೂರ್ಣ ಕಾರ್ಯಕ್ರಮಗಳನ್ನು, ಸಮ್ಮೇಳನಗಳನ್ನು ಆಯೋಜಿಸಿ ಜನಸಾಮಾನ್ಯರು ಕನ್ನಡ ಕಾರ್ಯಕ್ರಮಗಳಲ್ಲಿ ಭಾಗವಹಿಸುವ, ಕನ್ನಡಿಗರನ್ನು ಒಗ್ಗೂಡಿಸುವ ಕಾರ್ಯ ಮಾಡುತ್ತಿದೆ. ರಾಜ್ಯ, ಜಿಲ್ಲೆ, ತಾಲೂಕು, ಹೋಬಳಿ ಮಟ್ಟದಲ್ಲಿ ಕಸಾಪ ಘಟಕಗಳಿವೆ. ದೇಶ ವಿದೇಶಗಳಲ್ಲಿಯೂ ಕನ್ನಡಪರ ಕಾರ್ಯಕ್ರಮಗಳು ನಡೆಯುತ್ತಿವೆ ಎಂದು ಸಣ್ಣತಂಗಿ ಹೇಳಿದರು. ಶಿಕ್ಷಣ ಇಲಾಖೆಯ ನಿವೃತ್ತ ಉಪನಿರ್ದೇಶಕ ಎನ್.ಬಿ.ಗೊರವರ ಕಾರ್ಯಕ್ರಮ ಉದ್ಘಾಟಿಸಿ, ಕನ್ನಡ ಭಾಷೆ ಬೆಳವಣಿಗೆಗೆ ಕಂಕಣ ಬದ್ಧವಾಗಿ ಕನ್ನಡ ಸಾಹಿತ್ಯ ಪರಿಷತ್ತು ನಿರಂತರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಸ್ತುತ್ಯ ಕಾರ್ಯವಾಗಿದೆ. ಶಾಲಾ ಕಾಲೇಜುಗಳಲ್ಲಿಯೂ ಹಲವಾರು ಕಾರ್ಯಕ್ರಮಗಳ 'ನ್ನು ಹಮ್ಮಿಕೊಂಡು ಶಿಕ್ಷಕರು, ಮಕ್ಕಳು ಕನ್ನಡ ಭಾಷಾಭಿಮಾನ ಬೆಳೆಸಿಕೊಂಡು ಮಾತೃಭಾಷೆ ಮಹತ್ವ ಅರಿಯುವಂತೆ ಕಸಾಪ ಒಳ್ಳೆಯ ಕಾರ್ಯ ಮಾಡುತ್ತಿದೆ. ಸಾಧಕರನ್ನು, ಹಿರಿಯ ಸಾಹಿತಿಗಳನ್ನು ಗೌರವಿಸುವುದು. ಕೃತಿಗಳನ್ನು ಪ್ರಕಟಿಸುವುದು ಹೀಗೆ ಜಿಲ್ಲೆಯಲ್ಲಿ ಶೆಲ್ಲಿಕೇರಿಯವರ ನೇತೃತ್ವದಲ್ಲಿ ಕಸಾಪ ಕ್ರಿಯಾಶೀಲವಾಗಿ ಕಾರ್ಯ ಮಾಡುತ್ತಿರುವುದು ಗಮನಾರ್ಹವಾಗಿದೆ ಎಂದರು.

ಜಿಲ್ಲಾ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲೆಯಲ್ಲಿ ನಿರಂತರ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಜಿಲ್ಲಾ ಕಸಾಪ ಮುಂಚೂಣಿಯಲ್ಲಿದೆ. ಅಲಕ್ಷಿತ ಸಾಹಿತಿಗಳಿಗೆ, ಕಲಾವಿದರಿಗೆ ವೇದಿಕೆ ಒದಗಿಸಿಕೊಟ್ಟು ಪೂಜ್ಯರ, ಹಿರಿಯರ, ಹಿರಿಯ ಸಾಹಿತಿಗಳ ಮಾರ್ಗದರ್ಶನದೊಂದಿಗೆ ಜಿಲ್ಲಾ ಸಮ್ಮೇಳನಗಳು, ತಾಲ್ಲೂಕಾ ಸಮ್ಮೇಳನಗಳು, ಶಿಕ್ಷಕ-ಸಾಹಿತಿಗಳ ಸಮ್ಮೇಳನ, ವಿಭಾಗ ಮಟ್ಟದ ಸಾಂಸ್ಕೃತಿಕ ಸಮ್ಮೇಳನ ನಡೆದಿವೆ. ವಿಶ್ವವಿದ್ಯಾಲಯಗಳು, ಅಕಾಡೆಮಿಗಳ ಸಹಯೋಗದೊಂದಿಗೂ ಹತ್ತು ಹಲವು ಕಾರ್ಯಕ್ರಮಗಳನ್ನು ಜಿಲ್ಲೆಯ ವಿವಿಧೆಡೆ ನಡೆಸಲಾಗಿದೆ. ಜಿಲ್ಲೆಯಲ್ಲಿ ನಿರಂತರ ಕಾರ್ಯಕ್ರಮಗಳನ್ನು ಆಯೋಜಿಸಿ 30ಕ್ಕೂ ಹೆಚ್ಚು ಕೃತಿಗಳನ್ನು ಜಿಲ್ಲಾ ಕಸಾಪ ಪ್ರಕಟಿಸಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಶಿರೂರಿನ ಹಿರಿಯರಾದ ಎ.ಸಿ.ಚೌಕಿಮಠ, ಮಹಾಲಿಂಗಪುರದ ಹಿರಿಯ ಸಾಹಿತಿ ಗುರುರಾಜ ಖಾಸನೀಸ ಅವರನ್ನು ಸನ್ಮಾನಿಸಲಾಯಿತು. ಎ.ಸಿ.ಚೌಕಿಮಠ, ಗುರುರಾಜ ಖಾಸನೀಸ ಮಾತನಾಡಿದರು.

ಸಾಮೂಹಿಕವಾಗಿ ನಾಡಗೀತೆ ನೆರವೇರಿತು. ಕಸಾಪ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಿ.ಎಸ್.ನಾಗನೂರ ಸ್ವಾಗತಿಸಿದರು. ರಬಕವಿ-ಬನಹಟ್ಟಿ ತಾಲೂಕಾ ಕಸಾಪ ಅಧ್ಯಕ್ಷ ಮ.ಕೃ.ಮೇಗಾಡಿ ನಿರೂಪಿಸಿದರು. ಪ್ರಿಯಾ ಕಟ್ಟಿ ವಂದಿಸಿದರು. ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಆನಂದ ಹಲಕುರ್ಕಿ, ಆರ್.ಸಿ.ಚಿತ್ತವಾಡಗಿ, ಜಿಲ್ಲಾ ಕಸಾಪ ಮಹಿಳಾ ಪ್ರತಿನಿಧಿ ಜಯಶ್ರೀ ಮುರನಾಳ, ಪಿ.ಎ.ಚೌಕಿಮಠ ಇನ್ನಿತರರು ಪಾಲ್ಗೊಂಡಿದ್ದರು.

# ವಿದ್ಯಾರ್ಥಿಗಳು ಸಂಶೋಧನಾ ಮನೋಭಾವ ಬೆಳೆಸಿಕೊಳ್ಳಿ:ಡಾ.ಕಲ್ಯಾಣಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.6-ತಂತ್ರಜ್ಞಾನ ಯುಗದಲ್ಲಿರುವ ಪದವಿ ವಿದ್ಯಾರ್ಥಿಗಳು ಕೈಗೊಳ್ಳುವ ಕ್ಷೇತ ಕಾರ್ಯದ ಅಧ್ಯಯನ ನಿಕರತೆಯ ಆಕರಗಳಿಂದ ಕೂಡಿರಬೇಕು. ಆ ಮೂಲಕ ವಿದ್ಯಾರ್ಥಿಗಳು ತಮ್ಮ ಬದುಕಿನಲ್ಲಿ ಸಂಶೋಧನಾ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕಾದ ಅಗತ್ಯತೆ ಇದೆ ಎಂದು ಮೊಡಿಲಿಪಿ ತಜ್ಞ ಸಂಶೋಧಕ ಡಾ ಸಂಗಮೇಶ ಕಲ್ಯಾಣಿ ಹೇಳಿದರು.

ಗುಳೇದಗುಡ್ಡ ಸಮೀಪದ ಕೆಲವಡಿ ಗ್ರಾಮದಲ್ಲಿ ನಡೆದ ರಾಷ್ಟ್ರೀಯ ಸಂಶೋಧನಾ ವೇದಿಕೆ ಗುಳೇದಗುಡ್ಡ ಹಾಗೂ ನವನಗರ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಆಶ್ರಯದಲ್ಲಿ 2024 – 25ನೇ ಸಾಲಿನ ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿಗಳ ಕ್ಷೇತ್ರಕಾರ್ಯದಲ್ಲಿ "ಹಂಗರಗಿ ಹನ್ನೆರಡು: ಶಾಸನ ಮುಖಾಮುಖಿ ಕೆಲವಡಿ" ಎಂಬ ವಿಷಯದ ಮೇಲೆ ಕೆಲವಡಿ ಶಾಸನಗಳ ಪರಿಸರದಲ್ಲಿರುವ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ವಿಷಯ ಕುರಿತು ಅವರು ಮಾತನಾಡಿದರು.

ಬಾಗಲಕೋಟೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಅರುಣಕುಮಾರ ಗಾಳಿ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಜಿ.ಜಿ.ಹಿರೇಮಠ ಅವರ ಸೂಕ್ತ ಮಾರ್ಗದರ್ಶನದೊಂದಿಗೆ ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಗ್ರಾಮೀಣ ಪರಿಸರದಲ್ಲಿ ದೊರೆಯುವ ಶಾಸನಗಳಲ್ಲಿ ಹಾಗೂ ಮೌಖಿಕ ಪರಂಪರೆಯಿಂದ ದೊರೆಯುವ ಐತಿಹಾಸಿಕ, ರಚನಾತ್ಮಕ, ಸಾಂಸ್ಕೃತಿಕ, ಸಾಹಿತ್ಯ, ಕಲೆ, ವಾಸ್ತುಶಿಲ್ಪ, ಸಾಮಾಜಿಕ ಪರಿಸರದಂತಹ ಪ್ರಮುಖ ವಿಷಯಗಳ ಕುರಿತು ಮಾಹಿತಿ ಸಂಗ್ರಹದ ಕ್ಷೇತ್ರ ಕಾರ್ಯವನ್ನು ಆಯೋಜಿಸಿರುವುದು ಮಾದರಿಯಾಗಿದೆ ಎಂದು ಡಾ.ಕಲ್ಯಾಣಿ ಹೇಳಿದರು.

ಕ್ಷೇತ್ರ ಕಾರ್ಯದ ಮಾರ್ಗದರ್ಶನ ಉಪನ್ಯಾಸಕ ಡಾ.ಚಂದ್ರಶೇಖರ ಕಾಳನ್ನವರ ಪ್ರಾಸ್ತಾವಿಕವಾಗಿ ಮಾತನಾಡಿ, ಪದವಿ ಓದುವ ವಿದ್ಯಾರ್ಥಿಗಳಿಗೆ ಹಿರಿಯ ಸಂಶೋಧಕರ ಮೂಲಕ ನಮ್ಮ ಪರಿಸರದ ಶಾಸನಗಳನ್ನು ಮುಖಾಮುಖಿ ಮಾಡುವ ಕಾರ್ಯದಿಂದ ವಿದ್ಯಾರ್ಥಿಗಳಲ್ಲಿ ವಿಶ್ಲೇಷಣಾತ್ಮಕ, ರಚನಾತ್ಮಕ, ವಿವರಣಾತ್ಮಕವಾದ ಸಂಶೋಧನೆಯ ಸಾಮರ್ಥ್ಯ ಮತ್ತು ಗುಣಮಟ್ಟ ಹೆಚ್ಚುತ್ತದೆ. ಕ್ಷೇತ್ರ ಕಾರ್ಯದಿಂದ ಪಡೆದ ಮಾಹಿತಿಗಳ ಆಧಾರದ ಮೇಲೆ ಪ್ರಬುದ್ಧವಾದ ಪ್ರಬಂಧವನ್ನು ವಿದ್ಯಾರ್ಥಿಗಳು ಕಟ್ಟಿಕೊಳ್ಳಬಹುದಾಗಿದೆ ಎಂದರು.

ಕ್ಷೇತ್ರ ಕಾರ್ಯದಲ್ಲಿ ಬಿ.ಎ.ಅಂತಿಮ ವರ್ಷದ ವಿದ್ಯಾರ್ಥಿಗಳಾದ

ಶ್ವೇತಾ, ಮಂಜುಳಾ, ಪ್ರವೀಣ, ಅರುಣ್, ನಾಗಪ್ಪ, ವಾಮದೇವ, ಹನುಮಂತ, ಮಹಾಂತೇಶ ಪಾಲ್ಗೊಂಡು ತಮ್ಮ ಅನುಭವ ಹಂಚಿಕೊಂಡರು. ಡಾ.ಸಂಗಮೇಶ ಕಲ್ಯಾಣಿ ಅವರನ್ನು ಕ್ಷೇತ್ರಕಾರ್ಯ ತಂಡದ ಪರವಾಗಿ ಸನ್ಮಾನಿಸಲಾಯಿತು.

ನಿವೃತ್ತ ಪ್ರಾಚಾರ್ಯ ಶಿವಣಕರ್ ಹೇಳಿಕೆ । ಕಮಲನಗರದಲ್ಲಿ ಕಸಾಪ 111ನೇ ಸಂಸ್ಥಾಪನಾ ದಿನಾಚರಣೆ

# ಕನ್ನಡ ಮನಸ್ಸುಗಳನ್ನು ಒಗ್ಗೂಡಿಸಿದ ಕಸಾಪ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಶತ-ಶತಮಾನಗಳಿಂದ ಕನ್ನಡ ಮನಸ್ಸುಗಳು ಒಂದೇ ವೇದಿಕೆಯಡಿ ಬರಬೇಕೆಂಬ ಕನಸನ್ನು ಸಾಕಾರಗೊಳಿಸಿದ ಕೀರ್ತಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಸಲ್ಲುತ್ತದೆ ಎಂದು ನಿವೃತ್ತ ಪ್ರಾಚಾರ್ಯ ಎಸ್.ಎನ್.ಶಿವಣಕರ ಹೇಳಿದರು.

ಪಟ್ಟಣದ ಡಾ.ಚನ್ನಬಸವ ಪಟ್ಟದ್ದೇವರ ವಾಚನಾಲಯದಲ್ಲಿ ಸೋಮವಾರ ಕನ್ನಡ ಸಾಹಿತ್ಯ ಪರಿಷತ್ತಿನ 111ನೇ ವರ್ಷದ ಸಂಸ್ಥಾಪನಾ ದಿನದ ಪ್ರಯುಕ್ತ ತಾಲೂಕು ಕಸಾಪ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾಡು-ನುಡಿ ಮತ್ತು ಸಂಸ್ಕೃತಿಯ ಬೆಳವಣಿಗೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತನ್ನದೇ ಆದ ಪಾತ್ರವನ್ನು ಶತಮಾನಗಳಿಂದ ನಿರ್ವಹಿಸಿದೆ. ಕಸಾಪ ಉಳಿವಿಗಾಗಿ ಎಲ್ಲ ಕನ್ನಡಿಗರು ಕೈಜೋಡಿಸುವುದು ಅನಿವಾರ್ಯವಾಗಿದೆ ಎಂದರು.

> "ಮಹಾರಾಷ್ಟ್ರ ಗಡಿಗೆ ಹೊಂದಿಕೊಂಡಿರುವ ಕಮಲನಗರ ತಾಲೂಕಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ನಾಡು-ನುಡಿ, ಸಾಹಿತ್ಯ, ಕನ್ನಡ ಅಸ್ಮಿತೆ ರಕ್ಷಣೆಗೆ ರಚನಾತ್ಮಕ ಕಾರ್ಯ ಮಾಡಿಕೊಂಡು ಬರುತ್ತಿರುವುದು ಶ್ಲಾಘನೀಯ.
> -ಭಾವುರಾವ ಹೇಡೆ, ನಿವೃತ್ತ ಮುಖ್ಯಗುರು"

ತಾಪಂ. ಮಾಜಿ ಅಧ್ಯಕ್ಷ ಶ್ರೀರಂಗ ಪರಿಹಾರ ಮಾತನಾಡಿ, ಕನ್ನಡಿಗರು ಒಂದೆಡೆ ಸೇರಲು ವೇದಿಕೆಯೇ ಇಲ್ಲದ ದಿನಗಳಲ್ಲಿ ಮಹಾರಾಜ ಕೃಷ್ಣರಾಜ ಒಡೆಯರ್, ದಿವಾನ್ ಸರ್.ಎಂ.ವಿಶ್ವೇಶ್ವರಯ್ಯ ಸೇರಿದಂತೆ ಅನೇಕ ಮಹನೀಯರ ಸತತ ಪರಿಶ್ರಮದ ಫಲವಾಗಿ ಕನ್ನಡ ಸಾಹಿತ್ಯ ಪರಿಷತ್ತು ಇಂದು ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿದೆ ಎಂದರು.

ಗ್ರಾಪಂ. ಅಧ್ಯಕ್ಷೆ ಸುಶೀಲಾ ಸಜ್ಜನ್ ಕಾರ್ಯಕ್ರಮ ಉದ್ಘಾಟಿಸಿದರು.

ಕಸಾಪ ತಾಲೂಕು ಅಧ್ಯಕ್ಷ ಪ್ರಶಾಂತ ಮಠಪತಿ ಅಧ್ಯಕ್ಷತೆ ವಹಿಸಿದ್ದರು. ಗ್ರಾಪಂ ಸದಸ್ಯ ಬಾಲಾಜಿ ತೇಲಂಗ್, ಕಸಾಪ ಉಪಾಧ್ಯಕ್ಷ ಧನರಾಜ ಭವರಾ, ಸುಭಾಷ ಘಾಟೆ, ಉಮಾಕಾಂತ ಬಚ್ಚಣ್ಣ, ಸಂತೋಷ ಸುಲಾಕೆ, ಮಹೇಶ ಪಾಟೀಲ್, ಪ್ರಶಾಂತ ಖಾನಾಪುರೆ, ಮಹೇಶ ಸಜ್ಜನ್, ಶರಣು ಚಾಂಡೇಶ್ವರೆ, ಶಿವರಾಜ ಪಾಟೀಲ್ ಇತರರಿದ್ದರು. ಯಶವಂತ ಬಿರಾದಾರ ಸ್ವಾಗತಿಸಿದರು. ಮಹಾದೇವ ಮಡಿವಾಳ ನಿರೂಪಣೆ ಮಾಡಿದರು.




ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ :- ಇಲ್ಲಿನ ಅನುಭವ ಮಂಟಪದಲ್ಲಿ ತಿಂಗಳ ಅನುಭವ ಮಂಟಪ ನಿಮಿತ್ತ ವೀರ ವೈರಾಗ್ಯನಿಧಿ ಅಕ್ಕಮಹಾದೇವಿಯ ಜಯಂತಿ ಉತ್ಸವ ಸಮಾರಂಭದ ಸಾನ್ನಿಧ್ಯವನ್ನು ಅನುಭವ ಮಂಟಪದ ಸಂಚಾಲಕರಾದ ಪೂಜ್ಯ ಶ್ರೀ ಶಿವಾನಂದ ದೇವರು. ನೇತೃತ್ವ ಬಾಲಗಾಂವದ ಗುರುದೇವ ಆಶ್ರಮದ ಪೂಜ್ಯ ಶ್ರೀ ಅಮೃತಾನಂದ ಸ್ವಾಮೀಜಿ ಅನುಭವವನ್ನು ಹಾವೇರಿಯ ಉಪನ್ಯಾಸಕರಾದ ಸಾಹಿತಿಗಳಾದ ಡಾ. ಪುಷ್ಪಾ ವತಿ ಸೆಲ್ವಡಿ ಮಠ. ಮುಖ್ಯ ಅತಿಥಿಗಳಾಗಿ ಕಲಬುರ್ಗಿಯ ಸಾಹಿತಿ ಡಾ ಕಲ್ಯಾಣರಾವ ಪಾಟೀಲ. ಪ್ರಸಾದ ದಾಸೋಹ ಹಾಗೂ ಬಸವ ಗುರು ಪೂಜೆ. ಜೈಯ ಶ್ರೀ. ಸುರೇಂದ್ರ ಪಾಟೀಲ. ಸಾಹಿತಿ ಡಾ. ಸೋಮನಾಥ ಯಾಳವಾರ. ಸಂಚಾಲನೆ ಕವಿತಾ ಅಶೋಕ ರಾಜೋಳೆ. ಮುನಮ್ಮ ಎಸ್ ಕೌಡಾಳೆ. ಮಮತಾ ಬೂಸೆ ವಿಜಯಲಕ್ಷ್ಮಿ ಗಡ್ಡೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಇಂದು ವಿದ್ಯುತ್ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಮೇ 06 ಇಲ್ಲಿನ ಜೆಸ್ಕಾಂ ಗ್ರಾಮೀಣ ಉಪ ವಿಭಾಗ ವ್ಯಾಪ್ತಿಯ ಚಂದ್ರಬಂಡ ಮತ್ತು ಜವಾಹರ ನಗರ 33/11 ಕೆವಿ ವಿದ್ಯುತ್ ಉಪ ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡ ಪ್ರಯುಕ್ತ ಮೇ 08ರ ಬೆಳಿಗ್ಗೆ 08 ಗಂಟೆಯಿಂದ ಮಧ್ಯಾಹ್ನ 02 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭೂಕುಸಿತ ಪ್ರದೇಶ-ಪ್ರವಾಹ ಪೀಡಿತದ ಕುರಿತು ಮುಂಜಾಗ್ರತೆ ಕ್ರಮವಹಿಸಲು ಜಿಲ್ಲಾಧಿಕಾರಿ ಸೂಚನೆ



ಕಲಬುರಗಿ:ಮೇ-06-ಭೂಕುಸಿತ ಪ್ರದೇಶಗಳಲ್ಲಿ ಪ್ರವಾಹ ಪೀಡಿತದ ಕುರಿತು ಮುಂಜಾಗ್ರತೆ ಕ್ರಮ ಸಂಬಂಧಪಟ್ಟ ಅಧಿಕಾರಿಗಳು ವಹಿಸಬೇಕು. ಮತ್ತು ನಗರ ಗ್ರಾಮೀಣ ಪ್ರದೇಶದಲ್ಲಿ ಕೆರೆ ಹಾಗೂ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ನೋಡಿಕೊಳ್ಳಿ, ಇಲ್ಲಿಯ ವರೆಗೆ ತಾವು ಮಾಡಿದ ಕಾರ್ಯದ ಕುರಿತು ಇದರ ಸಂಪೂರ್ಣ ಮಾಹಿತಿ ನೀಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಬಿ ಫೌಜಿಯಾ ತರನ್ನುಮ್ ಸೂಚಿಸಿದರು.

ಇದೇ ಮೇ 21 ಹಾಗೂ 22 ರಂದು ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದು, ಇದರ ಹಿನ್ನೆಲೆಯಲ್ಲಿ ಜಿಲ್ಲೆಯ 24 ಇಲಾಖೆಗಳು 10 ದಿನದೊಳಗಾಗಿ ಪಿ.ಪಿ.ಟಿ. ಯಲ್ಲಿ ತಯಾರಿಸಿ ಸಂಬಂಧಪಟ್ಟ ಕಡ್ಡಾಯವಾಗಿ ಪ್ರಗತಿ ವರದಿಯನ್ನು ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು. ಜಿಲ್ಲಾಧಿಕಾರಿಗಳು ಮಂಗಳವಾರದಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿ, 2024-25ನೇ ಸಾಲಿನಲ್ಲಿ ಬೆಳೆ ಮತ್ತು ಮನೆ ಹಾನಿ ಆಗಿರುವವರಿಗೆ ಎಷ್ಟು ಸೌಲಭ್ಯ ನೀಡಿದ್ದಿರಿ ಮತ್ತು ಇನ್ನೂ ಎಷ್ಟು ಜನರಿಗೆ ಪರಿಹಾರ ಕೊಡುವುದು ಬಾಕಿ ಇದೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು

ಕೃಷಿ ಇಲಾಖೆ/ ತೋಟಗಾರಿಕೆ ಇಲಾಖೆ: ಇದು ವರೆಗೂ ಬಿತ್ತನೆ ಕ್ಷೇತ್ರ ಮತ್ತು ರಸಗೊಬ್ಬರ ವಿತರಣೆ ಹಾಗೂ ಬಾಕಿ ಇರುವ ದಸ್ತಾನು(ವಿಕ್ಷನರಿ) ಪ್ರತಿಯೊಂದು ರೈತರಿಗೆ ಪರಿಹಾರ ಒದಗಿಸಬೇಕು, ಬೆಳೆ ವಿಮೆ ರೈತರ ನೋಂದಣಿ ಮಾಡಿಸುವಂತಹ ಕಾರ್ಯ ಮಾಡಬೇಕು ಎಂದರು.

ಪ್ರತಿಯೊಂದು ಇಲಾಖೆಯು ತಾವು ಇದುವರೆಗೂ ಮಾಡಿದ ಕಾರ್ಯದ ಕುರಿತು ಸರಿಯಾದ ಡಾಟಾವನ್ನು ಪ್ರತಿಯೊಂದು ವರದಿ ನನಗೆ ಸರಿಯಾಗಿ ತಲುಪಿಸಬೇಕು ಅಧಿಕಾರಿಗಳು ತಮ್ಮ ಬೇವಾಬ್ದಾರಿ ಕರ್ತವ್ಯವನ್ನು ನನಗೆ ಬೇಡ. ಯಾವುದೇ ಕೆಲಸವಿರಲಿ ಆಸಕ್ತಿಯಿಂದ ಮಾಡಬೇಕು ಎಂದರು. ಸರ್ಕಾರಿ ಕಾಲೇಜ್‌ಗಳ ಜಮೀನು, ವಸತಿ ನಿಲಯ, ಅಂಗನವಾಡಿ, ಸ್ಮಶಾನ ಭೂಮಿ. ಖರೀದಿಗಳು ಏನೆ ಬಾಕಿ ಇದ್ದರೂ ನನ್ನ ಗಮನಕ್ಕೆ ತರಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಗಂಗಕಲ್ಯಾಣ ಯೋಜನೆಗಳ ಪ್ರಗತಿ ಬಗ್ಗೆ ಮಾಹಿತಿ ಪಡೆದು ಮಾತನಾಡಿ, ಫಲಾನುಭವಿಗಳಿಗೆ ಯೋಜನೆ ಮಾಹಿತಿ ತಲುಪಬೇಕು ಯಾವುದೇ ಕಾರಣಕ್ಕೆ ವಿಳಂಬ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಐದು ಗ್ಯಾರೆಂಟಿ ಯೋಜನೆಗಳು ಮತ್ತು ಕೆ.ಕೆ.ಆರ್.ಟಿ.ಸಿ., ಯುವನಿಧಿ, ನಿಮ್ಮ ನಿಮ್ಮ ಮಾಡಿದ ಕಾರ್ಯಗಳ ವರದಿ ಸಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿ-ಖಾತಾ ಅಭಿಯಾನ ಮಾಡಬೇಕು. ಭೂ ಸ್ವಾಧೀನ ಏನಾದರೂ ಬಾಕಿ ಇವೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು ಅಧಿಕಾರಿಗಳು ಮಾತನಾಡಿ ಕೆಲವೊಂದು ಬಾಕಿ ಇರುವ ಬಗ್ಗೆ ಕಾಮಗಾರಿಗಳನ್ನು ಟೆಂಡರ್ ಕರೆಯಲಾಗಿದೆ ಬಾಕಿ ಇರುವ ಕಾಮಗಾರಿಗಳ ಪ್ರಗತಿಯಲ್ಲಿವೆ ಎಂದರು. ಜನತಾ ದರ್ಶನ ಮಾಹಿತಿ ಪಡೆದು-ಕೊಂಡರು ಸಕಲ ಮಾಹಿತಿ ಅರ್ಜಿಗಳು ಇಲ್ಲಿಯವರೆ ಎಷ್ಟು ಲಭ್ಯವಿದ್ದು, ಎಲ್ಲಾ ಅರ್ಜಿಗಳನ್ನು ನಿಯಮಾನುಸಾರವಾಗಿ ಇಲಾಖೆಗಳು ಮಾಡಬೇಕು ಯಾವುದೇ ಅರ್ಜಿಗಳನ್ನು ತಮ್ಮಲ್ಲಿ ಇಟ್ಟುಕೊಳ್ಳಬಾರದು ಮೇಲಾಧಿಕಾರಿಗಳ ಮೂಲಕ ಮಾತನಾಡಿ ಕ್ರಮಜರುಗಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿಗಳು ಜಿಲ್ಲೆಯ ಎಲ್ಲ ಅಧಿಕಾರಿಗಳೊಂದಿಗೆ ಮಾಹಿತಿ ಪಡೆದುಕೊಂಡರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರಸಿಂಗ್ ಮೀನಾ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಸಹಾಯಕ ಆಯುಕ್ತೆ ಸಾಹಿತ್ಯ ಸೇರಿದಂತೆ ಜಿಲ್ಲಾಮಟ್ಟ ಅಧಿಕಾರಿಗಳಾಗದ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ.ಲಕ್ಷ್ಮಣ ಶೃಂಗೇರಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಶರಣಯ್ಯ ಹಿರೇಮಠ. ಕೃಷಿ ಇಲಾಖೆ ಸಮ್ಮದ್ ಪಟೇಲ್, ಡಿಯುಡಿಸಿ ಯೋಜನಾ ನಿರ್ದೇಶಕ ಮುನ್ನಾವರ್ ದೌಲ್, ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿ ಶರಣಬಸಪ್ಪ ಖ್ಯಾತನಾಳ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ಜಾತಿ ಸಮೀಕ್ಷೆಯಲ್ಲಿ ಜಂಗಮ ಸಮಾಜದವರು

## ಕ್ರ. ಸಂ.19(1) ನಮೂದಿಸುವಂತೆ ಡಾ. ರವಿ ಸ್ವಾಮಿ ಮನವಿ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ : ಮೇ 05ರಿಂದ 17ರವರೆಗೆ ರಾಜ್ಯ ಸರಕಾರ ನಡೆಸುತ್ತಿರುವ ಜಾತಿ ಗಣತಿ ಸಮೀಕ್ಷೆಯಲ್ಲಿ ಸರಕಾರಿ ನೌಕರರು ನಿಮ್ಮ ಮನೆಗೆ ಜಾತಿ ಸಮೀಕ್ಷೆಗೆ ಬಂದಾಗ ಜಿಲ್ಲೆಯಲ್ಲಿನ ಎಲ್ಲಾ ಜಂಗಮ ಸಮಾಜದವರು ಧರ್ಮ ಹಿಂದು. ಜಾತಿ ಬೇಡ ಜಂಗಮ, ಕ್ರ.ಸಂ. 19(1) ಕುಲ ಕಸುಬು ಧಾರ್ಮಿಕ ಭಿಕ್ಷಾಟನೆ ಎಂದು ನಮೂದಿಸಬೇಕು.

ಮೂಲ ಕುಲ ಕಸುಬು ಧಾರ್ಮಿಕ ಬಿಕ್ಷಾಟನೆಯಾಗಿದ್ದು ಅದರಂತೆ ಧರ್ಮ ಎನ್ನುವಲ್ಲಿ ಹಿಂದು ಎಂದು, ಜಾತಿ ಎನ್ನುವಲ್ಲಿ ಬೇಡ ಜಂಗಮ ಎಂದು. ಕ್ರಮ ಸಂಖ್ಯೆ ಎಂದು ಇರುವಲ್ಲಿ 19(1) ನ್ನು ಕಡ್ಡಾಯವಾಗಿ ನಮೂದಿಸುವಂತೆ ಜಿಲ್ಲೆಯ ಸಮಸ್ತ ಜಂಗಮ ಸಮಾಜದ ಪ್ರತಿಯೊಬ್ಬರು ತಿಳಿಸುವಂತೆ ಬೇಡ ಜಂಗಮ ಸಮಾಜದ ಬೀದರ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಾ. ರವಿ ಸ್ವಾಮಿ ನಿರ್ಣಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಾಂತಿನಿಕೇತನ ಪ್ರೌಢ ಶಾಲೆಗೆ ಶೇಕಡ 72.72 %ಫಲಿತಾಂಶ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:- ಇಲ್ಲಿನ ನಗರದ ತಾಲೂಕ ಮಟ್ಟದ ಅಧಿಕಾರಿ ವರ್ಗದವರಿಂದ ನಡೆಯುತ್ತಿರುವ ಶಾಂತಿನಿಕೇತನ ಶಿಕ್ಷಣ ಸಂಸ್ಥೆ ಯ

ಶಾಂತಿನಿಕೇತನ ಪ್ರೌಢಶಾಲೆಗೆ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿದ್ದು ಅಗ್ರಶ್ರೇಣಿ 10 ಪ್ರಥಮ 28 ದ್ವಿತೀಯ 2 ವಿದ್ಯಾರ್ಥಿಗಳು ತೇರ್ಗಡೆಯಾಗಿರುತ್ತಾರೆ ಶಿವಕುಮಾರ್ ತಂದೆ ಕರಬಸಪ್ಪಾ 592. 94.72% ಸಿದ್ದು ತಂದೆ ರಾಜಪ್ಪಾ 584.93.44% ಕೃಷ್ಣಾ ತಂದೆ ಸುಭಾಷ ಶಿಂಧೆ 583.93.28 % ರಾಘವೇಂದ್ರ ತಂದೆ ಅಶೋಕ 583.93.28% ಐಶ್ವರ್ಯ ತಂದೆ ಸೋಮನಾಥ್ 582.93.12 % ಅಂಜಲಿ ತಂದೆ ರಾಚೋಟಯ್ಯಾ 562.89.92% ಆರತಿ ತಂದೆ ಮಧುಕರ 560.89.6% ಖುಷಿ ತಂದೆ ಸುನಿಲ್ ಕುಮಾರ್ 556.88.96% ಹೇಮಾ ತಂದೆ ರವಿಕಾಂತ್ 88.96% ಸೌಭಾಗ್ಯವತಿ ತಂದೆ ಮನೋಜ್ ಕುಮಾರ 542.86.72% ಉತ್ತಮ ಫಲಿತಾಂಶ ತಂದಿರುವ ವಿದ್ಯಾರ್ಥಿಗಳ ಸಾಧನೆಗೆ ಬಸವಕಲ್ಯಾಣ ಉಪ ವಿಭಾಗದ ಸಹಾಯಕ ಆಯುಕ್ತರು ಹಾಗೂ ಶಾಂತಿನಿಕೇತನ ಸಂಸ್ಥೆಯ ಅಧ್ಯಕ್ಷರು ಆಗಿರುವ ಶ್ರೀ ಮುಕುಲ್ ಜೈನ್ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ರಮೇಶ್ ಕುಮಾರ್ ಸುಲ್ಪಿ ಹಾಗೂ ಆಡಳಿತ ಮಂಡಳಿ ಅಧಿಕಾರಿ ವರ್ಗದವರು ಮುಖ್ಯಗುರುಗಳು ಹಾಗೂ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿದ್ದಾರೆ.

# ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಸಮೀಕ್ಷಾ ಕಾರ್ಯಕ್ಕಾಗಿ ಜಿಲ್ಲೆಯ ವಿಧಾನಸಭಾವಾರು ನೋಡಲ್ ಅಧಿಕಾರಿಗಳ ನೇಮಕ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮೇ.06.-ಪರಿಶಿಷ್ಟ ಜಾತಿ ಒಳ ಮೀಸಲಾತಿ ಸಮೀಕ್ಷೆ ಕಾರ್ಯಕ್ಕಾಗಿ ಕೆಳಕಂಡಂತೆ ಜಿಲ್ಲೆಯ 9 ವಿಧಾನಸಭಾ ಕ್ಷೇತ್ರವಾರು ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಕಲಬುರಗಿ ಜಿಲ್ಲಾಧಿಕಾರಿಗಳಾದ ಬಿ. ಫೌಜಿಯಾ ತರನ್ನುಮ್ ಅವರು ತಿಳಿಸಿದ್ದಾರೆ.

ಕಲಬುರಗಿ (ಗ್ರಾ) ವಿಧಾನಸಭಾ ಕ್ಷೇತ್ರ: ಕಲಬುರಗಿ ಉಪವಿಭಾಗದ ಸಹಾಯಕ ಆಯುಕ್ತೆ ಕು. ಸಾಹಿತ್ಯಾ ಎಮ್ ಆಲದಕಟ್ಟಿ (ಮೊಬೈಲ್ ಸಂಖ್ಯೆ 7411186238). ಸೇಡಂ ವಿಧಾನಸಭಾ ಕ್ಷೇತ್ರ: ಸೇಡಂ ಉಪವಿಭಾಗದ ಸಹಾಯಕ ಆಯುಕ್ತ ಪ್ರಭುರೆಡ್ಡಿ (ಮೊಬೈಲ್ ಸಂಖ್ಯೆ 9986554416). ಆಳಂದ ವಿಧಾನಸಭಾ ಕ್ಷೇತ್ರ: ಕಲಬುರಗಿ ಕೆ.ಎನ್.ಎನ್.ಎಲ್. (ಖಐಂಔ) ಎಸ್.ಎಲ್.ಎ.ಓ. ರಾದ ಪಾರ್ವತಿ (ಮೊಬೈಲ್ ಸಂಖ್ಯೆ 9663690275).

ಚಿತ್ತಾಪೂರ ವಿಧಾನಸಭಾ ಕ್ಷೇತ್ರ: ಕಲಬುರಗಿ ಎನ್.ಎಚ್.ಎ.ಐ. (ಖಐಂಔ) ಎಸ್.ಎಲ್.ಎ.ಓ. ರಾದ ರಾಮಚಂದ್ರ ಗಡದೆ (ಮೊಬೈಲ್ ಸಂಖ್ಯೆ: 9743334596). ಚಿಂಚೋಳಿ ವಿಧಾನಸಭಾ ಕ್ಷೇತ್ರ: ಕಲಬುರಗಿ ಕೆ.ಐ.ಎ.ಡಿ.ಬಿ. (ಖಐಂಔ) ಎಸ್.ಎಲ್.ಎ.ಓ. ರಾದ ಮಲ್ಲೇಶ ತಂಗಾ (ಮೊಬೈಲ್ ಸಂಖ್ಯೆ 9448650889). ಕಲಬುರಗಿ (ಉ) ವಿಧಾನಸಭಾ ಕ್ಷೇತ್ರ: ಕಲಬುರಗಿ ಕೆ.ಕೆ.ಆರ್.ಡಿ.ಬಿ. ಅಧೀನ ಕಾರ್ಯದರ್ಶಿ ಪ್ರಕಾಶ ಕುದರಿ (ಮೊಬೈಲ್ ಸಂಖ್ಯೆ:9901991334). ಜೇವರ್ಗಿ ವಿಧಾನಸಭಾ ಕ್ಷೇತ್ರ: ಕಲಬುರಗಿ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಸಂತೋಷ ಇನಾಂದಾರ್ (ಮೊಬೈಲ್ ಸಂಖ್ಯೆ 9448999235). ಅಫಜಲಪೂರ ವಿಧಾನಸಭಾ ಕ್ಷೇತ್ರ: ಕಲಬುರಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಜಾವೀದ ಕಾರಂಗಿ (ಮೊಬೈಲ್ ಸಂಖ್ಯೆ:9449161217). ಕಲಬುರಗಿ (ದ) ವಿಧಾನಸಭಾ ಕ್ಷೇತ್ರ: ಕಲಬುರಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಭು ದೊರೆ (ಮೊಬೈಲ್ ಸಂಖ್ಯೆ 9901444631).

ಮೂರು ಹಂತಗಳಲ್ಲಿ ಸಮೀಕ್ಷೆ: ಈ ಸಮೀಕ್ಷೆಯು ಮೂರು ಹಂತಗಳಲ್ಲಿ ನಡೆಯಲಿದ್ದು, 1ನೇ ಹಂತದ ಸಮೀಕ್ಷೆಯು ಮೇ 5 ರಿಂದ 17 ರವರೆಗೆ ಗಣತಿದಾರರು ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ಕೈಗೊಳ್ಳುವುದು. 2ನೇ ಹಂತದ ಸಮೀಕ್ಷೆಯು ಮೇ 19 ರಿಂದ 21 ರವರೆಗೆ ಮತಗಟ್ಟೆ ಪ್ರದೇಶವಾರು ವಿಶೇಷ ಶಿಬಿರಗಳಲ್ಲಿ ಸಮೀಕ್ಷೆ ಕೈಗೊಳ್ಳುವುದು. 3ನೇ ಹಂತದ ಸಮೀಕ್ಷೆಯು ಮೇ 19 ರಿಂದ 23 ರವರೆಗೆ ಸ್ವ-ಯಂ ಘೋಷಣೆ (ಆನ್‌ಲೈನ್ ಮೂಲಕ) ಕೈಗೊಳ್ಳಲಾಗುತ್ತಿದೆ.

ಅದೇ ರೀತಿ ಕಲಬುರಗಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಹಾಗೂ ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ತಾಲೂಕಾ ಮಟ್ಟದ ಸಮನ್ವಯ ಸಮಿತಿ ರಚಿಸಲಾಗಿದೆ. ಸಮೀಕ್ಷೆಯ ಕುರಿತು ಗಣತಿ-ದಾರರಿಗೆ ಮತ್ತು ಮೇಲ್ವಿಚಾರಕರಿಗೆ ಮಾಸ್ಟರ್ ಟ್ರೈನರ್‌ಗಳಿಗೆ ಈಗಾಗಲೇ ತರಬೇತಿ ನೀಡಲಾಗಿದೆ.

ಪರಿಶಿಷ್ಟ ಜಾತಿ ಒಳ ಮೀಸಲಾತಿ ಕುರಿತಂತೆ ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ಹೆಚ್.ಎನ್. ನಾಗಮೋಹನ್ ದಾಸ್ ಏಕ ಸದಸ್ಯ ವಿಚಾರಣಾ ಆಯೋಗವನ್ನು ರಚಿಸಲಾಗಿದೆ. ಸದರಿ ಆಯೋಗದಿಂದ ಪರಿಶಿಷ್ಟ ಜಾತಿಗಳ ವಿವಿಧ ಅಂಶಗಳ ಬಗ್ಗೆ ದತ್ತಾಂಶಗಳನ್ನು ಶೇಖರಿಸಲು ಸಮೀಕ್ಷೆಯನ್ನು ನಡೆಸಲು ತಿರ್ಮಾನಿಸಿ, ರಾಜ್ಯ ಮಟ್ಟದ, ಬಿ.ಬಿ.ಎಂ.ಪಿ, ಜಿಲ್ಲಾ ಮಟ್ಟದ ಮತ್ತು ತಾಲೂಕಾ ಮಟ್ಟದ ಸಮನ್ವಯ ಸಮಿತಿಗಳನ್ನು ಸರಕಾರ ರಚಿಸಿ ಆದೇಶಿಸಿದೆ. ಸದರಿ ಸಮೀಕ್ಷೆಯ ಉದ್ದೇಶವು ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರಿರುವ ಜನರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ, ಔದ್ಯೋಗಿಕ ಪ್ರಾತಿನಿಧ್ಯತೆ ಇತ್ಯಾದಿ ಸ್ಥಿತಿಗಳ ಬಗ್ಗೆ ವೈಜ್ಞಾನಿಕವಾಗಿ ಮತ್ತು ವಾಸ್ತವಿಕ ಮಾಹಿತಿ ಪಡೆದುಕೊಳ್ಳುವ ಈ ಸಮೀಕ್ಷೆಯ ಉದ್ದೇಶವಾಗಿದೆ.

ಆದ್ದರಿಂದ ಗಣತಿದಾರರು ನಡೆಸುವ ಸಮೀಕ್ಷೆಯ ಸಂದರ್ಭದಲ್ಲಿ ಜಿಲ್ಲೆಯ ಎಲ್ಲಾ ಇಲಾಖೆಗಳ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರು/ ಪದಾಧಿಕಾರಿಗಳು, ಸಾರ್ವಜನಿಕರು, ಪೋಷಕರು ಮತ್ತು ವಿದ್ಯಾರ್ಥಿಗಳು ಗಣತಿದಾರರಿಗೆ ಸಹಕರಿಸಿ ಈ ಸಮೀಕ್ಷೆಯ ಯಶಸ್ವಿಗೊಳಿಸಬೇಕೆಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## ಮಹಿಳೆ ಕಾಣೆ: ಪತ್ತೆಗೆ ಪೊಲೀಸರ ಮನವಿ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಮೇ06-ತಾಲೂಕಿನ ಶಕ್ತಿನಗರ ಪೊಲೀಸ್ ಠಾಣೆಯ ವ್ಯಾಪ್ತಿಯ ದೇವಸೂಗೂರಿನ ಹೊಸ ಜನತಾ ಕಾಲೋನಿಯ ನಿವಾಸಿಯಾದ ಶಮಶಾದ್ ಬೇಗಂ ಗಂಡ ಖಾಜಾ ಹುಸೇನ್ (35) ಎಂಬ ಮಹಿಳೆಯು ಏಪ್ರಿಲ್ 29ರ ಬೆಳಿಗ್ಗೆ 10 ಗಂಟೆ ಸುಮಾರಿಗೆ ಊರಿಗೆ ಹೋಗಿ ಬರುತ್ತೇನೆ ಅಂತಹ ಹೇಳಿ ಹೋದವಳು ಮರಳಿ ಮನೆಗೆ ಬಾರದೆ ಕಾಣೆ-ಯಾಗಿದ್ದು, ಈ ಕುರಿತು ಶಕ್ತಿನಗರ ಪೊಲೀಸ್ ಠಾಣೆಯಲ್ಲಿ ಗುನ್ನ ಸಂಖ್ಯೆ:26/2025 ಕಲಂ ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಮಹಿಳೆಯು 5.4 ಫೀಟ್ ಎತ್ತರ, ಗೋದಿ ಮೈ ಬಣ್ಣ, ದುಂಡು ಮುಖ, ತೆಳ್ಳನೆಯ ಮೈಕಟ್ಟು ಹೊಂದಲಾಗಿದ್ದು, ಕಡು ನಾಸಿ ಬಣ್ಣದ ಬುರುಖಾ ಉಡುಪು ಧರಿಸಿದ್ದಾಳೆ. ಈ ಮಹಿಳೆ ಬಗೆ ಸುಳಿವು ಸಿಕ್ಕಲ್ಲಿ ಶಕ್ತಿನಗರ ಪಿಎಸ್‌ಐ ಮೊಬೈಲ್ ಸಂಖ್ಯೆ: 9480803868, ಸಿಪಿಐ ಗ್ರಾಮೀಣ ವೃತ್ತ ರಾಯಚೂರು ಮೊಬೈಲ್ ಸಂಖ್ಯೆ: 9480803832, ಡಿಎಸ್ಪಿ ರಾಯಚೂರು ಮೊಬೈಲ್ ಸಂಖ್ಯೆ: 9480803820, ರಾಯಚೂರು ಕಂಟ್ರೋಲ್ ರೂಂ ದೂರವಾಣಿ ಸಂಖ್ಯೆ: 08532-235635ಗೆ ಸಂಪರ್ಕಸುವಂತೆ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಪಕ್ಷಿಗಳಿಗೆ ನೀರುಣಿಸುವ ಕಾರ್ಯಕ್ರಮಕ್ಕೆ ಚಾಲನೆ

ಕಲಬುರಗಿ :ಮೇ.6: ಒಳ ಮತ್ತು ಹೊರ ಆವರಣದಲ್ಲಿ ಅರವಟಿಕೆ ಮೂಲಕ ಪಕ್ಷಿಗಳಿಗೆ ನೀರು ಕುಡಿಸುವ (ಉಣಿಸುವ) ಕಾರ್ಯಕ್ರಮವನ್ನು ಕಲಬುರಗಿ ಕೇಂದ್ರಕಾರಾಗೃಹದಲ್ಲಿ ಸೋಮವಾರ ಹಮ್ಮಿಕೊಳ್ಳಲಾಯಿತು.

ಈ ಸಂಸ್ಥೆಯ ಮುಖ್ಯಸ್ಥ ಡಾ॥ ಅನಿತಾ ಆರ್. ಅವರು ಎಲ್ಲಾ ಅಧಿಕಾರಿ/ಸಿಬ್ಬಂದಿಗಳೊಂದಿಗೆ ಸೇರಿ ಕೆಲಸದ ಒತ್ತಡದ ಮಧ್ಯೆಯೂ ಸಹ ಪಕ್ಷಿಗಳಿಗೆ ನೀರು ಉಣಿಸುವ (ಕುಡಿಸುವ) ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಮಾನವನ ಸುಂದರ ಬದುಕಿಗೆ ಸ್ಫೂರ್ತಿದಾಯಕವಾದ ವಾತಾವರಣವನ್ನು ಪಶು-ಪಕ್ಷಿಗಳಿಂದ ಸಿಗಲಿದ್ದು, ನಾವು ಬದುಕುವುದಕ್ಕೆ ಆಹಾರ ನೀರು ಎಷ್ಟು ಮುಖ್ಯವೋ ಅದೇ ರೀತಿ ಮೂಕ ಪಶು-ಪಕ್ಷಿಗಳಿಗೂ ಕೂಡ ಆಹಾರ ನೀರು ಅಷ್ಟೆ ಅವಶ್ಯಕವಾಗಿದೆ. ನಾನು ಅವುಗಳ ಸಂರಕ್ಷಣೆಯನ್ನು ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ಹಾಗಾಗೀ ಪಕ್ಷಿಗಳಿಗೆ ಪ್ರತಿಯೊಬ್ಬರು ಆಹಾರ ಮತ್ತು ನೀರನ್ನು ನೀಡುವುದರ ಮೂಲಕ ಅವುಗಳನ್ನು ಕಾಪಾಡಬೇಕು ಎಂದರು.

ಸುಮಾರು 100 ಅರವಟಿಕೆ ಮೂಲಕ ಪಕ್ಷಿಗಳಿಗೆ ನೀರು ಒದಗಿಸುವುದಕ್ಕೆ ಗಿಡಗಳಿಗೆ ಕಟ್ಟಿ ನೀರನ್ನು ಕುಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಕಚೇ-ರಿಯ ಅಧೀಕ್ಷಕ ಎಮ್. ಹೆಚ್. ಆಶೇಖಾನ್, ಜೈಲರ್‌ಗಳಾದ ಸಾಗರ ಪಾಟೀಲ್, ಶ್ರೀಮಂತ ಪಾಟೀಲ್, ಶಾಮ ಬಿದರಿ ಹಾಗೂ ಈ ಸಂಸ್ಥೆಯ ಶಿಕ್ಷಕರಾದ ನಾಗರಾಜ ಮುಲಗೆ ಹಾಗೂ ಎಲ್ಲಾ ಅಧಿಕಾರಿ ಸಿಬ್ಬಂದಿಗಳು ಭಾಗವಹಿಸಿ ಅರವಟಿಕೆಗಳನ್ನು ಕಟ್ಟಿದರು.

# ಕಲಬುರಗಿ, ಆಕ್ಷೇಪಣೆ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮೇ.06-ಇಂದಿರಾ ಎಜ್ಯುಕೇಷನ್ ಆಂಡ್ ವೆಲ್‌ಫೇರ್ ಅಸೋಸಿಯೇಷನ್, ನೊಂದಣಿ ಸಂಖ್ಯೆ: 311/2004-05 ಈ ಸಂಸ್ಥೆಯು ಸನ್ 2004-05 ರಿಂದ 2024-25ನೇ ಸಾಲಿನವರೆಗೆ ಕರ್ನಾಟಕ ಸಂಘಗಳ ನೊಂದಣಿ ಕಾಯ್ದೆ 1960ರ ಕಲಂ 13ರ ಪ್ರಕಾರ ಸಂಘದ ಕಾರ್ಯಕಾರಿ ಮಂಡಳಿ ಪಟ್ಟಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಸಲ್ಲಿಸಿ ಸ್ವೀಕೃತಿ ನೀಡಬೇಕೆಂದು ಕೋರಿ ಪ್ರಸ್ತಾವನೆ ಸಲ್ಲಿಸಿದ್ದು, ಈ ಸಂಘದ ಪ್ರಸ್ತಾವನೆಗೆ ಕರ್ನಾಟಕ ಸಂಘಗಳ ನೊಂದಣಿ ಕಾಯ್ದೆ 1960 ರ ಕಲಂ 13 ರಡಿ ಸ್ವೀಕೃತಿ ನೀಡಲು ಯಾವುದೇ ಆಕ್ಷೇಪಣೆಗಳಿದ್ದಲ್ಲಿ 2025ರ ಮೇ 14 ರೊಳಗಾಗಿ ಸಹಕಾರ ಸಂಘಗಳ ಉಪ ನಿಬಂದಕರು ಹಾಗೂ ಜಿಲ್ಲಾ ಸಂಘಗಳ ನೊಂದಣಾಧಿಕಾರಿಗಳ ಕಚೇರಿ, ಸಿದ್ದಿಬಾಷಾ ದರ್ಗಾ ಹಿಂದುಗಡೆ, ಎಸ್‌ಪಿ ಆಫೀಸ್ ರಸ್ತೆ ಕಲಬುರಗಿ ಇವರಿಗೆ ಲಿಖಿತವಾಗಿ ಆಕ್ಷೇಪಣೆ ಸಲ್ಲಿಸಬೇಕೆಂದು ಕಲಬುರಗಿ ಸಹಕಾರ ಸಂಘಗಳ ಉಪನಿಬಂಧಕರು ತಿಳಿಸಿದ್ದಾರೆ.

# ಪಾಕ್ ವಿರುದ್ಧದ ಸೇಡಿನ ಸಂದೇಶ ಭಾರತೀಯರೆಲ್ಲರಿಗೂ ಅನಾವರಣ

ಮಲ್ಲಮ್ಮ ನುಡಿ ವಾರ್ತೆ

ಪಾಕಿಸ್ತಾನದ ಮೇಲಿನ ಸೇಡ ಪ್ರತೀಕಾರ ತೀರಿಸಿಕೊಳ್ಳಬೇಕಾದ ಭಾರತ ನೇರವಾಗಿ ಪಾಪಿಗಳನ್ನು ಒಂದೇ ಬಾರಿ ಹೊಡೆದು ಸುಮ್ಮನಾಗಿ ಬಿಟ್ಟರೆ ಅದಕ್ಕೆ ತಕ್ಕ ಪ್ರತಿಕಾರ ತೀರಿಸಿಕೊಂಡಂತೆ ಆಗುವುದಿಲ್ಲ ಎಂಬ ಕಾರಣಕ್ಕಾಗಿ ಈ ಬಾರಿ ಭಾರತ ಪಾಕಿಸ್ತಾನಕ್ಕೆ ಒಳ ಮತ್ತು ಹೊರಗಿನಿಂದ ಸರಿಯಾಗಿ ಬುದ್ಧಿ ಕಲಿಸಬೇಕು ಎನ್ನುವ ಅಚಲ ನಿರ್ಧಾರದೊಂದಿಗೆ ತನ್ನ ಚಾತುರ್ಯತೆಯಿಂದ ಯಾವ ರೀತಿ ಪಾಪಿ ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸಬೇಕು ಎನ್ನುವುದನ್ನು ಪಾಕಿಸ್ತಾನಕ್ಕೂ ಮತ್ತು ಇನ್ನುಳಿದ ಯಾರಿಗೂ ಗೊತ್ತಾಗದಂತೆ. ಪಾಕಿಸ್ತಾನದ ತಳ ಬುಡವನ್ನು ಮನವರಿಕೆ ಮಾಡಿಕೊಂಡು ಪಾಕಿಸ್ತಾನಕ್ಕೆ ಮುಟ್ಟಿ ಮುಟ್ಟಿ ನೋಡಿಕೊಳ್ಳುವಂತೆ ಹಕ್ಕಿಯಂತೆ ಕುಕ್ಕಿ ಕುಕ್ಕಿ ಕೊಲ್ಲುವ ಪ್ಲಾನ್ ಮಾಡುತ್ತಿದೆ ನಮ್ಮ ಭಾರತ.

ಭಾರತದಿಂದ ಪಾಕಿಸ್ತಾನಕ್ಕೆ ರಪ್ತು ಆಮದು ಆಗುತ್ತಿದ್ದ ಸಂಪೂರ್ಣ ಸಾಮಗ್ರಿಗಳನ್ನು ಸ್ಥಗಿತಗೊಳಿಸಿದ್ದು ಭಾರತಕ್ಕೆ ಇದರಿಂದ ಯಾವ ನಷ್ಟ ಆಗದಿದ್ದರೂ ಪಾಕಿಸ್ತಾನಕ್ಕೆ ಅದೋಗತಿಗೆ ತಳ್ಳುವಂತೆ ನೋಡಿ-ಕೊಂಡಿದೆ.

ಜಲ ಹೊಡೆತ ದೊಂದಿಗೆ ಔಷಧೀಯ ಗುಣಗಳ ವಸ್ತುಗಳು ಕಾಯಿಪಲ್ಲೆ ದಿನಸಿ ಸಾಮಗ್ರಿಗಳು ಕೊರತೆಯಿಂದಾಗಿ ಪಾಕಿಸ್ತಾನ ವಿಲವಿಲ ಒದ್ದಾಡುತ್ತಿದೆ ಆದರೆ ಈ ಬಾರಿ ಮಾತ್ರ ಭಾರತ ಯಾವುದೇ ಕರುಣೆ ತೋರಿಸದೆ ಮೊಲಾಜಿಲ್ಲದೆ ಪಾಕಿಸ್ತಾನಕ್ಕೆ ತಕ್ಕ ಮತ್ತು ಸರಿಯಾದ ಪಾಠ ಬುದ್ಧಿ ಕಲಿಸಲೇಬೇಕು ಎಂಬ ಅಚಲ ನಿರ್ಧಾರದಿಂದ ಯಾರನ್ನು ಮಧ್ಯಸ್ಥಿಕ ವಹಿಸಿಕೊಳ್ಳದಂತೆ ಮುಂಜಾಗ್ರತ ಕ್ರಮಗಳನ್ನು ಕೈಗೊಂಡಿದೆ.

ನಮ್ಮ ಭಾರತೀಯರು ಮೊನ್ನೆ ನಡೆದ ಕಾಶ್ಮೀರ ಪಹಲ್ಗಾಮ್ ದಾಳಿಯಲ್ಲಿ 26 ಜನರ ಹತ್ಯೆಯ ಭೀಕರತೆ ಕಂಡ ಭಾರತೀಯರು, ಉಗ್ರರ ದಾಳಿಯಲ್ಲಿ ಹೇಗೆ ನರಳಿ ನರಳಿ ಯಾತನೆ ಅನುಭವಿಸಿ ಸತ್ತರೂ !! ಅದೇ ರೀತಿ ಪಾಕಿಸ್ತಾನ ನರಳಿ ನರಳಿ ಸಾಯಬೇಕು ನರಕಯಾತನೇ ಅನುಭವಿಸಬೇಕು ಎನ್ನುವ ಮುಂದಾಲೋಚನೆ ಇಟ್ಟುಕೊಂಡು ಮುಂದೆಂದೆಂದಿಗೂ ಪಾಪಿ ಪಾಕಿಸ್ತಾನ ಭಾರತ ತಂಟೆಗೆ ಬರಬಾರದು ಎನ್ನುವಷ್ಟರ ಮಟ್ಟಿಗೆ ತಕ್ಕ ಪಾಠ ಕಲಿಸಲು ಭಾರತೀಯ ಸೈನ್ಯ ನಿರ್ಧರಿಸಿದ್ದು ಇದಕ್ಕೆ ಭಾರತೀಯ ಪ್ರಧಾನ ಮಂತ್ರಿಗಳು ಗೃಹ ಸಚಿವರು ಸಮ್ಮತಿ ಸೂಚಿಸುವುದರಿಂದ ಸೈನಿಕರಿಗೆ ಸಂಪೂರ್ಣ ಸ್ವತಂತ್ರ ನೀಡಿದ್ದರಿಂದ ಸೈನಿಕರ ವಿಶ್ವಾಸವು ದುಪ್ಪಟ್ಟುಕೊಂಡಿದ್ದು ಪಾಕಿಸ್ತಾನವನ್ನು ಹೊಡೆದು ತೀರುಸುತ್ತೇವೆ ಎನ್ನುವ ಪಣದೊಂದಿಗೆ ಯಾವ ರೀತಿ ಪಾಕಿಸ್ತಾನ ಕುಕ್ಕಿ ಕುಟ್ಟಿ ತಿಂದರೆ ಬಲವಾದ ಪೆಟ್ಟು ಬೀಳುವುದು ಎನ್ನುವ ವಿಚಾರ ಆಲೋಚನೆಯೊಂದಿಗೆ ನಮ್ಮ ಸೈನ್ಯ ಐತಿಹಾಸಿಕ ಸರ್ಜಿಕಲ್ ಸ್ಟ್ರೈಕ್ ಒಂದನ್ನು ಮಾಡುವುದಂತೂ ಪಕ್ಕಾ ಆಗಿದ್ದು ಪಾಕಿಸ್ತಾನ ಈಗಾಗಲೇ ತರಗುಟ್ಟುತ್ತಿದ್ದರು. ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನುವ ತನ್ನ ಹಳೆಯ ಚಾಳಿಯನ್ನು ಈಗಲೂ ಬದಲಾವಣೆ ಮಾಡಿಕೊಳ್ಳುವ ಮತ್ತು ಅದರಿಂದ ಹಿಂದೆ ಸರಿಯುವ ನಿರ್ಧಾರಕ್ಕೆ ಬರುತ್ತಿಲ್ಲವಾದರೂ ಈ ಸಾರಿ ಮಾತ್ರ ಭಾರತದ ಏಟಿಗೆ ಪಾಕಿಸ್ತಾನ ಮೂಲೆಗುಂಪ ಆಗುವದು ನಿಶ್ಚಯವಾಗಿದೆ.

ಪಾಕ್ ಮೇಲೆ ದಾಳಿಗೆ ಭಾರತ ಸನ್ನದ್ದವಾಗಿದ್ದು ಇಂದು ದೇಶದ ಜನರ ರಕ್ಷಣೆಗೋಸ್ಕರ ಎಲ್ಲ ರಾಜ್ಯಗಳಿಗೆ ಮತ್ತು ದೇಶದ ಜನರಿಗೆ ಸಂದೇಶ ನೀಡುತ್ತಿದ್ದು ಭಾರತ ಉದ್ವಿಗ್ನತೆ ನಡುವೆಯೂ ರಣಕಹಳೆ ಊದಲು ಭಾರತ ಸಕಲ ಸನ್ನದ್ಧವಾಗಿದ್ದು ಅಣಕು ಡ್ರಿಲ್ ಮಾಡುವುದರ ಮೂಲಕ ದೇಶದ ಜನತೆಗೆ ಯುದ್ಧದ ಮುನ್ಸೂಚನೆಯನ್ನು ಭಾರತ ನೀಡಲು ಇವತ್ತು ಸಕಲ ಸನ್ನದ್ಧತೆ ಮಾಡಿಕೊಂಡಿದ್ದು ಯುದ್ಧದ ಆತಂಕದಿಂದ ಹೊರಬರಲು ದೇಶದ ಜನರಿಗೆ ಎಚ್ಚರಿಕೆ ಗಂಟೆ ಬಾರಿಸುವುದರೊಂದಿಗೆ ನಮ್ಮ ಭಾರತ ಪಾಕಿಸ್ತಾನದ ವಿರುದ್ಧ ಹೋರಾಡಲು ಸಕಲ ಸನ್ನದ್ಧವಾಗಿದೆ ಎನ್ನುವ ಸಂದೇಶ ಸಾರುತ್ತಿದೆ..

ಭಾರತ ಪರೋಕ್ಷ ಯುದ್ದಕ್ಕೆ ಸನ್ನದ್ಧವಾಗಿದ್ದು ಏನು ಬೇಕೋ ಎಲ್ಲಾ ತಯಾರಿ ಮಾಡಿಕೊಳ್ಳುತ್ತಿರುವಾಗಲೇ ಪಾಕ್ ಗೆ ನಡುಕ ಶುರುವಾಗಿದ್ದು ಇನ್ನೂ ಒಂದು ಬಾಂಬ್ ಬೀಳದೇಯೇ ಬಾಂಬು ಬಿದ್ದಂತೆ ಭಯ ಬೀತಗೊಂಡಿದ್ದರು ಪಾಕ್ ಮಾತ್ರ ತನ್ನ ಕಿತಾಪತಿಯನ್ನು ಮಾಡುವುದು ಒಳಗಿಂದೊಳಗೆ ಬಿಟ್ಟಿಲ್ಲ ಇದರಿಂದ ಕೋಪಗೊಂಡ ಭಾರತ ತನ್ನ ಗೌರವ ಸೌರ ಬಹುಮತ್ವ ಕಾಪಾಡಿಕೊಳ್ಳಲು ಆತ್ಮವಿಶ್ವಾಸಕ್ಕೆ ಪೆಟ್ಟು ಬಿದ್ದಾಗ ಎದುರಾಳಿಗಳನ್ನು ಹಣೆಯಲು ಸಮರ ಸಾರಿದೆ ರಾಜ ತಾಂತ್ರಿಕ ಕ್ರಮಗಳ ಮೂಲಕ ಶತ್ರುಗಳ ಆತ್ಮಬಲ ತುಂಬಿಸುವ ತಂತ್ರಗಾರಿಕೆ ಅನುಸರಿಸಿ ಪಾಕಿಸ್ತಾನವನ್ನು ಹಣೆಯಲು ತಾಲಿಮೂ ನಡಿಸುತ್ತಿದೆ.

ಸುಮಾರು ಎರಡು ದಶಕಗಳ ಕಿಂತ ಮುಂಚೆ ಜಗತ್ತಿನ ನಾನಾ ದೇಶಗಳು ಪ್ರಪಂಚದ ಭೂಪಟದಲ್ಲಿ ತನ್ನದೇ ಆದ ಯುದ್ಧ ಸಾಧನೆಗಳೊಂದಿಗೆ ರಾರಾಜಿಸುತ್ತಿದ್ದವು ಒಂದೊಂದು ದೇಶಗಳು ಒಂದೊಂದು ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದು ತಮ್ಮದೇ ಆದ ಶೈಲಿಯಲ್ಲಿ ಜಗತ್ತಿನ ಭೂಪುಟದಲ್ಲಿ ತಮ್ಮ ತಮ್ಮ ದೇಶದ ಮೈಲುಗಳನ್ನು ಸಾಧಿಸಿ ಜಂಬ ಕೊಚ್ಚಿಕೊಳ್ಳುವ ಕಾಲಹೊಂದಿತ್ತು ಆದರೆ ಎರಡು ದಶಕಗಳೆಂದೀಚೆಗೆ ನಮ್ಮ ಭಾರತವು ಬಲಿಷ್ಠವಾಗಿ ತುಂಬಾ ಭಿನ್ನವಾಗಿದ್ದ ಭಾರತದ ಪರಿಸ್ಥಿತಿ ಈಗ ಬದಲಾವಣೆಯ ಪರ್ವದೊಂದಿಗೆ ಇಡೀ ಜಗತ್ತೇ ಭಾರತದ ಕಡೆ ತಿರುಗಿ ನೋಡುವಂತೆಮಾಡಿದ್ದು ಇದಕ್ಕೆ ಮೂಲ ಕಾರಣ ಮತ್ತು ಸಾಕ್ಷಿ ಎಂದರೆ ನಮ್ಮ ದೇಶದ ಪೂರ್ವಜರು ಹಾಕಿಕೊಟ್ಟ ಸುಸಂಸ್ಕೃತ ಭದ್ರ ಬುನಾದಿಯೇಇವತ್ತು ನಮ್ಮ ಭಾರತ ದೇಶ ಇಷ್ಟೊಂದು ಹೆಮ್ಮರವಾಗಿ ಬೆಳೆಯಲು ಕಾರಣವಾಗಿದೆ ಇದಕ್ಕೆ ಪುಷ್ಟಿ ಎನ್ನುವಂತೆ ಇವತ್ತಿನ ಭಾರತ ಸರಕಾರ ಭಾರತೀಯರೆಲ್ಲರ ವ್ಯವಸ್ಥಿತ ರಕ್ಷಣೆಗೆ ಏನೆಲ್ಲ ಬೇಕು ಅದನ್ನೆಲ್ಲವನ್ನು ತಯಾರಿಸಿ ತನ್ನ ಒಡಲಲ್ಲಿ ಇಟ್ಟುಕೊಂಡಿದೆ ಪ್ರಪಂಚದ ಶ್ರೀಮಂತ ರಾಷ್ಟ್ರಗಳು ಮತ್ತು ಸಾಧಿಸಿದ ದೇಶಗಳು ಭಾರತೀಯ ಸಂಸ್ಕೃತಿಯ ಜೊತೆಗೆ ಇಡೀ ಭಾರತವನ್ನೇ ಅನುಸರಿಸುವಂತೆ ಇವತ್ತು ಪ್ರಪಂಚದ ಭೂಪಟದಲ್ಲಿ ಭಾರತ ಬೃಹದ್ದಕಾರವಾಗಿ ಬೆಳೆದಿದೆ ಭಾರತಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದ್ದು ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿ ಜಗತ್ತಿನ ಪ್ರತಿಯೊಂದು ರಾಷ್ಟ್ರಗಳು ಭಾರತದತ್ತ ಮುಖ ಮಾಡುವಂತ ವಾತಾವರಣವನ್ನು ಇವತ್ತು ಭಾರತ ನಿರ್ಮಿಸಿದ್ದು ಅದಕ್ಕೆ ಭಾರತೀಯರ ಸುಸಂಸ್ಕೃತವಾದ ಸಂಸ್ಕೃತಿಯೇ ಮುಖ್ಯವಾಗಿದ್ದು ಕೆಲವು ಸ್ತಿಮಿತ ಪರದೆಯಲ್ಲಿ ಬಂದಂತ ಅನೇಕ ಗಂಡಾಂತರಗಳನ್ನು ಜೊತೆಗೆ ಭಾರತೀಯರನ್ನು ದಾರಿ ತಪ್ಪಿಸುವ ಕೆಲಸವನ್ನು ಕೆಲವು ವಿದೇಶಗಳು ಮಾಡಿದರು ಇದೆಲ್ಲವನ್ನು ಮೆಟ್ಟಿನಿಂದ ಭಾರತ ವಿದೇಶದ ಪ್ರಜೆಗಳು ಭಾರತ ದೇಶಕ್ಕೆ ದೇವರ ಸ್ಥಾನಮಾನ ಕೊಟ್ಟು ಜಗತ್ತಿಗೆ ಭಾರತವೆಂದರೆ ದೇವಸ್ಥಾನ ವಿದ್ದಂತೆ ಎನ್ನುವ ಭಾವನೆ ಬೀರುವಷ್ಟು ಪ್ರಭಾವ ಜಗತ್ತಿನ ಜನರ ಮೇಲೆ ಬಿದ್ದಂತಹ ಸುಸಂದರ್ಭದಲ್ಲಿ ಭಾರತದ ಯೋಗವನ್ನು ಇಡೀ ವಿಶ್ವವೇ ಅನುಕರಣೆ ಮಾಡುತ್ತಿರುವಂತಹ ಕಾಲದಲ್ಲಿ ನಮ್ಮ ಭಾರತವು ಜಗತ್ತಿನ ಭೂಪಟದಲ್ಲಿ ಎಲ್ಲದರಲ್ಲೂ ಮುಂಚೂಣಿಯಲ್ಲಿ ಬರಬೇಕು ಎನ್ನುವ ಮಹಾದಶದೊಂದಿಗೆ ಸಾಧನೆಯ ಹೆಜ್ಜೆ ಮುಂದೆ ಇಡುತ್ತಿರುವಾಗಲೇ ಪಾಕಿಸ್ತಾನ ತನ್ನ ಕುತಂತ್ರ ಬುದ್ಧಿಯನ್ನು ಆಗಾಗ ತೋರಿಸುತ್ತಾ ಬಂದಿದೆ ಪಾಕಿಸ್ತಾನ ತನ್ನ ನೀಚ ಬುದ್ಧಿ ತೋರಿದಾಗಲೆಲ್ಲ ಕೆಲವು ಸರ್ಜಿಕಲ್ ಸ್ಟ್ರೈಕ್ ಮೂಲಕ ಭಾರತ ತಕ್ಕ ಉತ್ತರ ಕೊಟ್ಟರು ಇಡೀ ಜಗತ್ತೇ ಭಾರತ-ಕ್ಕೆ ತಲೆಬಾಗುವ ಪರಿಸ್ಥಿತಿ ಇದ್ದರೂ ಪಾಪಿ*** ಪಾಕಿಸ್ತಾನ ಮಾತ್ರ ತನ್ನ ಕುತಂತ್ರ ಬುದ್ಧಿಯನ್ನು ಭಾರತದ ಮೇಲೆ ತೋರಿಸುತ್ತಾ ಬಂದಿದೆ ಪಾಕಿಸ್ತಾನದ ಬುದ್ಧಿ ನರಿ ಬುದ್ಧಿತರ ಯೋಚನೆ ಮಾಡಿದರೆ ಭಾರತ ಆನೆ ನಡೆದಿದ್ದೇ ಮಾರ್ಗ ಎನ್ನುವಂತೆ ನಮ್ಮ ದೇಶ ಜಗತ್ತನ್ನೇ ಗೆಲ್ಲುವ ತವಕದಲ್ಲಿದೆ ಭಾರತವು ತನ್ನಸುತ್ತಮುತ್ತಲನ ಗಡಿಯಲ್ಲಿ ಭದ್ರವಾಗಿಸಿಕೊಂಡುತನ್ನಷ್ಟಕ್ಕೆ ತಾನು ಸುಮ್ಮನಿದ್ದರೂ ಪಾಕಿಸ್ತಾನ ಕಾಲು ಕೆದರಿ ಜಗಳಕ್ಕೆ ಬಂದಿರುವುದುಭಾರತದ ತಾಳ್ಮೆಗೆ ಧಕ್ಕೆ ತಂದಂತಾಗಿದೆ ಹಾಗಾಗಿ ಈ ಹಿಂದೆ ಪಾಕಿಸ್ತಾನ ದಾಳಿ ಮಾಡಿದಾಗಲೆಲ್ಲ ಭಾರತವು ತಕ್ಕ ಉತ್ತರ ನೀಡಿದರು ಭಾರತದ ಏಳಿಗೆ ಸಹಿಸದ ಕೆಲವು ರಾಷ್ಟ್ರಗಳು ಪಾಪಿ ಪಾಕಿಸ್ತಾನವನ್ನು ಚೂ ಬಿಟ್ಟುಭಾರತದ ಜೊತೆ ಆಟವಾಡುವ ಮೋಜುನೋಡುವ ತವಕದಲ್ಲಿವೆ ಆದರೆ ಭಾರತ ಮಾತ್ರ ಈ ಬಾರಿ ಪಾಕಿಸ್ತಾನಕ್ಕೆತಕ್ಕ ಬುದ್ಧಿ ಕಲಿಸದಿದ್ದರೆ ನಮ್ಮ ಭವ್ಯವಾದ ಭಾರತನಿರ್ಮಿಸುವ ಕನಸು ಬಗ್ನವಾಗಬಹುದುಎನ್ನುವ ವಿಚಾರ ಇಟ್ಟುಕೊಂಡು ನಮ್ಮ ಭವಿಷ್ಯಕ್ಕೆ ತೊಂದರೆಯಾಗುವುದಂತೂ ನಿಶ್ಚಿತ ಎಂದು ಯೋಚಿಸಿರುವ ಪ್ರಧಾನಮಂತ್ರಿ ಮೋದಿಜಿ ಜಗತ್ತಿನಲ್ಲಿ ಭಯೋತ್ಪಾದಕರನ್ನು ಹುಟ್ಟು ಹಾಕುವ ತಾಣವೇ ಪಾಕಿಸ್ತಾನವಾಗಿರುವುದರಿಂದ ಪಾಕಿಸ್ತಾನಕ್ಕೆ ತಕ್ಕ ಶಾಸ್ತಿ ಕಲಿಸಲು ಸಕಲ ಸನ್ನದ್ಧತೆ ಮಾಡಿಕೊಂಡು ಭಾರತೀಯ ಸೈನ್ಯಕ್ಕೆ ಮುಕ್ತ ಅವಕಾಶ ನೀಡಿ ನಿಮ್ಮ ಮನಸೋ ಇಚ್ಛೆ ಬಂದಂತೆ ಪಾಕಿಸ್ತಾನ ಹೊಡೆದು ಹಾಕಿ ಎಂದು ಹೇಳಿರುವುದು ನಮ್ಮ ಸೈನಿಕರಿಗೆ ಕೊಟ್ಟ ಪರಮ ಸ್ವತಂತ್ರವಾಗಿದ್ದು ಸೈನಿಕರು ಕೂಡ ಪಾಪಿ ಪಾಕಿಸ್ತಾನದ ಮೇಲೆ ರಕ್ತ ಕುದಿಯುತ್ತಿದ್ದು ತಮ್ಮ ಕುದಿಯುವ ರಕ್ತದಿಂದ ಸೇಡು ತೀರಿಸಿಕೊಳ್ಳುವ ತವಕದಲ್ಲಿ ದಿನದ 24 ಗಂಟೆಯಲ್ಲಿ ಯಾವುದೇ ಸಂದರ್ಭದಲ್ಲಿ ಪಾಕಿಸ್ತಾನದ ಮೇಲೆ ದಾಳಿ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದ್ದಕ್ಕೆ ಪಾಕಿಸ್ತಾನ ಸೈನಿಕರ ತಂಡ ಒಡಾಡುತ್ತಿದೆ ಆದರೆ ಪಾಕಿಸ್ತಾನಕ್ಕೆ ಹಿಂಬಾಕಲಿನಿಂದ ಸಹಾಯ ಮಾಡುವ ಚೀನಾದಂತ ಕೆಲವು ದೇಶಗಳು ಪಾಕಿಸ್ತಾನ ಚೂ ಬಿಟ್ಟು ಭಾರತದ ವಿರುದ್ಧ ದಾಳಿ ನಡೆಸುವಂತೆ ಷಡ್ಯಂತರ ರೂಪಿಸಿ ಪ್ರೇರೇಪಿಸುತ್ತವೆ ಆದರೂ ಇದರಿಂದ ಯಾವುದೇ ಪ್ರಯೋಜನ ಆಗುವುದಿಲ್ಲ ಅನ್ನುವುದು ಪಾಕಿಸ್ತಾನಕ್ಕೆ ಗೊತ್ತಿದ್ದರೂ ಅಲ್ಲಿನ ಜನರ ಜೊತೆ ಆಟವಾಡಲು ಪಾಕಿಸ್ತಾನ ತನ್ನ ನೀಚ ಬುದ್ಧಿ ತೋರಿಸುತ್ತಾ ಬಂದಿರುತ್ತದೆ ಹೀಗಾಗಿ ಮೊನ್ನೆ ನಡೆದ ಜಮ್ಮು ಕಾಶ್ಮೀರ ದಾಳಿಯ ನೋವಿನಿಂದ ಭಾರತವು ಪಾಕಿಸ್ತಾನ ಮತ್ತು ಪಾಕಿಸ್ತಾನದಲ್ಲಿರುವ ಉಗ್ರರ ಭಯೋತ್ಪಾದಕರ ತಾಣಗಳನ್ನು ಉಡಾಯಿಸದೆ ಬಿಡಲು ಸಾಧ್ಯವಿಲ್ಲ ಎಂದು ಈಗಾಗಲೇ ತನ್ನ ನಿಲುವನ್ನು ವ್ಯಕ್ತಪಡಿಸಿದ ತಕ್ಷಣವೇ ಭಾರತಕ್ಕೆ ಬಲಿಷ್ಠ ದೇಶಗಳು ಬೆಂಬಲ ವ್ಯಕ್ತಪಡಿಸುತ್ತಿದ್ದು ಭಾರತಕ್ಕೆ ಇನ್ನಷ್ಟು ಯುದ್ಧಕ್ಕೆ ಸ್ಪೂರ್ತಿ ನೀಡಿದಂತಾಗಿದೆ ಇಷ್ಟೆಲ್ಲ ಭಾರತದ ಶಕ್ತಿ ಇರುವಾಗ ಭಾರತದಲ್ಲಿಯೇ ಇರುವ ಕೆಲವು ಭಾರತದ ಗುಪ್ತ ಮಾಹಿತಿಯನ್ನು ಹಾಗೂ ಕೆಲವು ಸಂದೇಶಗಳನ್ನು ರವಾನಿಸಿದ್ದು ಒಳ ಒಳಗೆ ಪಾಕಿಸ್ತಾನಕ್ಕೆ ಸಪೋರ್ಟ್ ಮಾಡುವ ಮತ್ತು ಪ್ರೇರೇಪಿಸುವ ವ್ಯಕ್ತಿಗಳನ್ನು ಭಾರತದಿಂದ ಓಡಿಸಿದಾಗಲೇ ಮಾತ್ರ ಪಾಕಿಸ್ತಾನದ ಉಗ್ರರು ಮತ್ತು ಭಯೋತ್ಪಾದಕರನ್ನು ಹೊಡೆದುರುಳಿಸಲು ಸಾಧ್ಯವಾಗುವುದು ಹಾಗಾಗಿ ಭಾರತದ ದೇಶವಾಸಿಗಳಾದ ನಾವುಗಳು ಇಂತಹ ಕುತಂತ್ರಬುದ್ಧಿಗಳು ಇರುವ ಜಾಗವನ್ನು ಗುರುತಿಸಿ ಅವರಿಗೆತಕ್ಕ ಪಾಠ ಕಲಿಸಿದಾಗಲೇ ಮಾತ್ರ ಭಾರತದ ಪಾಕಿಸ್ತಾನದ ವಿರುದ್ಧ ಇರುವ ಕೆಚ್ಚಿಗೆ ಜಯಾ ಸಿಕ್ಕಂತಾಗುತ್ತದೆ....



ಜಗದೀಶ.ಎಸ್. ಗಿರಡ್ಡಿ.ಲೇಖಕರು. ಗೊರಬಾಳ.

# ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯಿಂದ ಸಂವಾದ

## ರಾಯಚೂರ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಯ ಅಂಶಗಳ ಶಿಪಾರಸ್ಸಿಗೆ ಸಲಹೆ

ರಾಯಚೂರು, ಮೇ 06: ಆರ್ಥಿಕ ತಜ್ಞರಾದ ಪ್ರೊ. ಎಂ.ಗೋವಿಂದರಾವ್ ಅವರ ಅಧ್ಯಕ್ಷತೆಯಲ್ಲಿ ರಚನೆಯಾದ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಸದಸ್ಯರಾದ ಎಸ್.ಟಿ.ಬಾಗಲಕೋಟೆ ಮತ್ತು ಸಂಗೀತಾ ಕೆ.ಎನ್. ಅವರನ್ನೊಳಗೊಂಡ ಸಮಿತಿಯು ಮೇ 6ರಂದು ರಾಯಚೂರ ಜಿಲ್ಲೆಗೆ ಭೇಟಿ ನೀಡಿತು.

ಈ ಸಮಿತಿಯು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮೇ 6ರಂದು ಹಮ್ಮಿಕೊಂಡಿದ್ದ ಜಿಲ್ಲಾಮಟ್ಟದ ಸಂವಾದ ಸಭೆಯಲ್ಲಿ ಪರಿಶಿಷ್ಟ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಸೇರಿದಂತೆ ರಾಯಚೂರ ನಗರದ ವಿವಿಧ ಸಂಘಟನೆಗಳು ಪ್ರಮುಖರು, ರೈತ ಹೋರಾಟಗಾರರು, ವಿದ್ಯಾರ್ಥಿ-ಯುವಜನ ಸಂಘಟನೆಗಳ ಮುಖಂಡರು ಸೇರಿದಂತೆ ಅನೇಕರು ಭಾಗಿಯಾಗಿ ಸಮಿತಿಗೆ ಹತ್ತಾರು ಸಲಹೆಗಳನ್ನು ನೀಡಿದರು.

ಬೆಳಗ್ಗೆ 11ಗಂಟೆಗೆ ಆರಂಭವಾದ ಸಭೆಯು ಮಧ್ಯಾಹ್ನ ಸುಮಾರು 2.20ರವರೆಗೆ ನಿರಂತರವಾಗಿ ನಡೆಯಿತು. ಶಾಸಕರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ನಗರದ ವಿವಿಧ ಸಂಘಟನೆಗಳ ಪ್ರಮುಖರು ಮತ್ತು ಇನ್ನಿತರರು ಒಬ್ಬೊಬ್ಬರಾಗಿ ಮಾತನಾಡಿ ಹಲವಾರು ಸಲಹೆಗಳನ್ನು ಸಮಿತಿಗೆ ನೀಡಿದರು.

ಶಾಸಕರಾದ ಬಸನಗೌಡ ದದ್ದಲ್ ಅವರು ಮಾತನಾಡಿ, ಅಧಿವೇಶನದಲ್ಲಿ ನಿರಂತರ ಪ್ರಶ್ನೆಗಳನ್ನು ಹಾಕಿದ ಬಳಿಕ ಡಾ.ಡಿ.ಎಂ.ನಂಜುಂಡಪ್ಪವರದಿ ನಂತರ ಈ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯನ್ನು ರಚಿಸಲಾಗಿದೆ. ನಂಜುಂಡಪ್ಪ ವರದಿಯಲ್ಲಿ ಈ ಭಾಗ ಹಿಂದುಳಿದಿದೆ ಎಂದು ತಿಳಿಸಿದ್ದರೂ ಸಹ ಸೂಕ್ತ ಅನುದಾನ ಸಿಗದೇ ನಮಗೆ ಅನ್ಯಾಯವಾಗಿದೆ. ನಮ್ಮಲ್ಲಿ ಪದವಿ ಕಾಲೇಜುಗಳು ಕಡಿಮೆ ಇವೆ. ತುಂಗಭದ್ರಾ ಕೃಷ್ಣಾ ಕಾಲುವೆಗಳಿದ್ದರೂ ನಮಗೆ ಸರಿಯಾದ ನೀರಿನ ಸೌಕರ್ಯವಿಲ್ಲ. ನಾವೇ ವಿದ್ಯುತ್ ಉತ್ಪಾದನೆ ಮಾಡಿದರು ನಮಗೆ ಸಮರ್ಪಕ ವಿದ್ಯುತ್ ಸಿಗುತ್ತಿಲ್ಲ. ಈ ಭಾಗದಲ್ಲಿ ಪ್ರತಿ ವರ್ಷ 50 ಸಾವಿರ ಜನರು ಗುಳೆ ಹೋಗುತ್ತಾರೆ ಎನ್ನುವ ಮಾಹಿತಿ ಇದೆ. ಅತಿಥಿ ಶಿಕ್ಷಕರ ಮೇಲೆಯೇ ಶಾಲೆಗಳು ನಡೆಯುತ್ತಿವೆ. ಇಲ್ಲಿ ಟೆಕ್ಸಟೈಲ್ ಪಾರ್ಕ, ಬಂಗಾರ ಉತ್ಪಾದನೆ ಆಗುವ ಜಿಲ್ಲೆಯಲ್ಲಿಯೇ ಜುವೆಲರಿ ಪಾರ್ಕ್ ಆಗಬೇಕು. ಹಾನಿಕಾರಕ ಫ್ಯಾಕ್ಟರಿಗಳ ಸ್ಥಾಪನೆಗೆ ಅವಕಾಶ ಕೊಡುವುದಿಲ್ಲ. ಪರಿಸರ ಸ್ನೇಹಿ ಕೈಗಾರಿಕೆಗಳ ಸ್ಥಾಪನೆಗೆ ಎಷ್ಟೇ ಜಾಗ ಕೇಳಿದರು ಕೊಡುತ್ತೇವೆ.. ಈ ಭಾಗದ ಜನರಲ್ಲಿ ಹೆಚ್ಚಿರುವ ಅಪೌಷ್ಠಿಕತೆಯು ನಿವಾರಣೆಯಾಗಬೇಕು. ಈ ಎಲ್ಲ ಅಂಶಗಳನ್ನು ಸಮಿತಿಯು ಶಿಪಾರಸ್ಸಿನಲ್ಲಿ ಅಳವಡಿಸಬೇಕು. ಸಮಯ ತೆಗೆದುಕೊಂಡು ಗ್ರಾಮ ಪಂಚಾಯತಗಳಿಗೆ ಸಹ ಭೇಟಿ ನೀಡಿ ವಾಸ್ತವವಾಂಶ ಅರಿಯಬೇಕು ಎಂದು ಸಲಹೆ ಮಾಡಿದರು.

ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಮಾತನಾಡಿ,



ಆರ್‌ಟಪಿಎಸ್, ವೈಟಿಪಿಎಸ್ ಮತ್ತು ರೈಸ್‌ಮಿಲ್‌ಗಳಿದ್ದರೂ ರಾಯಚೂರು ಜಿಲ್ಲೆ ಯಾಕೆ ಹಿಂದುಳಿದಿದೆ ಎಂಬುದರ ಬಗ್ಗೆ ಗಂಭೀರ ಚಿಂತನೆ ಮಾಡಬೇಕು. ಮುಖ್ಯವಾಗಿ ಆದಾಯವು ಎಲ್ಲರಿಗೂ ಸರಿ ಪ್ರಮಾಣದಲ್ಲಿ ಹಂಚಿಕೆಯಾಗಬೇಕು. 371 ಜೇ ಮೀಸಲು ಪಡೆದು ಆಯ್ಕೆಯಾದವರು ಕನಿಷ್ಟ10 ವರ್ಷಗಳ ಕಾಲವಾದರು ಈ ಪ್ರದೇಶದಲ್ಲಿಯೇ ಸೇವೆ ಸಲ್ಲಿಸುವಂತಾಗಬೇಕು. ಲೊಕಸೇವಾ ಆಯೋಗ, ಪರೀಕ್ಷಾ ಪ್ರಾಧಿಕಾರ ನಡೆಸುವ ಪರೀಕ್ಷೆಗಳಲ್ಲಿ ಪಾಸುಗುವವರ ಸಂಖ್ಯೆ ರಾಯಚೂರ ಜಿಲ್ಲೆಯಿಂದ ಕಡಿಮೆ ಇದೆ. ಖಾಲಿ ಹುದ್ದೆಗಳ ಸಂಖ್ಯೆ ಕೊಪ್ಪಳ, ಬಳ್ಳಾರಿ, ವಿಜಯನಗರ ಜಿಲ್ಲೆಗೆ ಹೋಲಿಸಿದರೆ ರಾಯಚೂರ ಜಿಲ್ಲೆಯಲ್ಲಿ ಕಡಿಮೆ ಇದೆ. ನುರಿತ ಶಿಕ್ಷಕರು, ಅಧಿಕಾರಿಗಳು, ವೈದ್ಯರು, ನೌಕರರು ಇದ್ದಾಗ ಮಾತ್ರ ಕೆಕೆಆರ್‌ಡಿಬಿ ನೀಡುವ ಅನುದಾನ ಸದ್ಬಳಕೆಯಾಗಲು ಸಾಧ್ಯ. ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಜನರನ್ನ ಮೇಲೆತ್ತಿದ್ದಾಗ ಮಾತ್ರ ನಾವು ಮೇಲೆ ಬರಲು ಸಾಧ್ಯಾಗುತ್ತದೆ. ಎಸ್ಸಿಎಸ್ಟಿ ಜನರ ಆರ್ಥಿಕ ಪರಿಸ್ಥಿತಿಯ ಅಧ್ಯಯನ ಆಗಬೇಕು. ಸಮಿತಿಯು ಈ ಅಂಶಗಳನ್ನು ಪರಿಗಣಿಸಬೇಕು ಎಂದು ತಿಳಿಸಿದರು.

ಹೋರಾಟಗಾರರಾದ ಬಸವರಾಜ ಕಳಸ ಅವರು ಮಾತನಾಡಿ, ಸಮರ್ಪಕವಾದ ವಿದ್ಯುತ್, ರಸ್ತೆ, ಕುಡಿವ ನೀರಿನಂತೆ ಮೂಲಸೌಕರ್ಯ ಇರುವ ಅಂದಾಜು ಹತ್ತು ಸಾವಿರ ಎಕರೆ ಲ್ಯಾಂಡ್ ಬ್ಯಾಂಕ್‌ಗೆ ಕ್ರಮವಹಿಸಿದಾಗ ಮಾತ್ರ ಈ ಭಾಗದಲ್ಲಿ ದೊಡ್ಡ ಕೈಗಾರಿಕೆಗಳ ಸ್ಥಾಪನೆ ಸಾಧ್ಯವಾಗಲಿದೆ. ಇಲ್ಲಿನ ಪ್ರಾದೇಶಿಕ ಅಸಮಾನತೆ ತೊಲಗಲು ಏಮ್ಸ್ ಬೇಕೇಬೇಕು. ಜಿಲ್ಲೆಯಲ್ಲಿನ 3 ನಡುಗಡ್ಡೆಗಳನ್ನು ಪ್ರವಾಸಿ ತಾಣವಾಗಿಸಬೇಕು. ಹಳ್ಳಿಗಳ ವಾಸಸ್ಥಾನ ವಿಶೇಷವಾದ ರಾಯಚೂರನ್ನು ಪಕ್ಷಿದಾಮವಾಗಿಸಬೇಕು. ಸೆಕೆಂಡರಿ ಡೇಟಾ ಮೇಲೆ ಅವಲಂಬನೆ ಆಗದೇ ಪ್ರಾಥಮಿಕ ಡೇಟಾ ಆಧರಿಸಿ ಶಿಫಾರಸ್ಸು ಮಾಡಬೇಕು ಎಂದು ಸಲಹೆ ಮಾಡಿದರು.

ಚಿಂತಕರಾದ ತ್ರಿವಿಕ್ರಮ ಜೋಶಿ ಅವರು ಮಾತನಾಡಿ, ಡಾ.ಡಿ.ಎಂ.ನಂಜುಂಡಪ್ಪ ಅವರ ಕಾಲಕ್ಕೆ ಮೊಬೈಲ್ ಇರಲಿಲ್ಲ. ಈಗ ಎಲ್ಲರ ಬಳಿಯಲ್ಲೂ ಮೊಬೈಲ್ ಇವೆ. ಬೆಂಗಳೂರಂತಹ ಸಿಟಿಗಳಲ್ಲಿ ಸ್ವಿಗ್ಗಿ, ಡಾಮಿನೋಸ್ ಅಂತಹ ಮೊಬೈಲ್ ಆಪ್ ಬಳಕೆಯಿಂದಾಗಿ ಸಾವಿರಾರು ಜನರಿಗೆ ಉದ್ಯೋಗ ಸಿಗುತ್ತಿದೆ. ಇವತ್ತು ಹಲವಾರು ಸಾಪ್ಟವೇರ್‌ಗಳಿವೆ. ಎಐ ಇದೆ. ಇದರ ಬಳಕೆ ಆಗಬೇಕು. ಈ ಮೂಲಕ ಈ ಭಾಗದ ಮಾನವ ಸಂಪನ್ಮೂಲದ ಬೆಳವಣಿಗೆ ಆಗಲು ಶಿಫಾರಸ್ಸು ಮಾಡಬೇಕು ಎಂದು ಸಲಹೆ ಮಾಡಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆಯ ಜಿಲ್ಲಾಧ್ಯಕ್ಷರಾದ ಅಬ್ದುಲ್ ಮಾಜಿದ್ ಅವರು ಮಾತನಾಡಿ, ಅಕ್ರಮವಾಗಿ ನೀರು ಸಂಗ್ರಹಣೆ ಮಾಡಿ ನೀರು ಮಾರಾಟ ಮಾಡುವ ಜಾಲವನ್ನು ತೊಲಗಿಸಬೇಕು. ಸುಸಜ್ಜಿತ ಜಿಲ್ಲಾಸ್ಪತ್ರೆನಿರ್ಮಾಣವಾಗಬೇಕು. ಮೇಲ್ದರ್ಜೆಗೇರಿರುವ ಮಹಾನಗರ ಪಾಲಿಕೆಗೆ ಸೂಕ್ತ ಅನುದಾನ ನೀಡಬೇಕು ಎಂದರು.

ಈ ಭಾಗದ ವಿದ್ಯಾರ್ಥಿ ಯುವಜನರಿಗೆ ಕೌಶಲ ತರಬೇತಿಗೆ ಏರ್ಪಾಡು ಮಾಡಬೇಕು. ಕೈಗಾರಿಕಾ ಪ್ರದೇಶದ ಬೆಳವಣಿಗೆಗೆ ಒತ್ತು ಕೊಡಬೇಕು. ರಾಯಚೂರ ಸಿಟಿಯಲ್ಲಿ ಉತ್ತಮ ರಸ್ತೆ, ಉತ್ತಮ ಗಟಾರು, ಉತ್ತಮವಾಗಿ ಲೇಔಟಗಳ ನಿರ್ಮಾಣದ ವಿಷಯದ ಬಗ್ಗೆ ಸಮಿತಿ ಶಿಪಾರಸ್ಸು ಮಾಡಬೇಕು ಎಂದು ಸಮಾಜ ಸೇವಕರಾದ ಲಕ್ಷ್ಮಿ ??ರೆಡ್ಡಿ ಅವರು ಸಲಹೆ ಮಾಡಿದರು.

ರಾಯಚೂರ ಜಿಲ್ಲೆಯಲ್ಲಿ ಕಾಂಪ್ಲೆಕ್ಸಗಳಲ್ಲಿ ಶಿಕ್ಷಣ ಸಂಸ್ಥೆಗಳು ಸ್ಥಾಪನೆಯಾಗಿ ಶಿಕ್ಷಣದ ವ್ಯಾಪಾರೀಕರಣ ನಡೆಯುತ್ತಿದೆ. ವಿವಿಧ ದುಶ್ಚಟಗಳಿಗೆ ಬಲಿಯಾಗಿ 30 ವರ್ಷಗೊಳಗಡೆಯೇ ಯುವಕರು ಮರಣ ಹೊಂದುತ್ತಿದ್ದಾರೆ. ಇದು ಬದಲಾಗಬೇಕು. ವಿದ್ಯಾರ್ಥಿ ಯುವಜನರನ್ನು ಮುಖ್ಯವಾಗಿರಿಸಿಕೊಂಡು ಮಹತ್ವದ ಯೋಜನೆಗಳ ಜಾರಿ ಮಾಡಲು ಸಮಿತಿಯು ಶಿಪಾರಸ್ಸು ಮಾಡಬೇಕು ಎಂದು ಯುವ ಹೋರಾಟಗಾರರಾದ ಜೈಭೀಮ ಅವರು ಸಭೆಗೆ ಸಲಹೆ ಮಾಡಿದರು. ಗಣ್ಯ-ರಿಂದ ಸಲಹೆಗಳನ್ನು ಕೇಳಿದ ಬಳಿಕ ಸಮಿತಿಯ ಸದಸ್ಯರಾದ ಎಸ್.ಟಿ.ಬಾಗಲಕೋಟೆ ಅವರು ಮಾತನಾಡಿ, ಡಾ.ಡಿ.ಎಂ.ನಂಜುಂಡಪ್ಪ ವರದಿಯ ಅನುಷ್ಠಾನದಿಂದ ತಾಲೂಕುಗಳು ಅಭಿವೃದ್ಧಿ ಹೊಂದಿರುವ ಬಗ್ಗೆ ಹಾಗೂ ಅಭಿವೃದ್ಧಿ ಹೊಂದದೇ ಇರುವ ತಾಲೂಕುಗಳನ್ನು ಗುರುತಿಸಿ ಹೊಸದಾಗಿ ಸೂಚ್ಯಾಂಕವನ್ನು ಕಂಡು ಹಿಡಿದು ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡಲು ರಾಜ್ಯ ಸರ್ಕಾರವು ಈ ಸಮಿತಿಯನ್ನು ರಚಿಸಿದೆ. ಈ ಪ್ರಾದೇಶಿಕ ಅಸಮತೋಲನ ಸಮಿತಿಯು ಅಸಮತೋಲನ ನಿವಾರಿಸಲು ಕೆಲವು ಮುಖ್ಯ ಅಂಶಗಳನ್ನು ಸರಕಾರಕ್ಕೆ ಶಿಫಾರಸ್ಸು ಮಾಡಲಿದೆ ಎಂದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಅಶೋಕ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ತುಕಾರಾಂ ಪಾಂಡ್ವೆ, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಡಾ.ಟಿ.ರೋಣಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಜಯಪ್ರಕಾಶ್, ಕೈಗಾರಿಕಾ ಇಲಾಖೆಯ ಅಧಿಕಾರಿ ಬಸವರಾಜ ಯರಕಂಚಿ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೆ.ಬಿ.ಬಡಿಗೇರ, ಯುವಜನ ಸಬಲೀಕರಣ ಇಲಾಖೆಯ ಸಹಾಯಕ ನಿರ್ದೇಶಕರಾದ ವೀರೇಶ ನಾಯಕ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

# ವಿದ್ಯಾರ್ಥಿನಿ ಅಶ್ವಿನಿಗೆ ಶೇ.೯೦ರಷ್ಟು ಅಂಕ







ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಮೇ.6: ತಾಲೂಕಿನ ಗಡಿ ಭಾಗದ ಕಾಸರತೂಗಾಂವ ಗ್ರಾಮದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್‌ ನಡೆಯುವ ಎಸ್.ಎಸ್.ಬಿ ಅನುದಾನಿತ ಪ್ರೌಢ ಶಾಲೆಗೆ 2024-25ನೇಯ ಸಾಲಿನಲ್ಲಿ ಉತ್ತಮ ಫಲಿತಾಂಶ ಲಭಿಸಿದೆ. ವಿದ್ಯಾರ್ಥಿನಿ ಅಶ್ವಿನಿ ಶಿವಪುತ್ರ ಶೇ.90ರಷ್ಟು ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ ಎಂದು ಮುಖ್ಯಗುರು ಮಲ್ಲಿಕಾರ್ಜುನ ಪಾಟೀಲ್ ತಿಳಿಸಿದ್ದಾರೆ.

ಉಳಿದಂತೆ ರಾಣಿ ದಿಲೀಪ ಶೇ.89, ವೈಶಾಲಿ ಸಂಜೀವಕುಮಾರ ಶೇ.87ರಷ್ಟು ಅಂಕ ಪಡೆದಿದ್ದಾರೆ. 04 ವಿದ್ಯಾರ್ಥಿಗಳು ಅಗ್ರಶ್ರೇಣಿ, 13 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಮತ್ತು 05 ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಪಡೆದು ಕೊಂಡು ಶಾಲೆಗೆ ಕೀರ್ತಿ ತಂದು ಕೊಟ್ಟಿದ್ದಾರೆ.

ಹರ್ಷ: ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿ, ಆಡಳಿತಾಧಿಕಾರಿ ಮೋಹನ ರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ, ಮುಖ್ಯಗುರು ಮಲ್ಲಿಕಾರ್ಜುನ ಪಾಟೀಲ್, ವ್ಯವಸ್ಥಾಪಕ ಸಂತೋಷ ಪಾಟೀಲ್, ಸ್ಥಾನಿಕ ಕಮಿಟಿ ಅಧ್ಯಕ್ಷ ಪ್ರಭುಶೆಟ್ಟಿ ಬಿರಾದಾರ್, ಶಿವರಾಜ ಪಾಟೀಲ್ ಸೇರಿದಂತೆ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತ ಪಡಿಸಿದ್ದಾರೆ.

# ಪರಿಶಿಷ್ಟ ಜಾತಿ ಒಳಮೀಸಲಾತಿ ಸಮಗ್ರ ಸಮೀಕ್ಷೆ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಮೇ06:ಕರ್ನಾಟಕ ಸರ್ಕಾರ ಪರಿಶಿಷ್ಟ ಜಾತಿ, ಮೂಲ ಜಾತಿ ಸಮಗ್ರ ಸಮೀಕ್ಷೆ–2025ರ ಪರಿಶಿಷ್ಟ ಜಾತಿ ಒಳಮೀಸಲಾತಿ ಮೇ 15ರ ಸರ್ವೆ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಶ್ರೀ ಚನ್ನಬಸಪ್ಪ ಅವರು ತಿಳಿಸಿದ್ದಾರೆ.

ಯಾದಗಿರಿ ಜಿಲ್ಲೆಯಲ್ಲಿ ಒಳ ಮೀಸಲಾತಿ ಸರ್ವೆ 2025ರ ಮೇ 5 ರಿಂದ 17ರ ವರೆಗೆ ನಡೆಯಲ್ಲಿದೆ ಒಟ್ಟು 6 ತಾಲ್ಲೂಕುಗಳು 4 ವಿಧಾನಸಭಾ ಕ್ಷೇತ್ರಗಳು ಇರುತ್ತದೆ. ಒಟ್ಟು ಜಿಲ್ಲೆಯ ಗಣತಿದಾರರ ಸಂಖ್ಯೆ 1134 ಮತಗಟ್ಟೆವಾರು ಸಮೀಕ್ಷೆ ಮಾಡಲಾಗುವುದು. ಯಾದಗಿರಿ ವಿಧಾನಸಭಾ ಕ್ಷೇತ್ರ 268, ಶಹಾಪೂರ ವಿಧಾನಸಭಾ ಕ್ಷೇತ್ರ 265, ಗುರುಮಠಕಲ್ ವಿಧಾನಸಭಾ ಕ್ಷೇತ್ರ 284, ಸುರಪುರ ವಿಧಾನಸಭಾ ಕ್ಷೇತ್ರ 317, ಪ್ರತಿ 1 ರಿಂದ 12 ಮತಗಟ್ಟೆಗಳಿಗೆ ಒಬ್ಬರನ್ನು ಮೇಲ್ವಿಚರಕನ್ನು ನೇಮಿಸಲಾಗಿದೆ. ಪ್ರತಿ ವಿಧಾನ ಸಭಾವಾರು ಸಹಾಯಕ ಆಯುಕ್ತರು ಹುದ್ದೆಯ ಸಮಾನ ದರ್ಜೆಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳೆಂದು ನೇಮಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ 3 ನೇಮಿಸಲಾಗಿದೆ. ತಾಲ್ಲೂಕು ಮಟ್ಟದಲ್ಲಿ ಪ್ರತಿ ತಾಲ್ಲೂಕದಲ್ಲಿ 5 ರಂತೆ ನೇಮಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕ ಮಟ್ಟದಲ್ಲಿ ಒಳ ಮೀಸಲಾತಿ ಸಮೀಕ್ಷೆಯ ಬಗ್ಗೆ ತರಬೇತಿ ನೀಡಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೊಸಪೇಟೆಯ ಟ್ರಕ್ ಟರ್ಮಿನಲ್ ಲೋಕಾರ್ಪಣೆ.ರಾಜ್ಯದ ಬೊಕ್ಕಸಕ್ಕೆ ಸಾರಿಗೆಯಿಂದಲೇ ಆದಾಯ– ಮೂಲಸೌಕರ್ಯಕ್ಕೂ ಆದ್ಯತೆ : ರಾಮಲಿಂಗಾರೆಡ್ಡಿ

ಮಲ್ಲಮ್ಮ ನುಡಿ ವಾರ್ತೆ

ಹೊಸಪೇಟೆ (ವಿಜಯನಗರ) ಮೆ.6– ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ. ಸಂಸ್ಥೆ ಹೊಸಪೇಟೆ ಟ್ರಕ್ ಟರ್ಮಿನಲ್ ಲೋಕಾರ್ಪಣೆಗೊಂಡಿತು.ಸೋಮವಾರ ರಾಷ್ಟ್ರೀಯಹೆದ್ದಾರಿಗೆಹೊಂದಿಕೊಂಡಿರುವ ಸ್ಥಳದಲ್ಲಿ ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಉದ್ಘಾಟಿಸಿ ಮಾತನಾಡಿ ಬೆಂಗಳೂರು, ಮೈಸೂರು ಹೊರತುಪಡಿಸಿ ಸಂಪೂರ್ಣ ಸುಸಜ್ಜಿತ ಹಾಗೂ ಎಲ್ಲಾ ಸೌಕರ್ಯಗಳನ್ನು ಒಳಗೊಂಡ ಮೊದಲ ಲಾರಿ ಟರ್ಮಿನಲ್ ಹೊಸಪೇಟೆಯಲ್ಲಿ ಲೋಕಾರ್ಪಣೆಗೊಂಡಿರುವುದು ಸಂತಸದ ವಿಷಯವಾಗಿದೆ. ರಾಜ್ಯದ ಬೆಂಗಳೂರು, ದಾರವಾಡ, ಉತ್ತರಕನ್ನಡದ ದಾಂಡೇಲಿ, ಹುಬ್ಬಳ್ಳಿ ಹಾಗೂ ರಾಯಚೂರಿನಲ್ಲಿಯ ನೂತನ ಲಾರಿ ಟರ್ಮಿನಲ್ ನಿರ್ಮಾಣವಾಗಲಿವೆ ಎಂದರು.

**ಒಂದು ತಿಂಗಳು ಉಚಿತ:**

ಉದ್ಘಾಟನಾ ಸಮಾರಂಭದ ಸವಿನೆನಪಿಗಾಗಿ ಮೊದಲ ಒಂದು ತಿಂಗಳು ಉಚಿತ ಬಳಕೆಗೆ ಅನುವು ಮಾಡಲಾಗಿದೆ. ನಂತರ ಸುಸಜ್ಜಿತ ನಿರ್ವಹಣೆಗೆ ನಿಗದಿತ ದರ



ಪಾವತಿಸಬೇಕು ಎಂದರು.

ಲಾರಿ ಅಸೋಶಿಯೇಷನ್ ಅಧ್ಯಕ್ಷ ಷಣ್ಮುಖಪ್ಪ ಮಾತನಾಡಿ ಕಾರಣಾಂತರಗಳಿಂದ ಸ್ಥಗಿತಗೊಂಡ ಕಾಮಗಾರಿ ಸಚಿವ ರಾಮಲಿಂಗಾರಡ್ಡಿ ಹಾಗೂ ಶಾಸಕ ಗವಿಯಪ್ಪರವರ ವಿಶೇಷ ಆಸಕ್ತಿ ಲಾರಿ ಚಾಲಕರಿಗೆ ಆಶ್ರಯ ದೊರೆತಂತಾಗಿದೆ ಎಂದರು ಹೊಸಪೇಟೆಯಲ್ಲಿ ಮೊದಲ ಮಾದರಿ ಟರ್ಮಿನಲ್ ಆಗಿದ್ದು ಉಳಿದ 17 ಎಕರೆ ಪ್ರದೇಶವನ್ನು ಅಭಿವೃದ್ಧಿ ಪಡಿಸುವ ಮೂಲಕ ಹೆಚ್ಚು ಪ್ರಯೋಜನ ಪಡೆಯುವಂತೆ ಮಾಡಬೇಕು ಎಂದರು.

ಹೊಸಪೇಟೆ ಶಾಸಕ ಹೆಚ್.ಆರ್.ಗವಿಯಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ ನಿತ್ಯವೂ ನಾಲ್ಕರಿಂದ ಐದು ಸಾವಿರ ಲಾರಿಗಳು ಸಂಚರಿಸಲಿದ್ದು ನಿತ್ಯವೂ ಅವರು ಪಡುವ ಪಾಡ ಹೇಳತೀರದಾಗಿತು ಈ ಲಾರಿ ಟರ್ಮಿನಲ್ ದೊಡ್ಡ ಕೊಡುಗೆಯಾಗಿದೆ ಲಾರಿ ಚಾಲಕರು, ಅಸೋಶಿಯೇಷನ್ ಸಂಘಗಳ ಪರವಾಗಿಯೂ ಸಾರಿಗೆ ಇಲಾಖೆಯ ಕಾರ್ಯಕ್ಕೆ ಕೃತಜ್ಞತೆ ಸಲ್ಲಿಸಿದರು.

ಸಮಾರಂಭ ಜರುಗಿತು. ಮುಖ್ಯ ಅತಿಥಿಗಳಾಗಿ ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎನ್.ಎಫ್.ಇಮಾಮ್ ನಿಯಾಜಿ ಅತಿಥಿಗಳಾಗಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಪಂ ಸಿಇಒ ನೊಂಗ್ಜಾಯ್ ಅಕ್ರಮ್ ಅಲಿ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಲ್.ಶ್ರೀಹರಿಬಾಬು ಉಪಸ್ಥಿತರಿದ್ದರು. ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶಿವಪ್ರಕಾಶ್, ಗುತ್ತಿಗೆದಾರ ಸುಬ್ಬಾರಡ್ಡಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಗ್ರಾಮಸ್ಥರ ಸಹಕಾರವಿದ್ದಾಗ ಮಾತ್ರ ಅಭಿವೃದ್ಧಿ ಸಾಧ್ಯ–ಬಸವರಾಜ ರಾಯರೆಡ್ಡಿ



ಮಲ್ಲಮ್ಮ ನುಡಿ ವಾರ್ತೆ

ಕುಕನೂರ: ಪ್ರತಿ ಗ್ರಾಮದಲ್ಲೂ ಗ್ರಾಮಸ್ಥರು ಸಹಕರಿಸಿದಾಗ ಮಾತ್ರ ಅಭಿವೃದ್ಧಿ ಕಾರ್ಯಗಳು ಕಾರ್ಯಗತಗೊಳ್ಳಲು ಸಾಧ್ಯ ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ, ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕ ಬಸವರಾಜ ರಾಯರೆಡ್ಡಿ ಹೇಳಿದರು.


ತಾಲೂಕಿನ ಮಾಳೆಕೊಪ್ಪ ಗ್ರಾಮದಲ್ಲಿ ಮಾಳೆಕೊಪ್ಪ ಗ್ರಾಮದಿಂದ ಸೋಂಪುರ ರೈಲು ನಿಲ್ದಾಣದವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಬಸವರಾಜ ರಾಯರೆಡ್ಡಿ ಮಾತನಾಡುತ್ತಾ ಕ್ಷೇತ್ರದ ಗ್ರಾಮಗಳಿಗೆ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡುವ ನಿರೀಕ್ಷೆಯನ್ನು ಹೊಂದಿದ್ದು ಇದಕ್ಕೆಲ್ಲ ಗ್ರಾಮಸ್ಥರ ಸಹಕಾರ ಅತ್ಯವಶ್ಯಕವಾಗಿದೆ ಆದರೆ ಗ್ರಾಮಸ್ಥರು ಅಭಿವೃದ್ಧಿ ಕಾರ್ಯಕ್ಕೆ ಪೂರಕವಾದ ಅಂತಹ ಜಾಗ ನೀಡಲು ಹಿಂದೇಟು ಹಾಕುತ್ತಿರುವುದರಿಂದ ಅಭಿವೃದ್ಧಿ ಕುಂಠಿತಗೊಳ್ಳುತ್ತಿದೆ ಎಂದು ಹೇಳಿದರು.

ಕೇಂದ್ರ ಸರ್ಕಾರದ ಜಲಜೀವನ ಮಿಷನ್ ಯೋಜನೆಯಿಂದ ಕೈಗೆತ್ತಿಕೊಂಡ ಕುಡಿಯುವ ನೀರಿನ ಪೈಪ್ ಲೈನ್ ಕಾಮಗಾರಿ ಸಂಪೂರ್ಣವಾಗಿ ಖಾತೆ ಮಟ್ಟದಿಂದ ಕೂಡಿದ್ದು ಇದಕ್ಕೆ ಗ್ರಾಮಸ್ಥರು ಆಕ್ಷೇಪ ವ್ಯಕ್ತಪಡಿಸದೇ ಇರುವುದು ಪ್ರಮುಖ ಕಾರಣವಾಗಿದೆ. ಅದರಿಂದ ಯಾವುದೇ ಯೋಜನೆಯಾಗಲಿ, ಕಾಮಗಾರಿಗಳಾಗಲಿ ಗ್ರಾಮಸ್ಥರು ಉತ್ತಮ ರೀತಿಯಲ್ಲಿ ಕಾರ್ಯಗತಗೊಳಿಸುವಂತೆ ಅಧಿಕಾರಿಗಳನ್ನು ಸೇರಿದಂತೆ ರಾಜಕೀಯ ಹಾಗೂ ಗುತ್ತಿಗೆದಾರರನ್ನು ಒತ್ತಾಯಿಸಿದಾಗ ಮಾತ್ರ ಸದೃಢ ಕ್ರಮಕಾರಿ ನಿರ್ಮಾಣಗೊಳ್ಳಲು ಕಾರಣವಾಗುತ್ತದೆ ಎಂದು ಹೇಳಿದರು. ವೇಳೆಯಲ್ಲಿ ಪ್ರಮುಖವಾಗಿ ಮಳೆಕೊಪ್ಪ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೂರಿದು ಕಳೆದ ಮೂರು ತಿಂಗಳಿಂದ ಕುಡಿಯುವ ನೀರಿನ ಸಮಸ್ಯೆಯನ್ನು ಗ್ರಾಮಸ್ಥರು ಎದುರಿಸುತ್ತಿದ್ದಾರೆ ಎಂದು ಗ್ರಾಮದ ಮಹಿಳೆಯರು ಮನವಿ ನೀಡಿದಾಗ ತಿಂಗಳೊಳಗೆ ಹತ್ತಿರದ ತುಂಗಭದ್ರಾ ನದಿಯಿಂದ ಪ್ರತಿಯೊಬ್ಬರಿಗೂ 85 ಲೀಟರ್ ಕುಡಿಯುವ ನೀರನ್ನು ಸರಬರಾಜು ಮಾಡುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಗ್ರಾಮಸ್ಥರಿಗೆ ಭರವಸೆ ನೀಡಿದರು

ಈ ವೇಳೆಯಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ನಾಗರಾಜ ವೆಂಕಟಪುರ, ಹಾಗೂ ಸದಸ್ಯರು, ತಹಸಿಲ್ದಾರ ಪ್ರಾಣೇಶ್ ಹೆಚ್, ತಾಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ್ ಬಿರಾದರ, ಸೇರಿದಂತೆ ಅನೇಕ ಪ್ರಮುಖರು ಗ್ರಾಮಸ್ಥರು ಪಾಲ್ಗೊಂಡಿದ್ದರು.

> ಕಾರ್ಯಕ್ರಮ ಮುಗಿಯುತ್ತಿದ್ದಂತೆಯೇ ಗ್ರಾಮಸ್ಥರಾದ ರಮೇಶ್ ತಳವಾರ ಸುದ್ದಿಗಾರರೊಂದಿಗೆ ಮಾತನಾಡುತ್ತ ಶಾಸಕರು ಕಾರ್ಯಕ್ರಮದ ಶಿಷ್ಟಾಚಾರವನ್ನು ಉಲ್ಲಂಘಿಸಿದ್ದು ಪ್ರಥಮ ಪ್ರಜೆ ಎಂದೆನಿಸಿಕೊಂಡಿರುವ ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನು ಕಡೆಗಣಿಸಿ ಪಕ್ಷದ ಕಾರ್ಯಕರ್ತರಿಂದ ಕಾಮಗಾರಿಗೆ ಚಾಲನೆ ನೀಡಲು ತಿಳಿಸಿದ್ದು ನಿಜಕ್ಕೂ ಸರ್ಕಾರದ ಶಿಷ್ಟಾಚಾರಕ್ಕೆ ಗೌರವ ತಂದಂತಾಗಿದೆ ಎಂದು ಪತ್ರಿಕಾ ವರದಿಗಾರರಿಗೆ ಅಭಿಪ್ರಾಯ ವ್ಯಕ್ತಪಡಿಸಿದರು.

# ಸಿ.ಚನ್ನಬಸವಣ್ಣನವರ ಬೇರು ಲೋಹಿಯಾ ಮೂಲದ್ದು:ಸವಿತಾ ನಾಗಭೂಷಣ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ, ಮೇ.05: ಪ್ರಕಾಶಕ ಸಿ .ಚನ್ನಬಸವಣ್ಣ ಅವರ ಬೇರುಗಳು ಗಾಂಧಿ, ಬಸವ ಮತ್ತು ಲೋಹಿಯಾ ಮೂಲದ್ದು. ಅವರು ತಮ್ಮ ಪ್ರಕಾಶನದ ಮೂಲಕ ಪ್ರಕಟಿಸಿದ ಪುಸ್ತಕಗಳು ನಾಡಿನಲ್ಲಿ ಜ್ಞಾನ ವಿಸ್ತರಿಸಿವೆಂದು ಲೇಖಕಿ ಸವಿತಾ ನಾಗಭೂಷಣ ಅಭಿಪ್ರಾಯಪಟ್ಟರು.

ಪ್ರಕಾಶಕ ಚನ್ನಬಸವಣ್ಣ ಅವರ ಗುಣವಿಶೇಷಗಳನ್ನು ಆಧರಿಸಿದ ಲೇಖನಗಳ 'ಚುಂಬಕ ಗಾಳಿ' ಪುಸ್ತಕವನ್ನು ನಿನ್ನೆ ನಗರದ ರಾಘವ ಕಲಾ ಮಂದಿರದಲ್ಲಿ ಲೋಕಾರ್ಪಣೆಗೊಳಿಸಿ

ಮಾತನಾಡಿದರು. ಚನ್ನಬಸವಣ್ಣ ಅವರು ತಮ್ಮ ಲೋಹಿಯಾ ಪ್ರಕಾಶನದ ಮೂಲಕ ಲೇಖಕರನ್ನು

ಮೆರೆಸಿದವರು. ಲೇಖಕರನ್ನು ಅವರಂತೆ ಗೌರವಯುತವಾಗಿ ನಡೆಸಿಕೊಂಡ ಪ್ರಕಾಶಕರೇ ಇಲ್ಲ. ಚನ್ನಬಸವಣ್ಣ ಅವರ ವೈಚಾರಿಕ ಬದುಕು ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದ್ದು ಲೋಹಿಯಾ ಹಾಗೂ ಗಾಂಧೀವಾದವನ್ನು ಮೈಗೂಡಿಸಿಕೊಂಡಿರುವ ಚನ್ನಬಸವಣ್ಣನವರು ಸಮ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸಿದ ಬಸವಣ್ಣನವರ ಆಶಯದಂತೆಯೇ ಬದುಕು ಕಟ್ಟಿಕೊಂಡ ಮಹನೀಯರು.

ಲಿಂಗಮೆಚ್ಚಿ ಅಹುದು ಅಹುದು ಎನುವಂಥ ವ್ಯಕ್ತಿತ್ವದ ಚನ್ನಬಸವಣ್ಣನವರ ಚುಂಬಕ ಗಾಳಿ ಕೃತಿಯಲ್ಲಿ ನಾಡಿನ ಅನೇಕ ಖ್ಯಾತ ಲೇಖ–ಕರು ತಮ್ಮ ಚನ್ನಬಸವಣ್ಣನವರ ಒಡನಾಟವನ್ನು ಕಟ್ಟಿಕೊಟ್ಟಿದ್ದಾರೆ ಎಂದು ತಿಳಿಸಿದರು.

ನವದೆಹಲಿಯ ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಮಂಡಳಿ ಸದಸ್ಯ ಡಾ. ಚಿದಾನಂದ ಸಾಲಿ ಮಾತನಾಡಿ, ಬೆಂಗಳೂರು ಹೊರತಾದ ಬಳ್ಳಾರಿ ಕೇಂದ್ರಿತ ಪ್ರಕಾಶನವನ್ನು ಅವರು ಕಟ್ಟಿದರು. ಪ್ರಕಾಶಕರಾಗಿ ಅವರು ಮಾಡಿದ ಸಾಧನೆಯನ್ನು ಕನ್ನಡ ನಾಡು ಮರೆಯುವಂತಿಲ್ಲ. ಓದುಗಸ್ನೇಹಿ ಪ್ರಕಾಶಕರು ಚನ್ನಬಸವಣ್ಣ. ಮಾರುಕಟ್ಟೆಯೇ ಇಲ್ಲ ಎಂಬಂತವರ ಲೇಖನಗಳನ್ನು

ಅವರು ಪ್ರಕಟಿಸಿದರು. ಹಲವರು ಲೇಖಕರಾಗಿ ಬೆಳೆಯುವುದರ ಹಿಂದೆ ಅವರ ಕೊಡುಗೆ ಇದೆ. ಅವರು ನಾಡಿನ ಅಘೋಷಿತ ಸಾಂಸ್ಕೃತಿಕ ಇತಿಹಾಸಕಾರ. ಸಾರ್ವಜನಿಕ ವೈಭವೀಕರಣಕ್ಕೆ ಅವರು ಒಪ್ಪುವುದಿಲ್ಲ. ಆತ್ಮಚರಿತ್ರೆಗಳ ಬಗ್ಗೆ ಅವರಿಗೆ ಒಲವಿಲ್ಲ. ಆದರೂ, ಅವರು ತಮ್ಮ ಆತ್ಮಚರಿತ್ರ ಬರೆಯಲೇ ಬೇಕು. ಅದು ಕರ್ನಾಟಕದ ಸಂಗ್ರಹಣಾ ಗ್ರಂಥವಾಗಲಿದೆ. ಅದಕ್ಕೆ ಸಾಂಸ್ಕೃತಿಕ ಮಹತ್ವವಿರಲಿದೆ ಎಂದು ಪ್ರತಿಪಾದಿಸಿದರು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸದಸ್ಯ ಡಾ. ಜಾಜಿ ದೇವೇಂದ್ರಪ್ಪ ಮಾತನಾಡಿ, 'ಕನ್ನಡದ ಕಡು ವ್ಯಾಮೋಹಿ ಚನ್ನಬಸವಣ್ಣ. ಆಂಧ್ರದಲ್ಲಿ ಕಳೆದು ಹೋದ ಕನ್ನಡದ ನತದೃಷ್ಟ

ಪ್ರದೇಶಗಳ ಬಗ್ಗೆ ಅವರಿಗೆ ಅಪಾರವಾದ ಮಮಕಾರವಿದೆ' ಎಂದರು. ಅಪ್ಪಟ ಕನ್ನಡ ಪ್ರೇಮಿಯಾಗಿರುವ ಚನ್ನಬಸವಣ್ಣನವರು ಭೌಗೋಳಿಕವಾಗಿ ಆಂಧ್ರಪ್ರದೇಶದಲ್ಲಿದ್ದರೂ

ಕನ್ನಡವನ್ನೇ ಉಸಿರಾಗಿಸಿಕೊಂಡವರ ನೂರಾರು ಕನ್ನಡಿಗರ ಜೊತೆ ಚನ್ನಬಸವಣ್ಣನವರ ಒಡನಾಟವಿದೆ. ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ವಕ್ತಾರರಂತೆಯೇ ಕಂಡು ಬರುವ

ಚನ್ನಬಸವಣ್ಣನವರ ಜೊತೆಗಿನ ಒಡನಾಟ ನಮಗೆ ಅನನ್ಯ ತಿಳಿಹು ನೀಡಿದೆ ಎಂದು ತಿಳಿಸಿದರು.

ಅಂಕಣಕಾರ ಚಂದ್ರಕಾಂತ ವಡ್ಡು, 'ಪುಸ್ತಕ ಸಿದ್ಧತೆ ಆರಂಭವಾಗಿದ್ದು ವರ್ಷದ ಹಿಂದೆ. ಪುಸ್ತಕ ಇಷ್ಟು ಪ್ರಚಾರ ಪಡೆದುಕೊಳ್ಳುವುದರ ಹಿಂದೆ ಚನ್ನಬಸವಣ್ಣ ಅವರ ವ್ಯಕ್ತಿತ್ವ ಕಾಣುತ್ತದೆ. ಇದು ಅಭಿನಂದನಾ ಗ್ರಂಥ ಅಲ್ಲ ಕೃತಜ್ಞತಾ ಪುಸ್ತಕ' ಎಂದರು. ಇದೇ ವೇಳೆ ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಪರಿಸರ ಮೇಲಾಗುತ್ತಿರುವ ದಾಳಿಗಳ

ಕುರಿತು ಪ್ರಸ್ತಾಪಿಸಿದ ಲೇಖಕ ವಡ್ಡು, ಪುಸ್ತಕದ ಓದಿನ ಜತೆಗೆ, ಪರಿಸರ ಕಾಳಜಿಗಳು ಹೆಚ್ಚಾಗಬೇಕು. ಬಳ್ಳಾರಿ, ಕೊಪ್ಪಳದಲ್ಲಿ ಪರಿಸರಕ್ಕೆ ಸಂಬಂಧಿಸಿದ ಹಲವು ಸವಾಲುಗಳಿವೆ.

ಇಲ್ಲಿನ ಜನರಿಗೆ ಪರಿಸರ ಕಾಳಜಿ ಇದೆ. ಇಲ್ಲಿ ಆಗುತ್ತಿರುವ ಪರಿಸರ ಹಾನಿ ಬಗ್ಗೆ ಎಲ್ಲರೂ ಹೋರಾಡಬೇಕು ಎಂದು ತಿಳಿಸಿದರು. ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಸಂಡೂರು ವಿರಕ್ತಮಠದ ಶ್ರೀಪ್ರಭುಸ್ವಾಮಿ ಮಾತನಾಡಿದರು.


ಕನ್ನಡ ಪುಸ್ತಕ ಲೋಕಕ್ಕೆ ಚನ್ನಬಸವಣ್ಣನವರು ನೀಡಿದ ಕೊಡುಗೆಯ ಕುರಿತು ವಿವರಿಸಿದ ಪ್ರಭು ಸ್ವಾಮಿಗಳು, ಇಂತಹ ಅಪರೂಪದ ವ್ಯಕ್ತಿತ್ವ ನಮ್ಮಗಳ ಜೊತೆ ಒಡನಾಟ ಇರುವುದೇ ದೊಡ್ಡ ಭಾಗ್ಯ ಎಂದೇ ಭಾವಿಸಬೇಕು ಎಂದು ಹೇಳಿದರು. ಬಳ್ಳಾರಿಯಲ್ಲಿ ಈ ಹಿಂದೆ ಇದ್ದ ಕನ್ನಡ ವಾತಾವರಣ, ಸಾಂಸ್ಕೃತಿಕ ಪರಿಸರ. ಈಗಿನ ಸ್ಥಿತಿಗತಿ ಕುರಿತು ವಿವರಿಸಿದರಲ್ಲದೆ, ಕನ್ನಡ ಕಟ್ಟಬೇಕಾದವರೇ ಇಂಗ್ಲೀಷ್ ಮೋಹದ ಪಾಶಕ್ಕೆ ಒಳಗಾಗಿದ್ದಾರೆ. ಕನ್ನಡ ಶಿಕ್ಷಕರೇ ಕನ್ನಡವನ್ನು ಉಳಿಸುವ ಕೆಲಸವನ್ನು ಜವಾಬ್ದಾರಿ ವಹಿಸದಿರುವುದು ಕಂಡು ಬರುತ್ತಿದೆ. ಹೀಗಾಗಿದರೆ ಭಾಷಾ ಉಳಿವು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಮಾತನಾಡಿದರು. ಪತ್ರಕರ್ತ ಕೆ.ಎಂ ಮಂಜುನಾಥ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಶಿಧರ ಮೇಟಿ ಹಾಗೂ ಲೇಖಕಿ ಎನ್.ಡಿ.ವೆಂಕಮ್ಮ ಅವರು ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮ ಮುನ್ನ ನಗರದ ಗಾಂಧಿಭವನದಲ್ಲಿ ಗಾಂಧೀಜಿಯವರ ಸಮಾಧಿಗೆ ಪುಷ್ಪಾರ್ಪಣೆ ಮಾಡಿದ ನಗರದ ಹಿರಿಯರು, ಲೇಖಕರು ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ಗಾಂಧಿಭವನದಿಂದ ಕಾರ್ಯಕ್ರಮ ಜರುಗುವ ರಾಘವ ಕಲಾ ಮಂದಿರವರೆಗೆ ಲೋಹಿಯಾ ಪ್ರಕಾಶನದ ಪುಸ್ತಕಗಳನ್ನು ಹೊತ್ತು ಮೆರವಣಿಗೆಯಲ್ಲಿ ಬಂದರು. ಹಿರಿಯ ಲೇಖಕ ಗಂಗಾಧರ ಪತ್ತಾರ, ಹಿರಿಯ ವಕೀಲ ಉಡೇದ ಬಸವರಾಜ, ಚೋರನೂರು ಕೊಟ್ರಪ್ಪ, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷ ಯಶ್ವಂತರಾಜ್ ನಾಗಿರೆಡ್ಡಿ, ಲೇಖಕ ಡಾ. ಅರವಿಂದ ಪಾಟೀಲ್, ವೀರೇಂದ್ರ ರಾವಿಹಾಳ್, ಅಜಯ್ ಬಣಕಾರ, ಸಿದ್ಧರಾಮ ಕಲ್ಮಠ, ಪ್ರಭುದೇವ ಕಪ್ಪಗಲ್ಲು, ಕಲ್ಲುಕಂಬ ಪಂಪಾಪತಿ, ಸಂಡೂರು ವಿರಕ್ತಮಠದ ಪ್ರಭುಸ್ವಾಮಿ, ಚಿತ್ರಕಲಾವಿದ ಮಂಜುನಾಥ ಗೋವಿಂದವಾಡ, ಎಂ.ಜಿ.ಗೌಡ, ರಮಣಪ್ಪ ಭಜಂತ್ರಿ ಸೇರಿದಂತೆ ಅನೇಕರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಕವಲೂರಿನಲ್ಲಿ ಶ್ರೀ ಉಜ್ಜಯಿನಿ ಜಗದ್ಗುರಗಳ ಅಡ್ಡಪಲ್ಲಕ್ಕಿ

# ಉತ್ಸವ. ಶ್ರೀಗಳ ಭವ್ಯ ಮೆರವಣಿಗೆ, ಕುಂಭೋತ್ಸವ,ಧರ್ಮ ಜಾಗೃತಿ ಸಭೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ತಾಲ್ಲೂಕಿನ ಕವಲೂರು ಗ್ರಾಮದಲ್ಲಿ ಉಜ್ಜಯಿನಿಯ ಶ್ರೀ ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳ ಅಡ್ಡಪಲ್ಲಕ್ಕಿ ಮಹೋತ್ಸವ ಮೇ,7 ಬುಧವಾರ ಅತ್ಯಂತ ಅದ್ದೂರಿಯಿಂದ ನಡೆಯಲಿದೆ.

> ಅಜ್ಞಾನದಿಂದ ಜ್ಞಾನದ ಕಡೆ, ಕತ್ತಲೆಯಿಂದ ಬೆಳಕಿನೆಡೆ ಕರೆದುಕೊಂಡು ಹೋಗುವ ಅಧ್ಬುತ ಶಕ್ತಿ ಗುರು, ಕಾರಣ ಗುರುಗಳನ್ನು ಭಯ ಭಕ್ತಿಯಿಂದ ಪೂಜಿಸಿ ಗೌರವಿಸುವದು ನಮ್ಮ ರ್ತವ್ಯ ಆಗಿದೆ.
>
> **–ತಿಮ್ಮಣ್ಣ ಸಿದ್ನೆಕೊಪ್ಪ ಗ್ರಾಮದ ಮುಖಂಡ ಕವಲೂರು.**

> ಕವಲೂರು ಗ್ರಾಮ ಭಕ್ತಿಯ ಶಕ್ತಿ ಕೇಂದ್ರ ಆಗಿದೆ. ಭಕ್ತರಿಗೆ ಶಕ್ತಿ ತುಂಬುವ ಕೆಲಸ ಮಾಡುವ ಹಾಗೂ ಬದುಕಿನ ಹಾದಿ ತೋರುವ ಗುರುವನ್ನು ಭಕ್ತಿಯಿಂದ ನಮಿಸಲಾಗುತ್ತಿದೆ. ಧರ್ಮಿಕ ಸಭೆ ಕೂಡ ನಡೆಯಲಿದೆ.
>
> **–ಮಹಾಂತೇಶ ಸಿಂದೋಗಿಮಠ, ಗ್ರಾಮದ ಮುಖಂಡ ಕವಲೂರು.**

ಗ್ರಾಮದ ಶ್ರೀಮಾರುತೇಶ್ವರ ದೇವಸ್ಥಾನದಿಂದ ಹೂ ಹಾಗೂ ಅಲಂಕಾರಿಕ ವಸ್ತುಗಳಿಂದ ಅಲಂಕೃತಗೊಂಡ ಅಡ್ಡಪಲ್ಲಕ್ಕಿ ಮಹೋತ್ಸವ ಸಕಲ ಬಿರುದಾವಳಿಯೊಂದಿಗೆ ಮಹಿಳೆಯರ ಪೂರ್ಣಕುಂಭ, ಕಳಸ, ಕನ್ನಡಿ, ನಂದಿಕೋಲು ಹಾಗೂ ಸಕಲ ವಾದ್ಯ ಮೇಳದೊಂದಿಗೆ ಆರಂಭಗೊಳ್ಳುವ ಉಜ್ಜಯಿನಿಯ ಶ್ರೀಜಗದ್ಗುರುಗಳ ಅಡ್ಡಪಲ್ಲಕ್ಕಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಶ್ರೀದುರ್ಗಾದೇವಿ ದೇವಸ್ಥಾನವನ್ನು ತಲುಪಲಿದೆ.

ಸಾಯಂಕಾಲ 6 ಗಂಟೆಗೆ ಜನಜಾಗೃತಿ ಧರ್ಮ ಸಭೆ ನಡೆಯಲಿದೆ. ದಿವ್ಯ ಸಾನಿದ್ಯ ಉಜ್ಜಯಿನಿಯ ಶ್ರೀ ಜ.ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಲಿದ್ದಾರೆ, ನೇತೃತ್ವವನ್ನು ಅಳವಂಡಿಯ ಶ್ರೀಮರುಳಾರಾಧ್ಯ ಶಿವಾಚಾರ್ಯರು, ಮೈನಳ್ಳಿ–ಬಿಕನಳ್ಳಿಯ ಶ್ರೀಸಿದ್ದೇಶ್ವರ ಶಿವಾಚಾರ್ಯರು, ಕುಕನೂರಿನ ಶ್ರೀಮಹಾದೇವ ಸ್ವಾಮಿಗಳು, ಯಲಬುರ್ಗಾದ ಶ್ರೀಬಸವಲಿಂಗೇಶ್ವರ ಶಿವಾಚಾರ್ಯರು, ಗುಳೇದಗುಡ್ಡದ ಶ್ರೀಒಪ್ಪತ್ತೇಶ್ವರ ಸ್ವಾಮಿಗಳು, ಡೋಣಿಯ ಶ್ರೀಹಾಲಸೋಮೇಶ್ವರ ಸ್ವಾಮಿಗಳು. ಮುಖ್ಯ ಅತಿಥಿಗಳು ಪ್ರದೀಪಗೌಡ ಮಾಲಿಪಾಟೀಲ, ಬಸನಗೌಡ್ರ ಮಾಲಿಪಾಟೀಲ, ಶ್ರೀಗುರುಮೂರ್ತಿ ಸ್ವಾಮಿಗಳು ಇನಾಮದಾರ, ಮನೋಹರ ದೇಸಾಯಿ, ಶರಣಪ್ಪ ಸಿದ್ನೆಕೊಪ್ಪ, ಸುರೇಶಬಾಬು ಸಿಂದೋಗಿ, ವೀರೇಶ ಕೂಗು ಹಾಗೂ ಶ್ರೀದುರ್ಗಾದೇವಿ ಸಮಿತಿ ಹಾಗೂ ಗ್ರಾಮದ ಮುಖಂಡರು ವಹಿಸಲಿದ್ದಾರೆ.

ಜಾನಪದ ಸಂಗೀತ ಕಾರ್ಯಕ್ರಮ ಗವಿಸಿದ್ದಯ್ಯ ಹಳ್ಳಿಕೇರಿಮಠ ಹಾಗೂ ಶ್ರೀಗುರು ಪಂಚಾ–ಕ್ಷರಿ ಸಂಗೀತ ಸೇವಾ ಸಂಸ್ಥೆ ಸಂಗೀತ ಬಳಗದಿಂದ ನಡೆಯಲಿದೆ. ಮೇ,8 ರಿಂದ ಮೇ.11 ರವರೆಗೆ ಗುಳೇದಗುಡ್ಡ ಶ್ರೀಒಪ್ಪತ್ತೇಶ್ವರ ಸ್ವಾಮಿಗಳಿಂದ ಪ್ರವಚನ ಕಾರ್ಯಕ್ರಮ ನಡೆಯಲಿದೆ.

# ಬೆಳೆ ಹಾನಿ ಪ್ರದೇಶಕ್ಕೆ ಉಮೇಶ್ ಮುದ್ನಾಳ್ ಭೇಟಿ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಮೇ.6:ಕಳೆದ ಎರಡು ದಿನಗಳ ಹಿಂದೆ ಸುರಿದ ಬಿರುಗಾಳಿ ಸಹಿತ ಆಲಿಕಲ್ಲು ಮಳೆಗೆ ಹಾನಿಗೀಡಾದ ಪ್ರದೇಶಕ್ಕೆ ಅಖಿಲ ಭಾರತೀಯ ಕೋಲಿ ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿ ಉಮೇಶ್ ಮುದ್ನಾಳ್ ಇತ್ತಿಚೇಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲೂಕಿನ ತಾತಳಗೇರಾ ಸೇರಿ ಸುತ್ತಲಿನ ಹತ್ತಾರು ಗ್ರಾಮದಲ್ಲಿ ಅಕಾಲೊ ಮಳೆಗೆ ಭತ್ತ ನೆಲಕಚ್ಚಿ ಅಪಾರ ಪ್ರಮಾಣದ ಹಾನಿಯುಂಟಾಗಿದೆ. ತಾತಳಗೇರಾ ಗ್ರಾಮದ ರೈತ ಬಸಲಿಂಗಪ್ಪ ತನ್ನ ಹತ್ತಾರು ಎಕರೆ ಜಮೀನಿನಲ್ಲಿ ಬೆಳೆದ ಭತ್ತ ಉದುರಿ ಕಣ್ಣೀರು ಹಾಕಿದ್ದಾರೆ. ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿ ಉಮೇಶ್ ಮುದ್ನಾಳ್ ರೈತರ ಕಣ್ಣೀರು ಒರೆಸುವ ಕೆಲಸ ಮಾಡಿದ್ದಾರೆ. ಅಧಿಕಾರಿಗಳು ಅತಿವೃಷ್ಟಿಯಿಂದ ಹಾನಿಗೀಡಾದ ಪ್ರದೇಶಕ್ಕೆ ಭೇಟಿ ನೀಡದೆ ಕಾಲಹರಣ ಮಾಡ್ತಿದ್ದಾರೆ. ಇದು ತೀರಾ ಬೇಸರದ ಸಂಗತಿ ಅಂತ ಕಳವಳ ವ್ಯಕ್ತಪಡಿಸಿದ್ದಾರೆ. ಕೂಡಲೇ ಅಧಿಕಾರಿಗಳು ಭೇಟಿ ನೀಡಿ ಪರಿಹಾರ ನೀಡುವಂತೆ ಆಗ್ರಹಿಸಿದರು. ಈ ಸಂದರ್ಭದಲ್ಲಿ ತಾತಳಗೇರಾ ಗ್ರಾಮದ ರೈತರು ಹಾಗೂ ಮಹಿಳೆಯರು ಉಪಸ್ಥಿತರಿದ್ದರು.

# ವಿವಿಧ ಶಾಲೆಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಮೇ 06–ಸಮಗ್ರ ಶಿಕ್ಷಣ ಇಲಾಖೆಯಿಂದ ಜಿಲ್ಲೆಯ ಕೆ.ಜಿ.ಬಿ.ವಿ ವಸತಿ ಶಾಲೆ ಮತ್ತು ವಸತಿ ನಿಲಯಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಟೈಪ್ –1 ಅಥವಾ ಕೆ.ಜಿ.ಬಿ.ವಿ ಟೈಪ್–4 ವಸತಿ ಶಾಲೆ ಅಥವಾ ವಸತಿ ನಿಲಯಗಳಲ್ಲಿ 6 ರಿಂದ 8 (ಟೈಪ್–1 ವಸತಿ ಶಾಲೆ), 8 ರಿಂದ 10ನೇ ತರಗತಿ, (ಟೈಪ್–4 ವಸತಿನಿಲಯ), 8 ರಿಂದ 12 ನೇ ತರಗತಿ (ಕೆ.ಕೆ.ಜಿ.ಬಿ.ವಿ ವಸತಿ ನಿಲಯ)ಗೆ ಆಸಕ್ತರು ಆನ್‌ಲೈನ್ ಲಿಂಕ್: https:Vidyavahini.karnataka.gov.in ಅಥವಾ ಖುದ್ದು ವಸತಿ ಶಾಲೆ ಅಥವಾ ನಿಲಯಗಳಲ್ಲಿ ಭೇಟಿ ನೀಡಿ ಮೇ.20ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಕೆ.ಜಿ.ಬಿ.ವಿ ವಸತಿ ಶಾಲೆ ಅಥವಾ ವಸತಿ ನಿಲಯಗಳ ಮುಖ್ಯ ಶಿಕ್ಷಕರನ್ನು ಸಂಪರ್ಕಿಸುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರು ಹಾಗೂ ಸಮಗ್ರ ಶಿಕ್ಷಣ ಇಲಾಖೆಯ ಜಿಲ್ಲಾ ಯೋಜನಾ ಉಪ ಸಮನ್ವಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಾಥಮಿಕ ಆರೋಗ್ಯ ಕೇಂದ್ರ ಉದ್ಘಾಟನೆ, ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದ ಶಾಸಕ ಬಸವರಾಜ ರಾಯರೆಡ್ಡಿ




ಮಲ್ಲಮ್ಮ ನುಡಿ ವಾರ್ತೆ

ಕುಕನೂರ : ತಾಲೂಕಿನ ಚಿಕ್ಕೇನಕೊಪ್ಪ ರಾಜೂರ ಹಾಗೂ ಕುದುರಿಮೋತಿ ಗ್ರಾಮದಲ್ಲಿ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಕಾರ್ಯಕ್ರಮವನ್ನು ಮಂಗಳವಾರ ಆಯೋಜನೆ ಮಾಡಲಾಯಿತು.

ಈ ವೇಳೆಯಲ್ಲಿ ಚಿಕ್ಕೇನಕೊಪ್ಪ ಗ್ರಾಮದಲ್ಲಿ ಕಾರ್ಯಕ್ರಮವನ್ನು ಉದ್ದೇಶಿಸಿ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಮಾತನಾಡುತ್ತಾ ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಅಭಿವೃದ್ಧಿ ಕಾರ್ಯಗಳಿಗೆ ಸಾಕಷ್ಟು ಅಡಚಣಿಗಳು ಉಂಟಾಗುತ್ತಿರುವುದು ವಿಷಾದನೀಯ ಸಂಗತಿಯಾಗಿದ್ದು ಗ್ರಾಮಸ್ಥರು ಅಭಿವೃದ್ಧಿ ಕಾರ್ಯಗಳಿಗೆ ಕೈಜೋಡಿಸಿ ಉತ್ತಮ ಗುಣಮಟ್ಟದ ಕಾಮಗಾರಿಗಳನ್ನು ನಿರ್ಮಿಸಿಕೊಳ್ಳಲು ಮುಂದಾಗಬೇಕು ಎಂದು ಕರೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜ್ಯದ ಬಡ ಜನತೆಗಾಗಿ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದ್ದು. ಗ್ಯಾರಂಟಿ ಯೋಜನೆಗಳಿಂದ 4.36 ಕೋಟಿ ಜನರಿಗೆ ಅನುಕೂಲವಾಗಿದೆ. 1.2 ಲಕ್ಷ ಗ್ರಹಲಕ್ಷ್ಮಿಯರು ಯೋಜನೆಯ ಫಲಾನುಭವಿಯಾಗಿದ್ದು ಗ್ಯಾರಂಟಿ ಯೋಜನೆಗಳಿಗೆ ಯಾವುದೇ ತರಹದ ಹಣದ ಕೊರತೆ ಇಲ್ಲ. ಇಡೀ ದೇಶದಲ್ಲಿಯೇ ಬಡ ಜನತೆಗೆ ಗರಿಷ್ಠ ಮಟ್ಟದ ಸಹಕಾರ ನೀಡುತ್ತಿರುವ ಹೆಗ್ಗಳಿಕೆ ಸಿದ್ದರಾಮಯ್ಯನವರ ಸರ್ಕಾರಕ್ಕೆ ಸಲ್ಲುತ್ತದೆ ಆದರೆ ಕೆಲ ಜನರು ಗ್ಯಾರಂಟಿ ಯೋಜನೆಯಿಂದ ಸರ್ಕಾರ ದಿವಾಳಿಯಾಗಿದೆ ಎಂದು ಆರೋಪ ಮಾಡುತ್ತಿರುವುದು ಸತ್ಯಕ್ಕೆ ದೂರವಾಗಿದೆ.


ಇಂದಿನ ಸರ್ಕಾರ ಸರಿಯಾದ ಯೋಜನೆ ರೂಪಿಸದೆ ಹಲವಾರು ಯೋಜನೆಗಳಿಗೆ ಮಂಜೂರಾತಿ ನೀಡಿದ್ದು ಇಲಾಖೆಯಲ್ಲಿ ಇರುವ ಅನುದಾನವನ್ನು ಸಹಿತ ನೋಡದೆ ಇರುವುದು ಪ್ರಾರಂಭದಲ್ಲಿ ಸಿದ್ದರಾಮಯ್ಯ ಸರ್ಕಾರಕ್ಕೆ ಕೊಂಚ ತೊಂದರೆ ಉಂಟಾಗಿರುತ್ತದೆ. ಆದರೆ ಗ್ಯಾರೆಂಟಿಯಿಂದ ಯಾವುದೇ ತರಹದ ತೊಂದರೆಯಾಗಿರುವುದಿಲ್ಲ ಎಂದು ಸ್ಪಷ್ಟೀಕರಣ ನೀಡಿದರು.

ಈ ಬಾರಿ ಶಾಸಕನಾಗಿ ಆಯ್ಕೆಯಾದ ಮೇಲೆ 14 ಪ್ರೌಢಶಾಲೆಗಳನ್ನು ಮಂಜೂರು ಮಾಡಿದ್ದು ಶೀಘ್ರದಲ್ಲಿಯೇ ಸೋಂಪುರ, ದ್ಯಾಂಪುರ ಹುಲೇಗುಡ್ಡ ಹಾಗೂ ಹಿರೇಓಂಕಲಕುಂಟ ಗ್ರಾಮದಲ್ಲಿ ಬಾಲಕಿಯರ ಪ್ರೌಢಶಾಲೆ ಸರಿದಂತೆ ನಾಲ್ಕು ನೂತನ ಪ್ರೌಢಶಾಲೆಗಳಿಗೆ ಚಾಲನೆ ನೀಡಲಾಗುವುದು ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಲಿಂಗರಾಜ ಟಿ ಮಾತನಾಡಿ ಶಾಸಕರ ಮುತುವರ್ಜಿಯಿಂದ ಕುಕನೂರು ಪಟ್ಟಣಕ್ಕೆ 100 ಹಾಸಿಗೆಯ ಸರ್ಕಾರಿ ಆಸ್ಪತ್ರೆಯ 1.8 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿದ್ದು ಜೊತೆಗೆ 3.60 ಕೋಟಿ ರೂಪಾಯಿ ವೆಚ್ಚದಲ್ಲಿ ವಸತಿಗೃಹ ನಿಮಿಸಲಾಗುತ್ತಿದೆ. ತಾಲೂಕಿನಲ್ಲಿ ಒಟ್ಟು ಐದು ಅಂಬುಲೆನ್ಸ್ ಗಳ ಬೇಡಿಕೆ ಇದ್ದು ಶಾಸಕರು ಒದಗಿಸುವ ಭರವಸೆ ನೀಡಿದ್ದಾರೆ ಆದರೆ ಚಾಲಕರ ಸಮಸ್ಯೆ ಕಾಡುತ್ತಿದೆ. ಜೊತೆಗೆ ಸದ್ಯದ ಪರಿಸ್ಥಿತಿಯಲ್ಲಿ ವೈದ್ಯರ ಕೊರತೆ ಹೆಚ್ಚಾಗಿದ್ದು ಜೂನ್ ಅಂತ್ಯದೊಳಗೆ ಎಲ್ಲಾ ಆಸ್ಪತ್ರೆಗಳಲ್ಲೂ ನುರಿತ ವೈದ್ಯರ ನೇಮಕ ಮಾಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಚಿಕ್ಕೇನಕೊಪ್ಪ ಗ್ರಾಮದ ಶ್ರೀ ಅನ್ನದಾನ ಮಹಾ ಸ್ವಾಮಿಗಳು, ಪ್ರಮುಖರಾದ ಕೇರಿಬಸಪ್ಪ ನಿಡುಗುಂದಿ, ಹನುಮಂತಗೌಡ ಚಂಡೂರು, ಚಂದ್ರಶೇಖರಯ್ಯ ಹಿರೇಮಠ, ಮಂಜುನಾಥ ಕಡೆಮನಿ, ವೀರಪ್ಪ ಬಿಸನಹಳ್ಳಿ, ಅಧಿಕಾರಿಗಳಾದ ಅಶೋಕ ಗೌಡ, ಮಲ್ಲಿಕಾರ್ಜುನ, ಜಗನ್ನಾಥ ಜೋತೆ-ಗುಂಡಿ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸುರೇಶ್ ನಾಯಕ್, ಮಂಡಲಗಿರಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಿಂಗಮ್ಮ ದ್ಯಾಮನಗೌಡ್ರು, ಉಪಾಧ್ಯಕ್ಷೆ ಬಸಮ್ಮ ಸಸಿಮಠ, ಸರ್ವ ಸದಸ್ಯರು ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

## ಬಾಬಾ ಸಾಹೇಬ್ ಭಾವಚಿತ್ರಕ್ಕೆ ಅಪಮಾನ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಅವಮಾನಗೊಳಿಸಿರುವ ಘಟನೆ ಕುಕನೂರ ತಾಲೂಕಿನ ಕವಳಕೇರಿ ಗ್ರಾಮದಲ್ಲಿ ಸೋಮವಾರ ರಾತ್ರಿ ಜರುಗಿದೆ.

ಸಂವಿಧಾನ ಶಿಲ್ಪಿ ಭಾವಚಿತ್ರಕ್ಕೆ ಅವಮಾನ ವಸಿ ಇರುವುದನ್ನು ಖಂಡಿಸಿ ಗ್ರಾಮದ ದಲಿತ ಸಮುದಾಯದವರು ಘಟನೆಯಲ್ಲಿ ಮಂಗಳವಾರ ಪ್ರತಿಭಟನೆ ಹಮ್ಮಿಕೊಂಡರು ಈ ವೇಳೆಯಲ್ಲಿ ಘಟನಾ ಸ್ಥಳಕ್ಕೆ ಸಂಸದ ರಾಜಶೇಖರ ಹಿಟ್ನಾಳ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್ ಅರಸಿದ್ದಿ, ಸಮಾಜಕ್ಕೆ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಶಶಿಧರ ಸಕ್ರಿ ಸೇರಿದಂತೆ ಹಲವಾರು ಅಧಿಕಾರಿಗಳು ಘಟನಾ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಪ್ರತಿಭಟನಾಕಾರದೊಂದಿಗೆ ಸಮಾಲೋಚನೆ ನಡೆಸಿದರು.

ಘಟನೆಗೆ ಸಂಬಂಧಿಸಿದಂತೆ ಕುಕನೂರು ಪೊಲೀಸ್ ಠಾಣೆಯಲ್ಲಿ 11 ಜನರ ವಿರುದ್ಧ ಪ್ರಕರಣ ದಾಖಲಾಗಿದ್ದು ಈಗಾಗಲೇ ಮೂರು ಜನರನ್ನು ಬಂಧಿಸಲಾಗಿದೆ. ಆದರೆ ಪ್ರತಿಭಟನಾಕಾರರು ಉಳಿದ ಆರೋಪಿತರನ್ನು ಬಂಧಿಸುವಲ್ಲಿ ಪೊಲೀಸರು ಹಿಂದೇಟು ಹಾಕುತ್ತಿದ್ದಾರೆ ಎಂದು ದಲಿತ ಸಮುದಾಯದವರು ಆರೋಪಿಸಿರುತ್ತಾರೆ.

ಕುಕನೂರು ಯಲಬುರ್ಗಾ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಶಶಿಧರ ಸಕ್ರಿ ವರದಿಗಾರರೊಂದಿಗೆ ಮಾತನಾಡುತ್ತ ಇದೊಂದು ಅಮಾನವೀಯ ಕೃತ್ಯವಾಗಿದ್ದು. ಪ್ರತಿಯೊಬ್ಬ ಭಾರತೀಯರು ತಲೆತಗ್ಗಿಸುವಂತಹ ಘಟನೆಯಾಗಿದೆ ಈಗಾಗಲೇ ಶಾಸಕರು, ಸಂಸದರು ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ, ಪರಿಶೀಲನೆ ಮಾಡಿದ್ದು ಶೀಘ್ರದಲ್ಲಿ ತಪ್ಪಿತಸ್ಥರಿಗೆ ಗರಿಷ್ಠ ಮಟ್ಟದ ಶಿಕ್ಷೆ ನೀಡುವುದಾಗಿ ಭರವಸೆ ನೀಡಿರುತ್ತಾರೆ.

ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿದ್ದು ಒಂದು ಪೊಲೀಸ್ ಮೀಸಲು ಪಡೆ ಗ್ರಾಮದಲ್ಲಿ ಶಾಂತಿ ಸುವ್ಯವಸ್ಥೆಗಾಗಿ ಕಾರ್ಯ ನಿರತವಾಗಿದೆ.

## ಮೇ 9 ರಂದು ಮಿನಿ ಉದ್ಯೋಗ ಮೇಳ ಆಯೋಜನೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮೇ.06-ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಇದೇ ಮೇ 9 ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಕಲಬುರಗಿ ಸರ್ಕಾರಿ ಐ.ಟಿ.ಐ. ಕಾಲೇಜು ಹಿಂದುಗಡೆಯಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಮಿನಿ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇ-ರಿಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಈ ಉದ್ಯೋಗ ಮೇಳದಲ್ಲಿ **ಭಾಗಹಿಸಲಿರುವ ಕಂಪನಿಗಳ ವಿವರ ಇಂತಿದೆ:** ಮಣಪ್ಪುರಂ ಫೈನಾನ್ಸ್‌ದಲ್ಲಿ ಸೆಲ್ಸ್ ಎಕ್ಸಿಕ್ಯೂಟಿವ್ ಹುದ್ದೆಗೆ ಯಾವುದೇ ಪದವಿ ಪಾಸಾಗಿರಬೇಕು. ವಯೋಮಿತಿ 18 ರಿಂದ 32 ವರ್ಷದೊಳಗಿರಬೇಕು. ಭಾರತ ಫೈನಾನ್ಸ್‌ದಲ್ಲಿ ಟೇಲಿಕಾಲರ್ ಹುದ್ದೆಗೆ ಪಿಯುಸಿ/ಯಾವುದೇ ಪದವಿ ಪಾಸಾಗಿರಬೇಕು. ವಯೋಮಿತಿ 18 ರಿಂದ 30 ವರ್ಷದೊಳಗಿರಬೇಕು. ಆಕಾಶ ಇನ್ಸ್‌ಸ್ಟಿಟ್ಯೂಟ್‌ದಲ್ಲಿ ಅಡಮೀಷನ್ ಆಫೀಸರ್ ಹುದ್ದೆಗೆ ಯಾವುದೇ ಪದವಿ ಪಾಸಾಗಿರಬೇಕು. ವಯೋಮಿತಿ 21 ರಿಂದ 45 ವರ್ಷದೊಳಗಿರಬೇಕು. ಸ್ಪಂದನಾ ಸ್ಫೂರ್ತಿ ಫೈನಾನ್ಸ್‌ದಲ್ಲಿ ಫೀಲ್ಡ್ ಆಫೀಸರ್ ಹುದ್ದೆಗೆ ಪಿಯುಸಿ/ಐಟಿಐ/ ಯಾವುದೇ ಪದವಿ ಪಾಸಾಗಿರಬೇಕು. ವಯೋಮಿತಿ 19 ರಿಂದ 27 ವರ್ಷದೊಳಗಿರಬೇಕು. ರಿಲಿಯಾನ್ಸ್ ನಿಪೋನ್ ಲೈಫ್ ಇನ್ಸೂರೆನ್ಸ್‌ದಲ್ಲಿ ಲೈಫ್ ಪ್ಲಾನಿಂಗ್ ಆಫೀಸರ್ ಹುದ್ದೆಗೆ ಯಾವುದೇ ಪದವಿ ಪಾಸಾಗಿರಬೇಕು. ವಯೋಮಿತಿ 30 ರಿಂದ 45 ವರ್ಷದೊಳಗಿರಬೇಕು. ಮಹಿಳಾ ಅಭ್ಯರ್ಥಿಗಳು ಮಾತ್ರ ಭಾಗವಹಿಸಬೇಕು. ಕಲಬುರಗಿ ಎಸ್.ಆರ್.ಜೆ. ಗ್ರೂಪ್ ಆಫ್ ಇನ್ಸ್‌ಸ್ಟಿಟ್ಯೂಷನ್ಸ್‌ದಲ್ಲಿ ಶಿಕ್ಷಕರ ಹುದ್ದೆಗೆ ಪಿಯುಸಿ/ಯಾವುದೇ ಪದವಿ ಮತ್ತು ಬಿ.ಎಡ್. ವಿದ್ಯಾರ್ಹತೆ ಹೊಂದಿರಬೇಕು. ವಯೋಮಿತಿ 21 ರಿಂದ 35 ವರ್ಷದೊಳಗಿರಬೇಕು. ದೊಡ್ಲಾದಲ್ಲಿ ಸೇಲ್ಸ್ ಆಂಡ್ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಹುದ್ದೆ ಹಾಗೂ ಪಿ.ಎಸ್.ಆರ್. ಹುದ್ದೆಗೆ ಯಾವುದೇ ಪದವಿ ಪಾಸಾಗಿರಬೇಕು. ಅಕೌಂಟ್ಸ್ ಹುದ್ದೆಗೆ ಬಿ.ಕಾಮ್. ಪಾಸಾಗಿರಬೇಕು. ವಯೋಮಿತಿ 18 ರಿಂದ 30 ವರ್ಷದೊಳಗಿರಬೇಕು.

ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ಎಲ್ಲಾ ಅಂಕಪಟ್ಟಿಗಳ ಝೆರಾಕ್ಸ್, ರೆಸ್ಯೂಮ್ (ಬಯೋಡೆಟಾ) ಭಾವಚಿತ್ರ ಹಾಗೂ ಆಧಾರ್ ಕಾರ್ಡ್ ದಾಖಲೆಗಳೊಂದಿಗೆ ಮೇಲ್ಕಂಡ ದಿನದಂದು ನಡೆಯುವ ಮಿನಿ ಉದ್ಯೋಗಮೇಳದಲ್ಲಿ ಭಾಗವಹಿಸಬೇಕು.

ಮಿನಿ ಉದ್ಯೋಗ ಮೇಳದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಯಾವುದೇ ತರಹದ ಭತ್ಯೆಯನ್ನು ನೀಡಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯನ್ನು ಹಾಗೂ ದೂರವಾಣಿ ಸಂಖ್ಯೆ 08472-274846, ಮೊಬೈಲ್ ಸಂಖ್ಯೆ 9620095270 ಗೆ ಸಂಪರ್ಕಿಸಲು ಕೋರಲಾಗಿದೆ.

## ಜೇವರ್ಗಿ ಉಪವಿಭಾಗದ 33/11 ಕೆ.ವಿ. ನೆಲೋಗಿ ವಿದ್ಯುತ್ ವಿತರಣಾ ಕೇಂದ್ರ:

ಮಲ್ಲಮ್ಮ ನುಡಿ ವಾರ್ತೆ

ಜೇವರ್ಗಿ ತಾಲೂಕಿನ ನೆಲೋಗಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಕಲ್ಲೂರ (ಕೆ), ಕಲ್ಲೂರ (ಬಿ), ಯಂಕಂಚ್ಚಿ, ಮಾಹುರ, ಕೂಡಲಗಿ, ನಾಗರಾಣಿ, ಕೊಟನೂರ್, ಹಿಪ್ಪರಗಾ ಎಸ್. ಎನ್., ಸೊನ್ನ, ನಿರಲಕೊಡ, ಹೆಗಿನಾಳ, ಕಲ್ಲಹಂಗರಗಾ, ಕಾಸರಬೋಸಗಾ, ಮುತಕೊಡ ಮತ್ತು ನೆಲೋಗಿ ಗ್ರಾಮ ಪಂಚಾಯಿತಿಯ ಎಲ್ಲಾ ಗ್ರಾಮಗಳು ಹಾಗೂ ನೀರಾವರಿ ಪಂಪ್‌ಸೆಟ್‌ಗಳು.

## ಅರಣ್ಯ ಇಲಾಖೆ ಯುವ ನೌಕರರಲ್ಲಿ ಸಮಯ ಪ್ರಜ್ಞೆ, ಶಿಸ್ತು ಇರಲಿ : ಎ. ಬಿ. ಪಾಟೀಲ್



ಮಲ್ಲಮ್ಮ ನುಡಿ ವಾರ್ತೆ

ಬೀದರ್:-ಅರಣ್ಯ ಇಲಾಖೆಯ ನೌಕರರಲ್ಲಿ ಶಿಸ್ತು, ಸಮಯ, ಪ್ರಜ್ಞೆ ಅತೀ ಅವಶ್ಯಕತೆ ಇದೆ ಎಂದು ಬೀದರ್ ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎ.ಬಿ ಪಾಟೀಲ್ ಬೀದರ್ ಪಟ್ಟಣದ ಅರಣ್ಯ ತರಬೇತಿ ಶಾಲೆಯಲ್ಲಿ ಹಮ್ಮಿಕೊಂಡಿದ್ದ ನಿವೃತ್ತ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವಿ.ಡಿ ರಾಜೇಂದ್ರರ ಸೇವಾ ನಿವೃತ್ತಿ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡುತ್ತಾ ತಿಳಿಸಿದರು. ಇತ್ತಿಚಿನ ದಿನಗಳಲ್ಲಿ ಯುವ ನೌಕರರಲ್ಲಿ ಸಮಯ ಪ್ರಜ್ಞೆ, ಶಿಸ್ತು ಕಂಡುಬರುತ್ತಿಲ್ಲ ಎಂದು ವಿಷಾದದಿಂದ ನುಡಿದರು. ವಿ ಡಿ ರಾಜೇಂದ್ರ ಅವರು ಅರಣ್ಯ ಇಲಾಖೆಯಲ್ಲಿ ಅತ್ಯುತ್ತಮವಾಗಿ ಸೇವೆ ಸಲ್ಲಿಸಿ ಅರಣ್ಯ ಇಲಾಖೆಗೆ ಮಾದರಿಯಾಗಿದ್ದಾರೆ ಎಂದರು. ಬೀದರ್ ಪಟ್ಟಣದ ಎಲ್ಲ ರಸ್ತೆ ಬದಿಗಳಲ್ಲಿ ವಿಭಜಕದ ಮೇಲೆ ಇವರ ಸೇವಾ ಅವಧಿಯಲ್ಲಿ ನೆಟ್ಟ ಸಸಿಗಳು ಬೀದರ್ ಪಟ್ಟಣ-ಕ್ಕೆ ಹಸಿರು ವೈಭವ ನೀಡಿವೆ ಎಂದರು. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಸುನೀಲ ಚವ್ಹಾಣ, ರಮೇಶ್ ಕನಕಟಕರ್ ಮಾತನಾಡಿ, ವಿ.ಡಿ ರಾಜೇಂದ್ರ ಅವರ ಅರಣ್ಯ ಇಲಾಖೆ ನೀಡಿದ ಕೊಡಿಗೆಯನ್ನು ಸ್ಮರಿಸಿದರು. ವಲಯ ಅರಣ್ಯಾಧಿಕಾರಿಗಳಾದ ಪ್ರಕಾಶ್ ನಿಪ್ಪಾಣಿ ಶಿವಕುಮಾರ್ ರಾಠೋಡ್, ಶೈಲೇಂದ್ರ ಕಾವಡಿ, ಪ್ರೇಮಶೇಖರ್ ಮಾತನಾಡಿದರು. ಮಹೇಂದ್ರ ಮೌರ್ಯ, ಸಚಿನ ಪಾಟೀಲ್ ಸೇರಿದಂತೆ ಇತರರು ಉಪಸ್ಥಿತರಿದ್ದರು. ಸನ್ಮಾನ ಸ್ವೀಕರಿಸಿ ಮಾತನಾಡಿ ವಿ.ಡಿ ರಾಜೇಂದ್ರ ಅರಣ್ಯ ಇಲಾಖೆ ಸಿಬ್ಬಂದಿ ವರ್ಗ ಅಧಿಕಾರಿಗಳ ಕೃಪೆಯಿಂದ ಅತ್ಯುತ್ತಮವಾಗಿ ಸೇವೆ ಸಲ್ಲಿಸಲು ಸಹಾಯವಾಗಿದೆ ಎಂದರು. ನವನಾಥ ಕಾರ್ಯಕ್ರಮ ನಿರೂಪಿಸಿದರು. ಶಿವಕುಮಾರ ರಾಠೋಡ್ ವಂದಿಸಿದರು.

## ನಿಖರವಾದ ಮಾಹಿತಿ ನೀಡಿ ಸಮೀಕ್ಷೆಗೆ ಸಹಕರಿಸಿ – ಜಿಲ್ಲಾಧಿಕಾರಿ ನಲಿನ ಅತುಲ್



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಪರಿಶಿಷ್ಟ ಜಾತಿಯ ವಿವಿಧ ಉಪಜಾತಿಗಳ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಗಳ ಬಗ್ಗೆ ದತ್ತಾಂಶಗಳನ್ನು ಸಂಗ್ರಹಿಸಲು ಕೈಗೊಳ್ಳಲಾಗುತ್ತಿರುವ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಗಾಗಿ ಗಣತಿದಾರರು(ಸಮೀಕ್ಷಾಕಾರರು) ನಿಮ್ಮ ಮನೆಗೆ ಬಂದಾಗ ಸಾರ್ವಜನಿಕರು ಅವರಿಗೆ ಸಹಕರಿಸುವ ಮೂಲಕ ನಿಖರವಾದ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿ ನಲಿನ ಅತುಲ್ ಹೇಳಿದರು.

ಅವರು ಸೋಮವಾರ ಕೊಪ್ಪಳ ನಗರದ 12ನೇ ವಾರ್ಡಿನ ಬಸವೇಶ್ವರ ನಗರದಲ್ಲಿ ಪೌರಕಾರ್ಮಿಕರಾದ ಶಾಂತಗಂಡ ಗಾಳೆಪ್ಪ ದೊಡ್ಡಮನಿ ಹಾಗೂ ಸೌರಮ್ಮ ಗಂಡ ಭರಮಪ್ಪ ಅವರ ಮನೆಯಿಂದ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಗೆ ಮೊಬೈಲ್ ಆ್ಯಪ್ ಮೂಲಕ ಚಾಲನೆ ನೀಡಿ ಮಾತನಾಡಿದರು.

ಸರಿಸುಮಾರು 16 ಲಕ್ಷಕ್ಕಿಂತಲೂ ಹೆಚ್ಚಿನ ಜನಸಂಖ್ಯೆ ನಮ್ಮ ಕೊಪ್ಪಳ ಜಿಲ್ಲೆಯಲ್ಲಿದೆ. ಪ್ರತಿಯೊಂದು ಮನೆಗೆ ತೆರಳಿ ಸಮೀಕ್ಷೆ ಮಾಡಬೇಕೆಂಬ ಸರ್ಕಾರವು ನಿರ್ದೇಶನ ಮಾಡಿದ್ದು, ಇಂದಿನಿಂದ ಈ ಸಮೀಕ್ಷೆ ಜಿಲ್ಲೆಯಲ್ಲಿ ಪ್ರಾರಂಭವಾಗಿದೆ. ಈ ಸಮೀಕ್ಷೆಯನ್ನು ಸಮರ್ಪಕವಾಗಿ ಕೈಗೊಳ್ಳಲು ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿದ್ದು, ಸಮೀಕ್ಷೆಗಾಗಿ ಒಂದು ಮತಗಟ್ಟೆ ಒಬ್ಬರಂತೆ ಒಟ್ಟು 1315 ಗಣತಿದಾರರನ್ನು ಜಿಲ್ಲೆಯಲ್ಲಿ ನೇಮಕ ಮಾಡಲಾಗಿದೆ. ಸಮೀಕ್ಷೆಗೆ ಜಿಲ್ಲಾ ಮಟ್ಟದ ಮಾಸ್ಟರ್ ಟ್ರೈನರಗಳು ರಾಜ್ಯ ಮಟ್ಟದಲ್ಲಿ ತರಬೇತಿ ಪಡೆದಿದ್ದು, ತಾಲ್ಲೂಕು ಮಟ್ಟದ ಮಾಸ್ಟರ್ ಟ್ರೈನರಗಳಿಗೆ ಹಾಗೂ 250 ರಿಂದ 300 ಶಿಕ್ಷಕರಿಗೆ ಗಣತಿದಾರರ ತರಬೇತಿ ನೀಡಲಾಗಿದ್ದು, ಈ ಸಮೀಕ್ಷೆಯನ್ನು ಆ್ಯಪ್ ಮೂಲಕ ನಡೆಸಲಾಗುತ್ತಿದೆ ಎಂದರು.

ಸಮೀಕ್ಷೆಯು 2025ರ ಮೇ 5 ರಿಂದ 17ರ ವರೆಗೆ ಮೊದಲನೇ ಹಂತದಲ್ಲಿ ಮನೆ-ಮನೆಗೆ ಸಮೀಕ್ಷೆ ಹಾಗೂ ಮೇ 19 ರಿಂದ 21ರ ವರೆಗೆ ಎರಡನೇ ಹಂತದಲ್ಲಿ ವಿಶೇಷ ಶಿಬಿರಗಳಲ್ಲಿ ಸಮೀಕ್ಷೆ ಮತ್ತು ಮೇ 19 ರಿಂದ 23ರ ವರೆಗೆ ಮೂರನೇ ಹಂತದಲ್ಲಿ ಆನ್‌ಲೈನ್ ಮೂಲಕ ಸ್ವಯಂ ಘೋಷಣೆಗೆ ಅವಕಾಶವಿರುತ್ತದೆ. ಜಿಲ್ಲೆಯ ಪ್ರತಿಯೊಂದು ಮನೆಯ ಸಮೀಕ್ಷೆ ಮಾಡುವ ಗುರಿಯನ್ನು ಹೊಂದಲಾಗಿದೆ. ಈ ಒಂದು ಸಮೀಕ್ಷೆಯಲ್ಲಿ ನಾವೂ ನಿಖರವಾದ ಮಾಹಿತಿಯನ್ನು ಸಂಗ್ರಹಿಸಿ ಸರ್ಕಾರಕ್ಕೆ ಒಪ್ಪಿಸುತ್ತೇವೆ. ಆಧಾರ್ ಕಾರ್ಡ್ ಅಥವಾ ರೇಷನ್ ಕಾರ್ಡ್ ಈ ಎರಡರಲ್ಲಿ ಯಾವುದಾದರು ಒಂದರ ಮುಖಾಂತರವೇ ಮಾಹಿತಿಯನ್ನ ಸಂಗ್ರಹಿಸಲಾಗುತ್ತದೆ. ಜಿಲ್ಲೆಯ ಸಾರ್ವಜನಿಕರು ಸಮೀಕ್ಷೆಯ ಯಶಸ್ವಿಗೆ ಸಹಕಾರ ನೀಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್, ಕೊಪ್ಪಳ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಅಜ್ಜಪ್ಪ ಸೊಗಲದ, ಕೊಪ್ಪಳ ತಹಶೀಲ್ದಾರ ವಿಠ್ಠಲ್ ಚೌಗಲಾ, ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಮೂರ್ತಿ ದೇಸಾಯಿ, ಗಣತಿದಾರರಾದ ವಿರೂಪಾಕ್ಷಪ್ಪ ಬಾಗೋಡಿ, ಮಾಸ್ಟರ್ ಟ್ರೈನರ್ ಶರಣಪ್ಪ ಮಾಗಳದ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಬಸವೇಶ್ವರ ನಗರದ ಸಾರ್ವಜನಿಕರು ಉಪಸ್ಥಿತರಿದ್ದರು.

## ಡಿಪ್ಲೋಮಾ ಇನ್ ಟೂಲ್ ಆ್ಯಂಡ್ ಡೈ ಮೇಕಿಂಗ್ ಕೋರ್ಸಿಗೆ ಪ್ರವೇಶ ಪಡೆಯಲು ಅರ್ಜಿ ಆಹ್ವಾನ

ಕಲಬುರಗಿ,ಮೇ.06-ಕಲಬುರಗಿ ನಗರದ ಚಂದ್ರಶೇಖರ ಪಾಟೀಲ ಕ್ರೀಡಾಂಗಣದ ಹತ್ತಿರವಿರುವ ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ನಡೆಸಲಾಗುತ್ತಿರುವ ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ (ಕೆ.ಜಿ.ಟಿ.ಟಿ.ಐ.) ಯಲ್ಲಿ 2025-26ನೇ ಸಾಲಿಗೆ ಡಿಪ್ಲೋಮಾ ಇನ್ ಟೂಲ್ ಆ್ಯಂಡ್ ಡೈ ಮೇಕಿಂಗ್ ಕೋರ್ಸಿಗೆ ಪ್ರವೇಶ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಕೆ.ಜಿ.ಟಿ.ಟಿ.ಐ. ಪ್ರಾಂಶುಪಾಲರು ತಿಳಿಸಿದ್ದಾರೆ. ಈ ಕೋರ್ಸಿನ ತರಬೇತಿ ಅವಧಿಯು 4 ವರ್ಷ ಇದ್ದು, (ಇದರಲ್ಲಿ 3 ವರ್ಷದ ಬೋಧನಾ ತರಬೇತಿ ಹಾಗೂ 1 ವರ್ಷದ ಕಡ್ಡಾಯ ವೇತನ ಸಹಿತ ಕೈಗಾರಿಕಾ ತರಬೇತಿ ಒಳಗೊಂಡಿರುತ್ತದೆ) ಹಾಗೂ ಎಐಸಿಟಿಇ (AICTE) ಯಿಂದ ಅನುಮೋದನೆ ಗೊಂಡಿರುತ್ತದೆ. ಈ ಸಂಸ್ಥೆಯಲ್ಲಿ ಸುಸಜ್ಜಿತ ಮೂಲ ಸೌಕರ್ಯ ಮತ್ತು ಆಧುನಿಕ ಯಂತ್ರೋಪಕರಣಗಳನ್ನು ಹೊಂದಿದ್ದು, ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಪ್ರತ್ಯೇಕ ಹಾಸ್ಟೇಲ್ ಸೌಲಭ್ಯ ಕಲ್ಪಿಸಲಾಗಿದೆ.

ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಕೆ. ಜಿ.ಟಿ.ಟಿ.ಐ. ಸಂಸ್ಥೆಯನ್ನು ಹಾಗೂ ಮೊಬೈಲ್ ಸಂಖ್ಯೆ 8884886172, 8660171836, 9902345676 ಗಳಿಗೆ ಸಂಪರ್ಕಿಸಲು ಕೋರಲಾಗಿದೆ.

## ಗ್ರಾಮಸ್ಥರಿಗೆ ಕುಡಿಯುವ ನೀರು ಸಮಸ್ಯೆ ಆಗದಂತೆ ಪೂರೈಸುವುದು ನಮ್ಮೆಲ್ಲರ ಜವಬ್ದಾರಿ : ಸಂಸದ ರಾಜಶೇಖರ ಹಿಟ್ನಾಳ

ಮಲ್ಲಮ್ಮ ನುಡಿ ವಾರ್ತೆ



ಕೊಪ್ಪಳ : ಕುಕನೂರ ತಾಲೂಕಿನ ಕುಕನೂರ ಹೊಬಳಿ ಗ್ರಾಮ ಪಂಚಾಯತಿಗಳ ವಾರು ದಿಶಾ ಸಭೆಯನ್ನು ಮಾನ್ಯ ಲೋಕಸಭಾ ಸದಸ್ಯರು ಕೊಪ್ಪಳ ರವರ ಅಧ್ಯಕ್ಷತೆಯಲ್ಲಿ ಕುಕನೂರ ಪ್ರವಾಸಿ ಮಂದಿರದಲ್ಲಿ ಸಭೆ ಕರೆಯಲಾಗಿತ್ತು. ಸಭೆಯಲ್ಲಿ ಎಲ್ಲಾ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳೋಂದಿಗೆ ಮಾನ್ಯ ಲೋಕಸಭಾ ಸದಸ್ಯರು ಚರ್ಚಿಸಿ ಕೇಂದ್ರ ಹಾಗೂ ರಾಜ್ಯ ಪುರಸ್ಕೃತ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡಬೇಕಾದರೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ನಿಯಮಾನುಸಾರ ಕೆಲಸ ಮಾಡಿದಾಗ ಮಾತ್ರ ಸಾಧ್ಯ ಎಂದರು. ಕೃಷಿ ಇಲಾಖೆ ಅಡಿಯಲ್ಲಿ ಹೊಬ್ಬರ , ಬಿತ್ತನೆ ಬೀಜ ವಿತರಣೆ ಸಮಸ್ಯೆ ಆಗದಂತೆ ಬೀಜ ವಿತರಣೆ ಮಾಡಬೇಕು, ಮಳೆಗಾಲ ಈ ಭಾರಿ ಬೇಗನೇ ಆರಂಭವಾಗಿದ್ದು ಬಿತ್ತನೆ ಬೀಜ ವಿತರೆ ಕಾರ್ಯ ಆಗಬೇಕು, ತೋಟಗಾರಿಕೆ, NRLM ಯೋಜನೆಯಡಿ ಸೇರಿದಂತೆ ಇತರೆ ಯೋಜನೆಯಡಿ ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿಕೊಳ್ಳಬೇಕು ಎಂದರು. ಸ್ಥಳದಲ್ಲಿ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಂತೋಷ ಬಿರಾದರ್, ಗ್ರೇಡ್ 2 ತಹಶೀಲ್ದಾರ ಮುರಳಿಧರ್ ರಾವ್ ಕುಲಕರ್ಣಿ, ಪಂ ಪಂ ಅಧ್ಯಕ್ಷರಾದ ಲಲಿತಮ್ಮ ಯಡಿಯಾಪೂರ, RWS AEE ರಿಜ್ವಾನ, ಅನುಷ್ಠಾನ ಇಲಾಖೆ ಅಧಿಕಾರಿಗಳು ಎಲ್ಲಾ ಗ್ರಾಮ ಪಂಚಾಯತಿ ಅಧ್ಯಕ್ಷರು, ಸದಸ್ಯರು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತಾಪಂ ಸಿಬ್ಬಂದಿಗಳು, ನರೇಗಾ ಸಿಬ್ಬಂದಿಗಳು ಹಾಜರಿದ್ದರು.

# ಅಪರಿಚಿತ ವ್ಯಕ್ತಿ ಮೃತ: ವಾರಸುದಾರ ಪತ್ತೆಗಾಗಿ ಮನವಿ

ಮಲ್ಲಮ್ಮ ನುಡಿ ವಾರ್ತೆ

ಬೀದರ:ಮೇ.6:– ಬಗದಲ ಪೊಲೀಸ್ ಠಾಣೆಯ ವ್ಯಾಪ್ತಿಯ ಬಾಪುರ ಶಿವಾರ ಮೀನಕೇರಾ ಕ್ರಾಸ್ ಹತ್ತಿರ ದಿನಾಂಕ: 20–03–2025 ರಂದು ಬೆಳಿಗ್ಗೆ 11 ಗಂಟೆಗೆ ಅಂದಾಜು 60–70 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿ ಮೃತಪಟ್ಟಿದ್ದು ಇಲ್ಲಿಯವರೆಗೆ ವಾರಸುದಾರರು ಯಾರೆಂದು ಪತ್ತೆಯಾಗಿರುವುದಿಲ್ಲ ಎಂದು ಬಗದಲ್ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೀದರ ತಾಲ್ಲೂಕಿನ ಮುತ್ತಂಗಿ ಗ್ರಾಮದ ಗುರಪ್ಪಾ ತಂದೆ ರಾಚಪ್ಪಾ ಕೂಡಂಬಲೆ ಅವರ ಲಿಖಿತ ದೂರಿನ ಮೇರೆಗೆ ಬಗದಲ ಪೊಲೀಸ್ ಠಾಣೆ–ಯ ಯುಡಿಆರ್ ನಂ. 01/2025 ರಡಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ.

ಮೃತ ವ್ಯಕ್ತಿಯು 5 ಅಡಿ 4 ಇಂಚ್ ಎತ್ತರ ಇದ್ದು, ಕಪ್ಪು ಮೈಬಣ್ಣ ಹೊಂದಿದ್ದು, ಮೈಮೇಲೆ ಹಸಿರು ಬಣ್ಣದ ಅಂಡರ ವಿಯರ್ ಧರಿಸಿರುತ್ತಾನೆ. ಈ ಮೃತ ವ್ಯಕ್ತಿಯ ವಾರಸುದಾರರು ಯಾರಾದರೂ ಇದ್ದಲ್ಲಿ ಪೊಲೀಸ್ ಕಂಟ್ರೋಲ್ ರೂಮ್ ಬೀದರ ದೂರವಾಣಿ ಸಂಖ್ಯೆ: 08242–226704, ಸಿಪಿಐ ಗ್ರಾಮೀಣ ವೃತ್ತ ಬೀದರ ಮೊಬೈಲ್ ಸಂಖ್ಯೆ: 9480803439, ಪಿ.ಎಸ್.ಐ. ಬಗದಲ ಪೊಲೀಸ್ ಠಾಣೆ ಮೊಬೈಲ್ ಸಂಖ್ಯೆ: 9480803451ಗೆ ಸಂಪರ್ಕಿಸುವಂತೆ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಬಿ.ವಿ. ಭೂಮರಡ್ಡಿ ಪದವಿ ಮಹಾವಿದ್ಯಾಲಯದಲ್ಲಿ – ಪದವಿ ನಂತರ ಮುಂದೆ ಏನು? ಒಂದು ದಿನದ ಕಾರ್ಯಗಾರ



ಮಲ್ಲಮ್ಮ ನುಡಿ ವಾರ್ತೆ

ಬೀದರ, ದಿ: 6ನೇ ಮೇ. 2025ರಂದು ನಗರದ ಹೈ.ಕ.ಶಿ. ಸಂಸ್ಥೆಯ ಬಿ.ವಿ. ಭೂಮರಡ್ಡಿ ಪದವಿ ಮಹಾವಿದ್ಯಾಲಯದಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶ, ಸ್ಥಾನೀಕರಣ ಕೋಶ ಹಾಗೂ ಸುರಾನಾ ಕಾಲೇಜು ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಪದವಿ ನಂತರ ಮುಂದೆ ಏನು? ಎಂಬ ಕಾರ್ಯಕ್ರಮವನ್ನು ಸಸಿಗೆ ನೀರೇರೆಯುವುದರ ಮುಖಾಂತರ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಪಿ. ವಿಠ್ಠಲ ರಡ್ಡಿ ಹಾಗೂ ಡಾ. ಗುರುರಾಜ ದುರ್ಗಣ್ಣನವರ ಇವರಿರ್ವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು.

ಈ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿ ಡಾ. ಗುರುರಾಜ ಗ್ರಂಥಪಾಲಕರು ಸುರಾನಾ ಕಾಲೇಜು, ಬೆಂಗಳೂರು ಅವರು ಮಾತನಾಡುತ್ತಾ ಇಂದಿನ ವಿದ್ಯಾರ್ಥಿಗಳು ಪದವಿ ನಂತರ ಮುಂದೆ ದೊಡ್ಡ ದೊಡ್ಡ ಅಂತರಾಷ್ಟ್ರೀಯ ಮಟ್ಟದ ಕಂಪನಿಗಳಲ್ಲಿ ಹುದ್ದೆಗೆ ಸೇರಲು ಸಂದರ್ಶನ ನೀಡುವುದು ಮುಖ್ಯ ಆದರೆ, ಈ ಭಾಗದ ವಿದ್ಯಾರ್ಥಿಗಳು ಜಾಣ್ಮೆ ಹೊಂದಿದ್ದರೂ ಕೂಡ ಸಂದರ್ಶನ ಎದುರಿಸಲು ಹೆದರುತ್ತಾರೆ. ನಮ್ಮ ಈ ಕಾರ್ಯಗಾರದಿಂದ ಸಂದರ್ಶನದಲ್ಲಿ ಹೇಗೆ ವರ್ತಿಸಬೇಕು, ಹೇಗೆ ಮಾತನಾಡಬೇಕು ಹಾಗೂ ನಾವು ಅವರು ಕೇಳುವ ಪ್ರಶ್ನೆಗಳಿಗೆ ಯಾವ ರೀತಿಯ ಉತ್ತರಗಳನ್ನು ನೀಡಿ ಹುದ್ದೆ ಗಿಟ್ಟಿಸಬೇಕು ಎಂದು ನುಡದರು. ಅದೇ ರೀತಿ ವಿದ್ಯಾರ್ಥಿಗಳಿಗೆ ಕಿರು ಪರೀಕ್ಷೆ ನಡೆಸಿ ಅದರಲ್ಲಿ ಉನ್ನತ ಅಂಕಗಳು ಗಳಿಸಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಿ ವಿದ್ಯಾರ್ಥಿಗಳಿಗೆ ಹುರಿದುಂಬಿಸಿದರು.

ಇನ್ನೋರ್ವ ಅತಿಥಿಯಾದ ಮನ:ಶಾಸ್ತ್ರ ಹಾಗೂ ಯೋಗ ಗುರುಗಳಾದ ಶ್ರೀ ರವಿ ಕೆ. ಅಗ್ರಹಾರ ಅವರು ಮಾತನಾಡುತ್ತಾ ಸಸಿಗೆ ನೀರೇರೆದು ಕಾರ್ಯಕ್ರಮವನ್ನು ಉದ್ಘಾಟಿಸಿದ್ದು ನನಗೆ ಅತೀವ ಸಂತಸ ನೀಡಿದೆ. ಇದರ ಅರ್ಥ ಏನೆಂದರೆ, ಪ್ರಕೃತಿಯೇ ದೇವರು ಪ್ರಕೃತಿಯಿಂದ ಮಾತ್ರ ನಾವು ಒಳ್ಳೆಯ ಆರೋಗ್ಯ ಪಡೆಯಲು ಸಾಧ್ಯ ಆದುದರಿಂದ ಪ್ರಕೃತಿ ರಕ್ಷಣೆ ಮಾಡುವುದು ಎಲ್ಲಾ ವಿದ್ಯಾರ್ಥಿಗಳು ಹಾಗೂ ಪ್ರತಿಯೊಬ್ಬ ಭಾರತೀಯನ ಕರ್ತವ್ಯ ಎಂದು ನುಡಿದರು.

ಕಾರ್ಯಕ್ರಮ ಆರಂಭದಲ್ಲಿ ಮಹಾವಿದ್ಯಾಲಯ ಉಪ ಪ್ರಾಂಶುಪಾಲರಾದ ಶ್ರೀ ಅನೀಲಕುಮಾರ ಅಣದೂರೆಯವರು ಪ್ರಸ್ತಾವಿಕ ನುಡಿಯಲ್ಲಿ ನಾವು ವಿದ್ಯಾರ್ಥಿಗಳಿಗ ಅನುಕುಲವಾಗುವ ಹತ್ತು ಹಲವಾರು ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳ ಪರವಾಗಿ ಅವರ ಏಳ್ಗೆಗೋಸ್ಕರ ಹಗಲಿರುಳು ಶ್ರಮಿಸುತ್ತಿದ್ದೇವೆ. ಇದರ ಸದುಪಯೋಗ ವಿದ್ಯಾರ್ಥಿಗಳು ಪಡೆಯಬೇಕೆಂದು ಕಿವಿ ಮಾತು ಹೇಳಿದರು.

ಕಿರು ಪರೀಕ್ಷೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಾದ ಕು. ತಕ್ಷಶೀಲಾ ಮತ್ತು ಕು. ಸೌಂದರ್ಯ ಪ್ರಥಮ ಮತ್ತು ದ್ವಿತೀಯ ಬಹುಮಾನ ಪಡೆದು ಪ್ರಶಸ್ತಿ ಮತ್ತು ಪ್ರಮಾಣ ಪತ್ರ ಸ್ವೀಕರಿಸಿದರು.

ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಪಿ. ವಿಠ್ಠಲ ರಡ್ಡಿಯವರು ಮಾತನಾಡುತ್ತಾ ಇಂದಿನ ವಿದ್ಯಾರ್ಥಿಗಳು ಓದುವ ಹವ್ಯಾಸ ಬೆಳಸಿಕೊಳ್ಳಬೇಕು. ದಿನಾಲು ಕನಿಷ್ಠ ಮೂರು ಗಂಟೆಗಳಾದರು ಗ್ರಂಥಾಲಯದಲ್ಲಿ ಕುಳಿತು ಓದುವ ಹವ್ಯಾಸ ಬೆಳಸಿಕೊಳ್ಳಬೇಕು. ಪದವಿ ನಂತರ ಉನ್ನತ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ ಆ ಪರೀಕ್ಷೆಯಲ್ಲಿ ಉನ್ನತ ಅಂಕಗಳು ಪಡೆದು ಹುದ್ದೆಗಳನ್ನು ಪಡೆಯಬೇಕು ಇದರಿಂದ ಪಾಲಕರಿಗೆ ಹಾಗೂ ಮಹಾವಿದ್ಯಾಲಯದ ಪ್ರಾಧ್ಯಾಪಕರಿಗೆ ತಾವು ಜನ್ಮ ಪಡೆದ ಗ್ರಾಮಕ್ಕೆ ಕೀರ್ತಿ ತರಬೇಕು ಆಗ ಮಾತ್ರ ನಾವು ಭಾರತಾಂಬೆಯ ಹೆಮ್ಮೆಯ ಮಕ್ಕಳೆಂದು ಹೇಳಿಕೊಳ್ಳಲು ಎಲ್ಲರಿಗೂ ಸಾಧ್ಯವಾಗುತ್ತದೆ, ಕೇವಲ ಅಂಕಗಳೇ ಭವಿಷ್ಯವನ್ನು ನಿರ್ಧರಿಸುವುದಿಲ್ಲ ಇದರ ಜೊತೆಗೆ ಜೀವನ ಹಾಗೂ ಮೃದು ಕೌಶಲ್ಯಗಳನ್ನು ಉಪಯೋಗಿಸಿಕೊಂಡು ಉನ್ನತ ಹುದ್ದೆ ಅಲಂಕರಿಸಬೇಕು ಎಂದು ಮಾರ್ಮಿಕವಾಗಿ ನುಡಿದರು.

ಕಾರ್ಯಕ್ರಮ ಮೊದಲಿಗೆ ಬಿ.ಎ. 2ನೇ ಸೆಮಿಸ್ಟರ ವಿದ್ಯಾರ್ಥಿನಿ ಕು. ಭುವನೇಶ್ವರಿ ಪ್ರಾರ್ಥನೆ ಗೀತೆ ಹಾಡಿದರೆ, ಇತಿಹಾಸ ವಿಭಾಗದ ಪ್ರಾಧ್ಯಾಪಕರಾದ ಶ್ರೀ ಬಸವರಾಜ ಬಿರಾದಾರ ಸ್ವಾಗತಿಸಿದರೆ, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ವಾಣಿಶ್ರೀ ವಂದಿಸಿದರೆ, ಹಿಂದಿ ವಿಭಾಗದ ಪ್ರಾಧ್ಯಾಪಕರಾದ ಶ್ರೀ ಮಾರುತಿ ಭೀಮಣ್ಣಾ ನಿರೂಪಿಸಿದರು.

# ಅನುದಾನ ರಹಿತ ಶಾಲೆಗಳ ಉತ್ತಮ ಸಾಧನೆ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಮೇ. 06 :– ಎಸ್ಎಸ್ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಬೀದರ್ ಜಿಲ್ಲೆಯ ಅನುದಾನರಹಿತ ಶಾಲೆಗಳ ಮಕ್ಕಳು ಉತ್ತಮ ಸಾಧನೆ ಮಾಡಿದ್ದಾರೆ.

ಜಿಲ್ಲೆಯ ಒಟ್ಟಾರೆ ಫಲಿತಾಂಶ ಅವಲೋಕಿಸಿದಾಗ ಸರ್ಕಾರಿ ಹಾಗೂ ಅನುದಾನ ಸಹಿತ ಶಾಲೆಗಳಿಗೆ ಹೋಲಿಸಿದರೆ ಅನುದಾನ ರಹಿತ ಶಾಲೆಗಳ ಮಕ್ಕಳು ಮುಂದೆ ಇದ್ದಾರೆ.

ಅನುದಾನ ರಹಿತ ಶಾಲೆಗಳಿಗೆ ಶೇ 62.78ರಷ್ಟು ಫಲಿತಾಂಶ ಬಂದಿದೆ. ಒಟ್ಟು 9,857 ಮಕ್ಕಳು ಪರೀಕ್ಷೆಗೆ ಹಾಜರಾಗಿದ್ದರು. ಈ ಪೈಕಿ 6,188 ಮಕ್ಕಳು ಉತ್ತೀರ್ಣರಾಗಿದ್ದಾರೆ.

ಅನುದಾನ ಸಹಿತ ಶಾಲೆಗಳಿಗೆ ಹೋಲಿಸಿದರೆ ಸರ್ಕಾರಿ ಶಾಲಾ ಮಕ್ಕಳು ಉತ್ತಮ ಫಲಿತಾಂಶ ಪಡೆದಿದ್ದಾರೆ. 9,057 ಸರ್ಕಾರಿ ಶಾಲಾ ಮಕ್ಕಳು ಪರೀಕ್ಷೆ ಬರೆದಿದ್ದು, ಇದರಲ್ಲಿ 4,234 ಮಕ್ಕಳು ಪಾಸಾಗಿದ್ದಾರೆ. ಶೇ 46.75ರಷ್ಟು ಫಲಿತಾಂಶ ಲಭಿಸಿದೆ. ಇನ್ನು, ಅನುದಾನಿತ ಶಾಲೆಗಳಿಗೆ ಶೇ 42.27 ಫಲಿತಾಂಶ ಬಂದಿದೆ. 5,273 ಮಕ್ಕಳು ಪರೀಕ್ಷೆಗೆ ಹಾಜರಾಗಿದ್ದರು. ಇದರಲ್ಲಿ 2,229 ಮಕ್ಕಳಷ್ಟೇ ಪಾಸಾಗಿದ್ದಾರೆ.

'ಅನುದಾನ ರಹಿತ ಶಾಲೆಗಳಲ್ಲಿ 'ಚೆಕ್ ಅಂಡ್ ಬ್ಯಾಲೆನ್ಸ್' ವ್ಯವಸ್ಥೆ ಇದೆ. ಸರ್ಕಾರಿ ಹಾಗೂ ಅನುದಾನ ಸಹಿತ ಶಾಲೆಗಳಿಗೆ ಹೋಲಿಸಿದರೆ ಅನುದಾನ ರಹಿತ ಶಾಲೆಗಳಿಗೆ ಹೆಚ್ಚಿನ ಸವಾಲು ಇದೆ. ಹೆಚ್ಚಿನ ಶುಲ್ಕ ಪಾವತಿಸುವ ಪೋಷಕರು, ಮಕ್ಕಳ ಪ್ರತಿಯೊಂದು ಶೈಕ್ಷಣಿಕ ವಿಚಾರಗಳನ್ನು ಕಾಲಕಾಲಕ್ಕೆ ಪ್ರಶ್ನಿಸುತ್ತಾರೆ. ಮಕ್ಕಳಿಗೆ ಸರಿಯಾಗಿ ಪಾಠ ಮಾಡದಿದ್ದರೆ ಬೇರೆ ಶಾಲೆಗೆ ಸೇರಿಸುತ್ತಾರೆ. ಈ ಭಯದಿಂದ ಪಾಠ, ಪ್ರವಚನಕ್ಕೆ ಅಲ್ಲಿ ಹೆಚ್ಚಿನ ಒತ್ತು ಕೊಡಲಾಗುತ್ತಿದೆ. ಈ ಭಯ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳವರಿಗೆ ಇಲ್ಲ. ಇಲ್ಲೂ ಕೂಡ 'ಚೆಕ್ ಅಂಡ್ ಬ್ಯಾಲೆನ್ಸ್' ವ್ಯವಸ್ಥೆ ಕಟ್ಟುನಿಟ್ಟಿನಿಂದ ಬಂದರೆ ಇನ್ನಷ್ಟು ಸುಧಾರಣೆ ಕಾಣಬಹುದು' ಎನ್ನುತ್ತಾರೆ ಶಿಕ್ಷಣ ಕ್ಷೇತ್ರದ ತಜ್ಞರು.



**ಬೀದರ್ ಜಿಲ್ಲೆಯ ಸರ್ಕಾರಿ, ಅನುದಾನ ಸಹಿತ ಹಾಗೂ ಅನುದಾನ ರಹಿತ ಶಾಲೆಗಳ ಫಲಿತಾಂಶ ವಿವರ**

| ಸರ್ಕಾರಿ ಶಾಲಾ ಮಕ್ಕಳು | ಪಾಸಾದವರು | ಶೇ |
|---|---|---|
| 9,057 | 4,234 | 46.75% |
| ಅನುದಾನಿತ ಶಾಲಾ ಮಕ್ಕಳು | | |
| 5,273 | 2,229 | 42.27% |
| ಅನುದಾನರಹಿತ ಶಾಲಾ ಮಕ್ಕಳು | | |
| 9,857 | 6,188 | 62.78% |

(ಮೂಲ: ಡಿಡಿಪಿಐ ಕಚೇರಿ, ಬೀದರ್)

ಪ್ರವರ್ಗ '3ಬಿ'ಗೆ ಹೆಚ್ಚು ಫಲಿತಾಂಶ:

ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಪ್ರವರ್ಗ '3ಬಿ' ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿ, ಹೆಚ್ಚು ಫಲಿತಾಂಶ ಗಿಟ್ಟಿಸಿದ್ದಾರೆ. '3ಬಿ'ಗೆ ಶೇ 67.91ರಷ್ಟು ಫಲಿತಾಂಶ ಲಭಿಸಿದೆ. ಪರಿಶಿಷ್ಟ ಜಾತಿ ಮಕ್ಕಳು ಕೊನೆಯ ಸ್ಥಾನದಲ್ಲಿದ್ದಾರೆ. ಶೇ 42.80ರಷ್ಟು ಫಲಿತಾಂಶ ಬಂದಿದೆ. ಪ್ರವರ್ಗ '2ಎ', ಪ್ರವರ್ಗ '3ಎ', ಇತರೆ ವರ್ಗದ ವಿದ್ಯಾರ್ಥಿಗಳು ಶೇ 60ಕ್ಕಿಂತ ಹೆಚ್ಚಿನ ಫಲಿತಾಂಶ ಪಡೆದಿದ್ದಾರೆ. ಪರಿಶಿಷ್ಟ ಪಂಗಡಕ್ಕೆ ಸೇರಿದ ಶೇ 50.89ರಷ್ಟು ಮಕ್ಕಳು ಪಾಸಾಗಿದ್ದಾರೆ.

'ಪ್ರವರ್ಗ '3ಬಿ'ಯಲ್ಲಿ ಲಿಂಗಾಯತರಿದ್ದಾರೆ. ಅವರಿಗೆ ಮಠ, ಮಾನ್ಯಗಳು ಸೇರಿದಂತೆ ಎಲ್ಲ ಕಡೆಯಿಂದಲೂ ಆರಂಭದಿಂದ ಉತ್ತಮ ಸೌಲಭ್ಯಗಳು ಸಿಗುತ್ತಿವೆ. ಸಹಜವಾಗಿಯೇ ಆ ವರ್ಗದ ಮಕ್ಕಳು ಹೆಚ್ಚು ಉತ್ತೀರ್ಣರಾಗಿದ್ದಾ–ರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಇನ್ನಷ್ಟೇ ಮುಖ್ಯ ವಾಹಿನಿಗೆ ಬರಬೇಕಿದೆ. ಅನೇಕ ಮನೆತನದವರು ಈಗಷ್ಟೇ ಶಾಲೆಯ ಮುಖ ನೋಡುತ್ತಿದ್ದಾರೆ. ನಿಧಾನವಾಗಿ ಬದಲಾವಣೆ ಆಗುತ್ತದೆ' ಎಂದು ಹೆಸರು ಹೇಳಲಿಚ್ಛಿಸದ ಪರಿಶಿಷ್ಟ ಸಮಾಜದ ಮುಖಂಡರೊಬ್ಬರು ತಿಳಿಸಿದ್ದಾರೆ.

## ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರ: ಹೆಸರು ನೋಂದಾಯಿಸಲು ಮನವಿ

ಮಲ್ಲಮ್ಮ ನುಡಿ ವಾರ್ತೆ

ಬೀದರ ಮೇ.6:– ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಇಂದು ಬಹಳ ಪ್ರಸ್ತುತವಾದ "Lakes-2025:Healthy Lakes, Healthy Lives: The Need for Conservation" ಎಂಬ ವಿಷಯದ ಮೇಲೆ 2025ನೇ ಮೇ.22 ಮತ್ತು 23 ರಂದು ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಅಕಾಡೆಮಿಯ ಕಛೇರಿಯಲ್ಲಿ ಆಯೋಜಿಸಲಾಗುತ್ತಿದೆ ಎಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಯಾಗಾರದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ತಾಂತ್ರಿಕ ಉಪನ್ಯಾಸಗಳನ್ನು ನೀಡಲಿದ್ದು, ಸ್ನಾತಕೋತ್ತರ ವಿಜ್ಞಾನ, ಸಂಶೋಧನಾ, ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಯುವ ವಿಜ್ಞಾನಿಗಳು, ಶೈಕ್ಷಣಿಕ ತಜ್ಞರು, ಯುವ ಉದ್ಯಮೆದಾರರು ಭಾಗವಹಿಸಬಹುದಾಗಿದೆ. ಅಲ್ಲದೇ ಯುವ ವಿಜ್ಞಾನಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು ResearchPaperPresentation ಮಂಡಿಸಲು ಅವಕಾಶ ಕಲ್ಪಿಸಲಾಗಿದ್ದು, ಆಯ್ಕೆಯಾದ Research Paper ಗಳಿಗೆ ನಗದು ಬಹುಮಾನವನ್ನು ನೀಡಲಾಗುತ್ತದೆ.

ಆಸಕ್ತ ಪ್ರತಿನಿಧಿಗಳು ದಿನಾಂಕ: 17–05–2025 ರೊಳಗಾಗಿ (Google form-https://forms.gle/qYAgXUbi6iAqUgaH7) ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಗಾರದ ಸಂಯೋಜಕರ ಮೊಬೈಲ್ ಸಂಖ್ಯೆ: 9845258894, 9620767819 ಹಾಗೂ 9611198189ಗೆ ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

## ಅಪರಿಚಿತ ಮಹಿಳೆ ಮೃತ: ವಾರಸುದಾರ ಪತ್ತೆಗಾಗಿ ಮನವಿ

ಮಲ್ಲಮ್ಮ ನುಡಿ ವಾರ್ತೆ

ಬೀದರ :ಮೇ.6:– ಬಗದಲ ಪೊಲೀಸ್ ಠಾಣೆಯ ವ್ಯಾಪ್ತಿಯ ಬಾಪುರ ಶಿವಾರ ಮೀನಕೇರಾ ಕ್ರಾಸ್ ಹತ್ತಿರ ದಿನಾಂಕ: 19–11–2024 ರಂದು ಸಾಯಂಕಾಲ 4 ಗಂಟೆಗೆ ಅಂದಾಜು 45–50 ವರ್ಷ ವಯಸ್ಸಿನ ಅಪರಿಚಿತ ಮಹಿಳೆ ಮೃತಪಟ್ಟಿದ್ದು ಇಲ್ಲಿಯವರೆಗೆ ವಾರಸುದಾರರು ಯಾರೆಂದು ಪತ್ತೆಯಾಗಿರುವುದಿಲ್ಲ ಎಂದು ಬಗದಲ್ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬೀದರ ಮುನ್ನಾಏಖೇಳಿಯ ಪ್ರಶಾಂತ ತಂದೆ ನಾಗೇಂದ್ರ ಅವರ ಲಿಖಿತ ದೂರಿನ ಮೇರೆಗೆ ಬಗದಲ ಪೊಲೀಸ್ ಠಾಣೆಯ ಯುಡಿಆರ್ ನಂ. 08/2024 ರಡಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ. ಮೃತ ಮಹಿಳೆಯು 5 ಅಡಿ 2 ಇಂಚ್ ಎತ್ತರ ಇದ್ದು, ಬಿಳಿ ಮೈಬಣ್ಣ ಹೊಂದಿದ್ದು, ಮೈಮೇಲೆ ನೀಲಿ ಹಾಗೂ ಗುಲಾಬಿ ಮಿಶ್ರಿತ ಚಾದರ ಹೊದಿಸಿದ್ದು ಇರುತ್ತದೆ. ಈ ಮೃತ ಮಹಿಳೆಯ ವಾರಸುದಾರರು ಯಾರಾದರೂ ಇದ್ದಲ್ಲಿ ಪೊಲೀಸ್ ಕಂಟ್ರೋಲ್ ರೂಮ್ ಬೀದರ ದೂರವಾಣಿ ಸಂಖ್ಯೆ: 08242–226704, ಸಿಪಿಐ ಗ್ರಾಮೀಣ ವೃತ್ತ ಬೀದರ ಮೊಬೈಲ್ ಸಂಖ್ಯೆ: 9480803439, ಪಿ.ಎಸ್.ಐ. ಬಗದಲ ಪೊಲೀಸ್ ಠಾಣೆ ಮೊಬೈಲ್ ಸಂಖ್ಯೆ: 9480803451ಗೆ ಸಂಪರ್ಕಿಸುವಂತೆ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಪ್ರವೇಶಾತಿಗಾಗಿ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬೀದರ:ಮೇ.6:– ಸರಕಾರಿ ಪ್ರಥಮ ದರ್ಜೆ ಕಾಲೇಜು ನೌಬಾದ ಬೀದರನಲ್ಲಿ 2025–26ನೇ ಸಾಲಿಗೆ ಬಿ.ಎ., ಬಿ.ಎಸ್ಸಿ., ಬಿ.ಕಾಂ., ಬಿ.ಸಿ.ಎ., ಮತ್ತು ಬಿಬಿಎ ಪದವಿ ಕೋರ್ಸುಗಳಿಗೆ ಪ್ರವೇಶಾತಿ ಪ್ರಾರಂಭವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9448624880, 8073894356ಗೆ ಸಂಪರ್ಕಿಸಬಹುದಾಗಿದೆ ಎಂದು ಬೀದರ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವ್ಯಕ್ತಿ ಕಾಣೆ: ಪತ್ತೆಗಾಗಿ ಮನವಿ

ಮಲ್ಲಮ್ಮ ನುಡಿ ವಾರ್ತೆ

ಬೀದರ:ಮೇ.6:–ಬೀದರ ಲುಂಬಿಣಿ ನಗರ ನೌಬಾದ ನಿವಾಸಿಯಾದ ಪ್ರಫುಲ್ ತಂದೆ ದಿ.ನಿರಂಕಾರ (ವ:21) ಇವರು ದಿನಾಂಕ: 01–05–2025 ರಂದು ಮನೆಯಿಂದ ವಾಕಿಂಗ್ ಮಾಡಲು ಹೊಗುತ್ತಿದ್ದೇನೆಂದು ಅಂತಾ ಹೇಳಿ ಮರಳಿ ಮನೆಗೆ ಬರದೆ ಕಾಣೆಯಾಗಿರುತ್ತಾನೆ.

ಕಾಣೆಯಾದ ವ್ಯಕ್ತಿಯು 5 ಅಡಿ 5 ಫೀಟ್ ಎತ್ತರ ಇದ್ದು, ದುಂಡು ಮುಖ, ದಪ್ಪನೆ ಮೈಕಟ್ಟು, ಕಪ್ಪು ಮೈಬಣ್ಣ ಹೊಂದಿದ್ದು, ಮೇಲೆ ಬಿಳಿ ಬಣ್ಣದ ಶರ್ಟ ಮತ್ತು ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುವ ಇತನು ಕನ್ನಡ, ಹಿಂದಿ ಹಾಗೂ ಮರಾಠಿ ಭಾಷೆಯಲ್ಲಿ ಮಾತನಾಡುತ್ತಾನೆ.

ಈ ಕಾಣೆಯಾದ ವ್ಯಕ್ತಿಯ ಬಗ್ಗೆ ಯಾರಿಗಾದರೂ ಮಾಹಿತಿ ಸಿಕ್ಕಲ್ಲಿ ನೂತನ ನಗರ ಪೊಲೀಸ್ ಠಾಣೆಯ ಪೊಲೀಸ್ ಇನ್ಸಪೇಕ್ಟರ್ ಮೊಬೈಲ್ ಸಂಖ್ಯೆ: 9480803446, ಬೀದರ ಕಂಟ್ರೋಲ್ ರೂಮ್ ದೂರವಾಣಿ ಸಂಖ್ಯೆ: 08482–226704, ಬೀದರ ನೂತನ ನಗರ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ: 08482–228256 ಗೆ ಸಂಪರ್ಕಿಸುವಂತೆ ಬೀದರ ನೂತನ ನಗರ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಿಗೆ 5.00 ಲಕ್ಷ ರೂ. ಗೌರವ ಧನ

## ನೀಡಲು ಕೇಂದ್ರ ಸರಕಾರಕ್ಕೆ ಒತ್ತಾಯಿಸಬೇಕೆಂದು ಸಂಸದರಿಗೆ ಮನವಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮೇ. 06 :– ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಿಗೆ ರೂ. 5.00 ಲಕ್ಷಗಳ ಗೌರವದೊಂದಿಗೆ ಪ್ರಶಸ್ತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಬೇಕೆಂದು ಬೀದರ ಸಂಸದರಾದ ಸಾಗರ ಖಂಡ್ರೆ ಅವರಿಗೆ ಕಲ್ಯಾಣ ಕರ್ನಾಟಕ ಕಲಾವಿದರ ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷ ವಿಜಯಕುಮಾರ ಸೋನಾರೆ ಮನವಿ ಪತ್ರ ಸಲ್ಲಿಸಿದರು. ಈಗಾಗಲೇ ಕೇಂದ್ರ ಸರ್ಕಾರದ ವತಿಯಿಂದ ಪ್ರತಿ ವರ್ಷ ಸಾಧಕರಿಗೆ ಪದ್ಮಶ್ರೀ, ಪದ್ಮಭೂಷಣ, ಪದ್ಮ ವಿಭೂಷಣ ಪ್ರಶಸ್ತಿಗಳು ನೀಡುತ್ತಿರುವುದು ಸ್ವಾಗತಾರ್ಹ, ಆದರೇ ಪ್ರಶಸ್ತಿ ಜೊತೆಗೆ ಯಾವೂದೇ ರೀತಿಯ ಗೌರವ ಧನ ನೀಡುವುದಿಲ್ಲ. ಕರ್ನಾಟಕ ರಾಜ್ಯ ಸರಕಾರ ಪ್ರತಿ ವರ್ಷ ನೀಡುವ ರಾಜ್ಯೋತ್ಸವ ಪ್ರಶಸ್ತಿಗೆ ರೂ.5.00 ಲಕ್ಷ ಹಾಗೂ ವಿವಿಧ ಅಕಾಡೇಮಿ ದತ್ತಿ ಪ್ರಶಸ್ತಿಗಳಿಗೂ ರೂ. 25 ಸಾವಿರ ಗೌರವ ಧನ ನೀಡುತ್ತಿದೆ. ಆದರಿಂದ ಕೇಂದ್ರ ಸರಕಾರ ಮತ್ತು ಸಂಸ್ಕೃತಿ ಮಂತ್ರಾಲಯಕ್ಕೆ ಒತ್ತಾಯಿಸಿ ಮುಂದಿನ ದಿನಗಳಲ್ಲಿ ನೀಡುವ ಪದ್ಮಶ್ರೀ, ಪದ್ಮಭೂಷಣ, ಪದ್ಮ ವಿಭೂಷಣ ಪ್ರಶಸ್ತಿ ಪುರಸ್ಕೃತರಿಗೆ ಪ್ರಶಸ್ತಿ ಜೊತೆಗೆ ರೂ.5.00 ಲಕ್ಷ ಗೌರವ ಧನದೊಂದಿಗೆ ಗೌರವಿಸಿ, ಅವರಿಗೆ ಮಾಸಿಕ ರೂ. 5 ಸಾವಿರ ಮಾಶಾಸನ ದೊರಕುವಂತೆ ಕೇಂದ್ರ ಸರಕಾರಕ್ಕೆ ಒತ್ತಾಯಿಸಬೇಕೆಂದು ಸಂಸದ ಸಾಗರ ಖಂಡ್ರೆಯವರಲ್ಲಿ ಮನವಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯ ಪ್ರಶಸ್ತಿ ಪುರಸ್ಕೃತ ಸುನೀಲ ಭಾವಿಕಟ್ಟಿ, ಗುರುಶಾಂತ (ಗುರು), ಸಿದ್ದಲಿಂಗ್ ಕಣಜಿ ಇದ್ದರು.

# ಜನಪದೀಯರದು ತ್ಯಾಗಮಯ ಜೀವನ ಪ್ರೋ. ಬಿ ಎಸ್ ಬಿರಾದಾರ ಅಭಿಮತ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮೇ. 06 :– ಬೀದರ್ ತಾಲೂಕಿನ ಕಂಗನಕೋಟ ಗ್ರಾಮದಲ್ಲಿ ಶುಕ್ರವಾರ ಭುಳ್ಳಾ ಪರಿವಾರದ ಕೀರ್ತಿ ಕಳಶವಾದ ಜನಪದ ಕಣಜ ಸತ್ಸಂಗ ಜೀವಿ ಧರ್ಮವಂತೆ ಯಾದ ಶ್ರೀಮತಿ ಬಕ್ಕಮ್ಮ ಭೀಮಶೆಟ್ಟಿ ಭುಳ್ಳಾ ರವರ ಅಮೃತ ಮಹೋತ್ಸವದ ಪ್ರಯುಕ್ತ ತುಲಾಭಾರ ಹಾಗೂ ಜನಪದ ಧಾರೆ ಪುಸ್ತಕ ಬಿಡುಗಡೆ ಸಮಾರಂಭ

ಈ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬೀದರ್ ವಿಶ್ವ ವಿದ್ಯಾಲಯದ ಕುಲಪತಿಗಳಾದ ಪ್ರೊ ಬಿಎಸ್ ಬಿರಾದಾರ ರವರು ಭುಳ್ಳಾ ಪರಿವಾರದವರು ಇಂದಿನ ದಿನಮಾನಕೆ ಅಗತ್ಯವಾದ ಕಾರ್ಯ ಕೈಗೊಂಡಿದ್ದಾರೆ, ಗ್ರಾಮೀಣ ಪ್ರದೇಶದ ಜನಪದ ಸೊಗಡು ಇಂದು ಅಳಿವಿನಂಚಿನೆಡೆಗೆ ಸಾಗುತ್ತಿರುವ ಸಂದರ್ಭದಲ್ಲಿ ಭುಳ್ಳಾ ಪರಿವಾರದವರು ತನ್ನ ತಾಯಿ ಬಕ್ಕಮ್ಮ ರವರ ಜನಪದ ಕಲೆಯನ್ನು ಜೀವಂತ ವಾಗಿರಿಸುವ ಸಲುವಾಗಿ ತನ್ನ ತಾಯಿ ಹಾಡುವ ಹಾಡುಗಳನ್ನು ಒಂದು ಗೂಡಿಸಿ ಉತ್ತಮ ವಾದ ಗುಣಮಟ್ಟದ ಪುಸ್ತಕ ರಚಿಸಿ ಶ್ಲಾಘನೀಯ ಕಾರ್ಯ ಕೈಗೊಂಡಿದ್ದಾರೆ, ಅಂದಿನ ಜನಪದಿಯರ ಜೀವನ ಅತ್ಯಂತ ಸಾತ್ವಿಕ, ತ್ಯಾಗ ಮಯವಾದ ಬದುಕು ಎಂದು ನುಡಿದು

ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಪುಸ್ತಕ ಬಿಡುಗಡೆಗೊಳಿಸಿದ ಶ್ರೀ ಡಾ ರಾಜಶೇಖರ ಶಿವಾಚಾರ್ಯರು ಬಕ್ಕಮ್ಮ ಭುಳ್ಳಾ ರವರ ಜೀವನ ನಮ್ಮೆಲ್ಲರಿಗೂ ಇಂದಿಗೂ, ಎಂದೆಂದಿಗೂ ಮಾದರಿಯಾಗಿರುತ್ತದೆ, ಅಪಾರ ಪ್ರಮಾಣದಲ್ಲಿ ಸೇರಿದ ಜನಸ್ತೋಮ ವನ್ನು ಕಂಡಾಗ ಅವರ ಸಹಬಾಳ್ವೆಯ ಜೀವನ ನಮ್ಮ ಕಣ್ಣ ಮುಂದೆ ಚಿತ್ರ ಕಟ್ಟುತ್ತದೆ.

ತಾಯಿಯವರು ಜನಪದ ಜೀವಿ, ಅವರಿಗೆ ಜನಪದ ಕಲೆ ತನ್ನ ರಕ್ತದ ಕಣ ಕಣ ದಲೂ ಸೇರಿದೆ ಅವರು ಕೇವಲ ಜನಪದದಲ್ಲಲದೆ ಧಾರ್ಮಿಕ ಕಾರ್ಯಕ್ರಮ ಗಳಲ್ಲೂ ಮುಂಚೂಣಿ ಸ್ಥಾನ ವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಲಿ ಸದಾ ನಿರತರಾಗಿರುತ್ತಾರೆ,

ಈ ಸಂದರ್ಭದಲ್ಲಿ ಶಕುಂತಲಾ ಬೆಲ್ದಾಳೆ ಶ್ರೀ ಡಾ ರಾಮಚಂದ್ರ ಗಣಾಪೂರರವರು ವಿಶೇಷ ಉಪನ್ಯಾಸ ನೀಡಿದರು. ಸಾಹಿತಿ ಶಿವಕುಮಾರ ಕಟ್ಟೆ ಕಳಿಮಠ ಸಂಸ್ಥಾನದ ಪರಮ ಪೂಜ್ಯ ಶ್ರೀ ವಿರೂಪಾಕ್ಷ ದೇವರು, ಬೀದರ್ ಗುರುದೇವಾರಮದ ಮಾತೋಶ್ರೀ ಸಿದ್ದಮ್ಮ, ಬೆಳೂರಿನ ಸಚ್ಚಿದಾನಂದಾ ಆಶ್ರಮದ ಮಾತೋಶ್ರೀ ಅಮೃತಾನಂದಮಯಿ ಮುಖಂಡರಾದ ಶ್ರೀ ಸುರೇಶ ಪಾಟೀಲ ಶಂಕರ್ ಭುಳ್ಳ ಬಸವರಾಜ ಭುಳ್ಳಾ ಪ್ರಾಸ್ತಾವಿಕ ನುಡಿ ನುಡಿದರು. ಶ್ರೀಮತಿ ಶೈಲಜಾ ಹುಡುಗೆ ನಿರೂಪಿಸಿದರು ನಾಗರಾಜ ಭುಳ್ಳಾ ಸ್ವಾಗತಿಸಿದರು ಸುಭಾಷ್ ಚಂದ್ರ ಭುಳ್ಳಾ ವಂದಿಸಿದರು. ಗ್ರಾಮದ ಸಕಲ ಗ್ರಾಮಸ್ಥರು ಸುತ್ತಮುತ್ತಲಿನ ಗ್ರಾಮದ ಗ್ರಾಮಸ್ಥರು, ಭಾಗವಹಿಸಿದರು ಖ್ಯಾತ ಕಲಾವಿದರಾದ ಮಲ್ಲಿಕಾರ್ಜುನ ಸ್ವಾಮಿ ಐನೋಳಿ ಹಾಗೂ ಪವನ ಸ್ವಾಮಿ ಖಾಶಂಪೂರರವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

## ಎಸ್‌ಎಸ್‌ಎಲ್‌ಸಿ ಪರೀಕ್ಷೆ: ಉತ್ತಮ ಅಂಕ ಪಡೆದ ಜ್ಞಾನಸುಧಾ ವಿದ್ಯಾರ್ಥಿಗಳಿಗೆ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮೇ. 06 :– 2024–25ನೇ ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆಗೈದ ವಿದ್ಯಾರ್ಥಿಗಳ ಸನ್ಮಾನ ಸಮಾರಂಭ ನಗರದ ಮಾಮನಕೇರದಲ್ಲಿರುವ ಜ್ಞಾನಸುಧಾ ವಿದ್ಯಾಲಯದ ಜ್ಞಾನರಂಗ ಸಭಾಂಗಣದಲ್ಲಿ ಸೋಮವಾರ ನಡೆಯಿತು.

ಸಮಾರಂಭದಲ್ಲಿ ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಪೂರ್ಣಿಮಾ ಜಿ. ಹಾಗೂ ಜ್ಞಾನಸುಧಾ ವಿದ್ಯಾಲಯದ ನಿರ್ದೇಶಕರಾದ ಡಾ. ಮುನೇಶ್ವರ ಲಾಖಾ ಅವರು ಪರೀಕ್ಷೆಯಲ್ಲಿ ಗಮನಾರ್ಹ ಸಾಧನೆಗೈದ ವಿದ್ಯಾರ್ಥಿಗಳಿಗೆ ಆತ್ಮೀಯವಾಗಿ ಸನ್ಮಾನಿಸಿ, ಪ್ರೋತ್ಸಾಹಿಸಿದರು.

ಸಮಾರಂಭದಲ್ಲಿ ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಪೂರ್ಣಿಮಾ ಜಿ. ಅವರು ಮಾತನಾಡಿ, 'ಪ್ರಸಕ್ತ ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ನಮ್ಮ ವಿದ್ಯಾಲಯದ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ನಮ್ಮ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುತ್ತಿರುವ ಕಾರಣ, ಶಿಕ್ಷಕರ ಪರಿಶ್ರಮ ಹಾಗೂ ಪಾಲಕರ ಸಹಕಾರದಿಂದಾಗಿ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಲು ಸಾಧ್ಯವಾಗಿದೆ' ಎಂದು ಮೆಚ್ಚಿಗೆ ವ್ಯಕ್ತಪಡಿಸಿದರು.

'ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳು ಮುಂದೆ ತಮಗೆ ಆಸಕ್ತಿ ಇರುವ ಕೋರ್ಸ್‌ನಲ್ಲಿ ಪ್ರವೇಶ ಪಡೆದು ಸರಿಯಾಗಿ ವ್ಯಾಸಂಗ ಮಾಡಿ ಸಮಾಜಕ್ಕೆ ಏನಾದರೂ ಕೊಡುಗೆ ನೀಡುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು' ಎಂದು ಸಲಹೆ ಮಾಡಿದರು.

ಜ್ಞಾನಸುಧಾ ವಿದ್ಯಾಲಯದ ನಿರ್ದೇಶಕರಾದ ಡಾ.ಮುನೇಶ್ವರ ಲಾಖಾ ಅವರು ಮಾತನಾಡಿ, 'ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ನಮ್ಮ ಜ್ಞಾನಸುಧಾ ವಿದ್ಯಾಲಯದ ವಸತಿ ಶಾಲೆಯಲ್ಲಿ ವ್ಯಾಸಂಗ ಮಾಡಿದ ಹೆಚ್ಚಿನ ವಿದ್ಯಾರ್ಥಿಗಳೇ ಅಗ್ರಶ್ರೇಣಿಯಲ್ಲಿ ತೇರ್ಗಡೆಯಾಗಿದ್ದು ವಿಶೇಷವಾಗಿದೆ' ಎಂದು ಹೇಳಿದರು.

'ವಿದ್ಯಾರ್ಥಿಗಳು ಉತ್ತಮ ಶೈಕ್ಷಣಿಕ ವಾತಾವರಣ ಹೊಂದಿರುವ, ಒಳ್ಳೆಯ ರೀತಿಯಿಂದ ಮಾರ್ಗದರ್ಶ ಕಲ್ಪಿಸುವ ಪದವಿಪೂರ್ವ ಕಾಲೇಜಿನಲ್ಲಿ ಪ್ರವೇಶ ಪಡೆದಾಗ ಮಾತ್ರ ಭವಿಷ್ಯದಲ್ಲಿ ಉತ್ತಮ ಸಾಧನೆ ಮಾಡಲು ಸಾಧ್ಯವಾಗುತ್ತದೆ' ಎಂದು ತಿಳಿಸಿದರು.

ಜ್ಞಾನಸುಧಾ ವಿದ್ಯಾಲಯದ ವಸತಿ ಶಾಲೆಯಲ್ಲಿ ವ್ಯಾಸಂಗ ಮಾಡಿ ಶಾಲೆಗೆ ಟಾಪರ್ ಆಗಿ ಹೊರಹೊಮ್ಮಿದ್ದ ಶಿವಕುಮಾರ ವೀರಶೆಟ್ಟಿ ಸನ್ಮಾನ ಸ್ವೀಕರಿಸಿ ಮಾತನಾಡಿ, 'ಜ್ಞಾನಸುಧಾ ವಿದ್ಯಾಲಯದಲ್ಲಿ ಗುಣಮಟ್ಟ ಶಿಕ್ಷಣ ನೀಡಿದ ಕಾರಣ ಪರೀಕ್ಷೆಯಲ್ಲಿ ನನಗೆ ಉತ್ತಮ ಅಂಕ ಪಡೆಯಲು ಸಾಧ್ಯವಾಗಿದೆ' ಎಂದು ತಿಳಿಸಿದರು.

ಸನ್ಮಾನ ಸ್ವೀಕರಿಸಿದ ವೈಭವ್ ಶಿವಕುಮಾರ, ಸಂಗಮೇಶ್ ಮಹೇಶ್, ರುಚಿ ಚಂದ್ರಪಾಲ್, ಶಾಂಭವಿ ರಾಜಕುಮಾರ, ಶ್ರದ್ಧಾ ಶಿವಶೆಟ್ಟಿ ಅವರು ಮಾತನಾಡಿ ತಮ್ಮ ಅಭಿಪ್ರಾಯ ತಿಳಿಸಿದರು.

ವಿದ್ಯಾರ್ಥಿಗಳಾದ ಪ್ರಜ್ವಲ್ ಶಾಲಿವಾನ್, ಸಾಯಿಸ್ವರೂಪ್ ಶಿವಕುಮಾರ, ಮಹಮ್ಮದ್ ರಿಹಾನ್ ರಾಯಿಸ್ ಅಹೆಮದ್, ಸಾಯಿಸಾಧನಾ ಸಂತೋಷ್ ರೆಡ್ಡಿ, ವೈಷ್ಣವಿ ಶಿವರಾಜ, ಕೃಷ್ಣರೆಡ್ಡಿ ರಾಜ–ರೆಡ್ಡಿ, ಅಕ್ಷರಾ ಮಲ್ಲಿಕಾರ್ಜುನ ಅವರನ್ನು ಸನ್ಮಾನಿಸಲಾಯಿತು.

ಜ್ಞಾನಸುಧಾ ಪದವಿಪೂರ್ವ ಕಾಲೇಜಿನ ಶೈಕ್ಷಣಿಕ ನಿರ್ದೇಶಕರಾದ ಸುಜಾತಾ ಬೊಮ್ಮಾರೆಡ್ಡಿ, ಜ್ಞಾನಸುಧಾ ವಿದ್ಯಾಲಯದ ಪ್ರಾಚಾರ್ಯರಾದ ಸುನೀತಾ ಸ್ವಾಮಿ, ಉಪಪ್ರಾಚಾರ್ಯರಾದ ಕಲ್ಪನಾ ಮೋದಿ, ಮೇಲ್ವಿಚಾರಕರಾದ ರಜನಿ, ಸಾಯಿಗೀತಾ ಉಪಸ್ಥಿತರಿದ್ದರು. ಸಮಾರಂಭದಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪಾಲಕರು ಪಾಲ್ಗೊಂಡಿದ್ದರು.

# ಇಂದು ತುಮಕೂರಿನಲ್ಲಿ ಬಿಜೆಪಿ ಜನಾಕ್ರೋಶ ಯಾತ್ರೆ

ಮಲ್ಲಮ್ಮ ನುಡಿ ವಾರ್ತೆ

ತುಮಕೂರು, ಮೇ 7– ರಾಜ್ಯ ಕಾಂಗ್ರೆಸ್ ಸರ್ಕಾರದ ಬೆಲೆ ಏರಿಕೆ, ಮುಸ್ಲಿಂ ಓಲೈಕೆ ನೀತಿ, ದಲಿತರ ಹಣ ದುರ್ಬಳಕೆ, ದುರಾಡಳಿತದ ವಿರುದ್ಧ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದ ಜನಾಕ್ರೋಶ ಯಾತ್ರೆ ಮೇ 8 ರಂದು ನಗರದಲ್ಲಿ ನಡೆಯಲಿದೆ.

ನಗರದಲ್ಲಿ ನಡೆಯುವ ಜನಾಕ್ರೋಶ ಯಾತ್ರೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್, ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮತ್ತಿತರ ಮುಖಂಡರು ಭಾಗವಹಿಸುವರು. ಅಂದು ಬೆಳಿಗ್ಗೆ 11 ಗಂಟೆಗೆ ನಗರ ಪಾಲಿಕೆ ಆವರಣದಲ್ಲಿ ಡಾ. ಅಂಬೇಡ್ಕರ್ ಪುತ್ಥಳಿಗೆ ಮುಖಂಡರು ಪುಷ್ಪಾರ್ಚನೆ ಮಾಡಿ ಜನಾಕ್ರೋಶ ಯಾತ್ರೆ ಪ್ರಾರಂಭಿಸುವರು. ಎಂ.ಜಿ. ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿವರೆಗೆ ಯಾತ್ರೆ ನಡೆಸಲಾಗುವುದು ಎಂದು ಶಾಸಕ ಸುರೇಶ್‌ಗೌಡ ಪತ್ರಕಾಗೋಷ್ಠಿಯಲ್ಲಿ ತಿಳಿಸಿದರು.

## ಉತ್ತಮ ಸಾಧನೆಗೆ ಮಕ್ಕಳಲ್ಲಿ ಸಂಸ್ಕಾರ ಅಗತ್ಯ : ಹಿಬಾರೆ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ : ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉತ್ತಮ ಸಾಧನೆ ಗೈಯಬೇಕಾದರೆ ಮಕ್ಕಳಲ್ಲಿ ಸಂಸ್ಕಾರ ಅಗತ್ಯವಾಗಿ ಬೇಕು ಎಂದು ಹಿಬಾರೆ ಶಾಲೆಯ ಅಧ್ಯಕ್ಷ ನಾಗರಾಜ ಹಿಬಾರೆ ಹೇಳಿದರು.

ತಾಲೂಕಿನ ಹಳ್ಳಿಖೇಡ (ಬಿ) ಆರ್.ಜಿ. ಹಿಬಾರೆ ಆವರಣದಲ್ಲಿ ಶಾಲಾ ಆಡಳಿತ ಮಂಡಳಿ ವತಿಯಿಂದ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳ ಸನ್ಮಾನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಗೆ ಇಂಬು ನೀಡುವ ನಿಟ್ಟಿನಲ್ಲಿ ಹಾಗೂ ಉಳಿದ ವಿದ್ಯಾರ್ಥಿಗಳಿಗೂ ಪ್ರೇರಣೆಯಾಗುವ ನಿಟ್ಟಿನಲ್ಲಿ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಗುತ್ತಿದೆ. ಹೀಗಾಗಿ ಮಕ್ಕಳ ಓದಿನ ವಿಚಾರದಲ್ಲಿ ಪಾಲಕ–ಪೋಷಕರು ಹೆಚ್ಚಿನ ಒತ್ತಡ ಹಾಕದೇ ಅವರ ಬೆಳವಣಿಗೆಗೆ ಪೂರಕವಾದ ವಾತಾವರಣ ನಿರ್ಮಿಸಿ ಕೊಡುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು.

ಗ್ರಾಮೀಣ ಭಾಗದಲ್ಲಿ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದರ ಜತೆಗೆ ಸಮಾಜಮುಖಿ ಕಾರ್ಯಕ್ರಮಗಳಿಗೆ ಹಿಬಾರೆ ಶಾಲೆ ಸಹಕರಿಸುತ್ತಾ ಬರುತ್ತಿದೆ. ಪ್ರಸ್ತುತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಮ್ಮ ಶಾಲೆಯ ಮಕ್ಕಳ ಈ ಸಾಧನೆ ಹಿಂದೆ ಶಿಕ್ಷಕ ವೃಂದದ ಹಾಗೂ ಪಾಲಕ ಪೋಷಕರ ಸಹಕಾರವು ಕೂಡಾ ಅಡಗಿದೆ ಎಂದು ತಿಳಿಸಿದರು.

ಇದೇ ವೇಳೆ ಪ್ರತಿಭಾವಂತ ಮಕ್ಕಳಾದ ಸೃಷ್ಟಿ ರಮೇಶಕುಮಾರ, ಸ್ನೇಹಾ ಪವನ, ಮೈಹಿನಾಜ, ನಾಗನಾಥ, ಅಕ್ಷರ ಸೇರಿ ಅವರ ಪಾಲಕ–ಪೋಷಕರಿಗೆ ಸನ್ಮಾನಿಸಿ ಗೌರವಿಸಿದರು. ಬಳಿಕ ಪರಸ್ಪರ ಸಿಹಿ ವಿನಿಮಯ ಮಾಡಿಕೊಂಡು ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಹಿಬಾರೆ ಶಾಲೆ ಉಪಾಧ್ಯಕ್ಷೆ ರುಚೀತಾ ಹಿಬಾರೆ, ಶಿಕ್ಷಣ ಸಂಸ್ಥೆ ಸದಸ್ಯ ಪ್ರಥ್ವಿರಾಜ ಹಿಬಾರೆ, ಮುಖ್ಯಶಿಕ್ಷಕಿ ಶಿಲ್ಪಾವತಿ, ರಾಜಶೇಖರ ಶೇರಿಕಾರ, ಸ್ವಾತಿ ಶೇರಿಕಾರ, ಬಸವರಾಜ ಚರಕಪಳ್ಳಿ, ರಾಜಕುಮಾರ ಜ್ಯೋತಿ, ಮಡೇಪ್ಪ ಕಪಲಾಪೂರೆ ಸೇರಿ ಅನೇಕರಿದ್ದರು.

ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾಧಿಕಾರಿಯವರ ಕಛೇರಿ,
ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ಬೀದರ ಜಿಲ್ಲೆ.

No: DPI/2025-26/IND0525 Date: 28/04/2025

**ಬೀದರ ಜಿಲ್ಲೆಯ 04 ಕೆ.ಜಿ.ಬಿ.ವಿ ಟೈಪ್–1 ವಸತಿ ಶಾಲೆಗಳಲ್ಲಿ ಸ್ಮಾರ್ಟ ಕ್ಲಾಸ್‌ರೂಮ್‌ಗಳ ನಿರ್ಮಾಣಕ್ಕಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸುವ ಕುರಿತು.**

**ಟೆಂಡರ್ ವೇಳಾ ಪಟ್ಟಿ ಹಾಗೂ ವಿವರಗಳು:** 1) ಟೆಂಡರ್‌ಗೆ ಇಟ್ಟಿರುವ ಮೊಬಲಗು ರೂ: 17.00 ಲಕ್ಷ 2) ಟೆಂಡರ್ ಬಿಡಗಳನ್ನು ಸಲ್ಲಿಸಲು ಕೊನೆಯ ದಿನಾಂಕ (ವೆಬ್ ಸೈಟ್ ಮೂಲಕ) ಸಮಯ ದಿ:17/05/2025 ಸಮಯ ಸಂಜೆ: 5.00, 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ & ಸಮಯ ದಿ:19/05/2025 ಸಮಯ ಮು:11.00 ಗಂಟೆ, 4) ಆರ್ಥಿಕ ಬಿಡ್ ಗಳನ್ನು ತೆರೆಯ ಬಹುದಾದ ಸಂಭಾವ್ಯ ದಿನಾಂಕ & ಸಮಯ ದಿನಾಂಕ: 20–05–2025 ಮು:11.00 ಗಂಟೆ / ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತಿಳಿಸಲಾಗುವುದು. 5) ಇ.ಎಂ.ಡಿ. ಮೊಬಲಗು (ವಿದ್ಯುನ್ಮಾನ ಪ್ರಕ್ರಿಯೆ ಮೂಲಕ ಮಾತ್ರ) ರೂ: 42,500/– 6) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ **9448999388/9480695090,** 7) ಅಂತರ ಜಾಲತಾಣದ ವಿಳಾಸ **www.kppp.karnataka.gov.in**

ಸಹಿ/– ಉಪನಿರ್ದೇಶಕರು(ಆಡಳಿತ)
ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ
ಸಮನ್ವಯಾಧಿಕಾರಿಗಳು ಸಮಗ್ರ ಶಿಕ್ಷಣ ಅಭಿಯಾನ,ಇಲಾಖೆ, ಬೀದರ ಜಿಲ್ಲೆ.

ವಾ.ಸಾ.ಸಂ.ಇ/ಬೀದರ/28/ಕೆ.ಎಸ್.ಎಂ.ಸಿ.&ಎ/2025–26

## ಅಭಿವೃದ್ಧಿ ಕಾರ್ಯ ನೆನೆಗುದಿಗೆ ಸ್ಥಳೀಯರ ಆಕ್ರೋಶ
## ಪೂರ್ಣ ಕಾಮಗಾರಿ ಕೈಗೊಳ್ಳಿ : ಖರ್ಗೆ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ : ತಾಲೂಕಿನ ಹಳ್ಳಿಖೇಡ (ಬಿ) ಪಟ್ಟಣದ ವಾರ್ಡ್ 12ರ ಭೀಮನಗರ ಬಡಾವಣೆಯಲ್ಲಿ ಅಪೂರ್ಣ ರಸ್ತೆ ಕಾಮಗಾರಿ ಕೈಗೊಂಡ ಹಿನ್ನಲೆ ಜನರ ಸುಗಮ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ಬಿ.ಎಸ್.ಎಸ್.ಕೆ. ಹಾಗೂ ಎ.ಪಿ.ಎಂ.ಸಿ. ಮಾಜಿ ನಿರ್ದೇಶಕ ರವಿಕುಮಾರ ಖರ್ಗೆ ಆರೋಪಿಸಿದರು.

ತಾಲೂಕಿನ ಹಳ್ಳಿಖೇಡ (ಬಿ) ಪಟ್ಟಣದ ಭೀಮನಗರ ಬಡಾವಣೆಯಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಪುರಸಭೆ ಸದಸ್ಯ ಸುಶೀಲ ಮರಪಳ್ಳಿ ಹಾಗೂ ಜೆಡಿಎಸ್ ಮುಖಂಡ ರಾಜು ಸಿಡ್ಲೆ ಪೂರ್ಣ ಕಾಮಗಾರಿ ವಿರೋಧ ಮಾಡುತ್ತಿದ್ದಾರೆ. ಜನರ ಅಭಿವೃದ್ಧಿಗೆ ಶ್ರಮ ವಹಿಸಬೇಕಾಗಿದ್ದ ಸ್ಥಳೀಯ ಚುನಾಯಿತ ಪ್ರತಿನಿಧಿ ಸುಶೀಲ ಮರಪಳ್ಳಿ ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ದೂರಿದರು.

ರಸ್ತೆ ಸುಧಾರಣೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿ ಅರ್ಧಕ್ಕೆ ನಿಲ್ಲಿಸಿದ ಕಾರಣ ರಾತ್ರಿ ಹೊತ್ತಿನಲ್ಲಿ ಜನರು ಗುಂಡಿಗಳಲ್ಲಿ ಬಿದ್ದು ಗಾಯ ಮಾಡಿಕೊಳ್ಳುತ್ತಿದ್ದಾರೆ. ಹೀಗಾಗಿ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಇತ್ತ ಕಡೆ ಗಮನ ಹರಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಲ್ಲಪ್ಪ ಖರ್ಗೆ, ಸಿದ್ರಾಮ ಅರಳಿ, ನಾಮದೇವ ಅರಳಿ, ಸುರೇಖಾ ಅರಳಿ, ಸುನಿಲ ಕಂಠಿ, ರಾಕೇಶ ಅರಳಿ ಇದ್ದರು.

## ಡಾ.ಭೀಮಣ್ಣ ಖಂಡ್ರೆಗೆ ಬಸವರತ್ನ ಪ್ರಶಸ್ತಿ :ಸ್ವೀಕರಿಸಿದ ಸಚಿವ ಈಶ್ವರ ಖಂಡ್ರೆ



ಮಲ್ಲಮ್ಮನುಡಿವಾರ್ತೆಭಾಲ್ಕಿ:ಮೇ.6: ಶತಾಯುಷಿ ಮಾಜಿ ಸಚಿವ ಡಾ.ಭೀಮಣ್ಣ ಖಂಡ್ರೆ ಅವರಿಗೆ ಕೇರಳ ರಾಜ್ಯದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ವತಿಯಿಂದ ಕೊಡಮಾಡುವ ಅತ್ಯುನ್ನತ ಬಸವರತ್ನ ಪುರಸ್ಕಾರ ನೀಡಿ ಗೌರವಿಸಲಾಯಿತು. ತಿರುವನಂತಪುರ ಜಿಲ್ಲೆಯ ವಟ್ಟಾಪ್ಪುರದಲ್ಲಿನ ವೀರಶೈವ ಭವನದಲ್ಲಿ ಭಾನುವಾರ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಮಾಜಿ ಸಾರಿಗೆ ಸಚಿವ, ಲೋಕನಾಯಕ ಶತಾಯುಷಿ ಡಾ. ಭೀಮಣ್ಣ ಖಂಡ್ರೆ ಅವರಿಗೆ ನೀಡಲಾಗಿರುವ ಬಸವರತ್ನ ಪುರಸ್ಕಾರವನ್ನು ತಮ್ಮ ತಂದೆಯ ಪರವಾಗಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಇಂದು ಸ್ವೀಕರಿಸಿದರು. ಕೇರಳ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಭೀನು ಕೆ ಶಂಕರ್, ಸೋದರಿ ಸರಸ್ವತಿ, ಬೆಂಗಳೂರು ಮಹಾಸಭಾದ ಕಾರ್ಯದರ್ಶಿ ರೇಣುಕಾಪ್ರಸನ್ನ ಮತ್ತಿತರರು ಉಪಸ್ಥಿತರಿದ್ದರು..

## ಪ್ರತ್ಯೇಕ ಜೂಜಾಟ:22 ಮಂದಿ ವಶಕ್ಕೆ:86960 ರೂ ಜಪ್ತಿ



ಮಲ್ಲಮ್ಮ ನುಡಿ ವಾರ್ತೆ

ಹುಣಸಗಿ :ಮೇ.6: ತಾಲೂಕಿನ ಕೊಡೇಕಲ್ ಗ್ರಾಮದಲ್ಲಿ ಇಸ್ಪೀಟ್ ಆಟ ಆಡುತ್ತಿರುವ ಮಾಹಿತಿ ಪಡೆದ ಅಯ್ಯಪ್ಪ ಪಿ.ಎಸ್.ಐ. ದಾಳಿ ನಡೆಸಿ ಪ್ರತ್ಯೇಕ ಪ್ರಕರಣದಲ್ಲಿ 22 ಜನರನ್ನು ಬಂಧಿಸಿ,ಅವರಿಂದ 86960 ರೂ ಜಪ್ತಿ ಮಾಡಿ ಅವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಯಾದಗಿರಿ ಜಿಲ್ಲೆಯ ಎಸ್.ಪಿ. ಪೃಥ್ವಿಕ್ ಶಂಕರ್ , ಡಿ.ಎಸ್.ಪಿ ಜಾವೀದ್ ಇನಾಮ್ದಾರ್ ರವರ ಹಾಗೂ ರವಿಕುಮಾರ ಎಸ್.ಎನ್ ಸಿಪಿಐ ಹುಣಸಗಿ ಮಾರ್ಗದರ್ಶನದ ಮೇರೆಗೆ ಅಯ್ಯಪ್ಪ ಪಿ.ಎಸ್.ಐ ಹಾಗೂ ಸಿಬ್ಬಂದಿ ದಾಳಿ ನಡೆಸಿತು.

ಕೊಡೇಕಲ್ ಗ್ರಾಮದ ನಿಜಲಿಂಗಪ್ಪ ಗುಡಿ ಹತ್ತಿರ,13 ಜನ ಹಾಗೆ ಸ್ಥಳದಿಂದ ಒಟ್ಟು ನಗದು ಹಣ 58800/– ರೂ. ಮತ್ತು ಕೊಡೇಕಲ್ ಗ್ರಾಮದ ಬಸ್ ನಿಲ್ದಾಣದ ಹತ್ತಿರ 09 ಜನ ಸ್ಥಳದಿಂದ ಒಟ್ಟು ನಗದು ಹಣ 28160/–ರೂ, ಜಪ್ತಿ . ಒಟ್ಟಾರೆಯಾಗಿ 86,960 ಹಣ ಮತ್ತು 22ಜನ ಇಸ್ಪೇಟ್ ಆಡುತ್ತಿರುವವರನ್ನು ಬಂಧಿಸಿದ್ದಾರೆ.

ಈ ಬಗ್ಗೆ ಕೊಡೇಕಲ್ ಪೊಲೀಸ್ ಠಾಣೆಯಲ್ಲಿ ನಂ.64 ಹಾಗೂ 65/2025 ಕಲಂ.87 ಕರ್ನಾಟಕ ಪೊಲೀಸ್ ಕಾಯ್ದೆ–1963ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ .

## ಸದೃಢ ಸಮಾಜಕ್ಕೆ ಯುವಕರ ಶ್ರಮ ಅಗತ್ಯ:ಅಂಜುಮ್ ತಬಸುಮ್



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ : ಬಲಿಷ್ಠ ರಾಷ್ಟ್ರ ಮತ್ತು ಸದೃಢ ಸಮಾಜ ನಿರ್ಮಾಣ ಮಾಡುವುದಕ್ಕೆ ಯುವಕರ ಶ್ರಮ ಅಗತ್ಯವಾಗಿದೆ ಎಂದು ತಹಸೀಲ್ದಾರ್ ಅಂಜುಮ್ ತಬಸುಮ್ ಹೇಳಿದರು.

ತಾಲೂಕಿನ ಮಾಣಿಕ ನಗರ ಗ್ರಾಮದಲ್ಲಿ ಸರಕಾರಿ ಪ್ರಥಮ ದರ್ಜೆ ಕಾಲೇಜು ಹುಮನಾಬಾದ್ ವತಿಯಿಂದ ಮಂಗಳವಾರ ನಡೆದ ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರ ಉದ್ದೇಶಿಸಿ ಮಾತನಾಡಿದರು.

ಗ್ರಾಮೀಣ ಭಾಗದ ಹಳ್ಳಿಗಳ ಅಭಿವೃದ್ಧಿ, ನಾಗರಿಕ ಜಗತ್ತಿನ ಮನುಷ್ಯರಲ್ಲಿ ಮಾನವೀಯ ಮೌಲ್ಯಗಳನ್ನು ತುಂಬುವ ಕಾರ್ಯ, ಬಾಲ್ಯ ವಿವಾಹ ನಿಯಂತ್ರಣ ಸೇರಿ ಹೀಗೆ ಸಾಮಾಜಿಕ ಸುದಾರಣೆಗೆ ಜಾಗೃತಿ ಮೂಡಿಸುವ ಮೂಲಕ ದೇಶ ಕಟ್ಟುವ ಕಾರ್ಯದಲ್ಲಿ ಯುವಕರು ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಮಾಣಿಕ ನಗರ ಗ್ರಾಮ ಪಂಚಾಯತ ಅಧ್ಯಕ್ಷೆ ಪಂಚಶೀಲ ಹೆಗ್ಗಣಿ, ರಜನಿ ಕೃಷ್ಣಮೂರ್ತಿ ಅಯ್ಯರ್, ಅಪರ್ಣಾ ಶಟ್ಟಿ, ಡಾ. ಶಾಂತಕುಮಾರ ಬನಗುಂಡಿ, ಡಾ. ಪ್ರಹ್ಲಾದ್ ಚಂಗಟೆ, ಶಿವಾಜಿ ರಾಠೋಡ, ಡಾ. ನಂದಾ ವಾರದ್, ಸಂತೋಷ ಮಹಾಜನ್, ಡಾ. ರಾಜಶೇಖರ ಯರಬಾಗ, ದಿಲೀಪಕುಮಾರ ಪತಂಗೆ, ಡಾ. ಶಿವಶರಣಪ್ಪ, ಡಾ. ಪೆದ್ದಪ್ಪ ನಾಯಕ, ಡಾ. ಶ್ರೀದೇವಿ, ಡಾ. ತರುನಮ್, ಅಶ್ವಿನಿ ಮಹೇಶ ಸಿದ್ದಗೊಂಡ, ಪ್ರಕಾಶ ಶೇಡೋಳಕರ್ ಇದ್ದರು.

## ಅಕ್ರಮ ಮರಳು ದಂಧೆಗೆ ಕಡಿವಾಣ ಹಾಕಿ,ಇಲ್ಲದಿದ್ದಲ್ಲಿ ಮುಲಾಜಿಲ್ಲದೆ ಶಿಸ್ತಿನ ಕ್ರಮ:ಬಿ.ಫೌಜಿಯಾ ತರನ್ನುಮ್



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮೇ.6: ಜಿಲ್ಲೆಯಲ್ಲಿ ಎಲ್ಲಿಯೂ ಅಕ್ರಮವಾಗಿ ಮರಳು ದಂಧೆ ನಡೆಯದಂತೆ ಅಧಿಕಾರಿಗಳು ಇದಕ್ಕೆ ಕಡಿವಾಣ ಹಾಕಬೇಕು. ಇಲ್ಲದಿದ್ದರೆ ನಿರ್ಲಕ್ಯ ವಹಿಸುವ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಅನಿವಾರ್ಯ ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ಟಾಸ್ಕ್ ಫೋರ್ಸ್ ಸಮಿತಿಯ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು.

ಮಂಗಳವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಹಲವು ಬಾರಿ ಸೂಚನೆ ನೀಡಿದ್ದರೂ ಅಕ್ರಮ ಮರಳು ಸಾಗಾಟ ನಿರಂತರವಾಗಿ ನಡೆಯುತ್ತಿರುವುದೇಕೆ? ಎಂದು ಅಧಿಕಾರಿಗಳನ್ನು ಪ್ರಶ್ನಿಸಿದ ಅವರು, ಅಧಿಕಾರಿಗಳಿಗೆ ಮಾಹಿತಿ ಇಲ್ಲದೆ ಈ ದಂಧೆ ನಡೆಯುತ್ತಿದಿಯೇ ಎಂದು ತೀವ್ರ ಬೇಸರ ವ್ಯಕ್ತಪಡಿಸಿದರು. ಕೂಡಲೆ ಇದಕ್ಕೆ ಕಡಿವಾಣ ಹಾಕಬೇಕು. ಇನ್ನು ಈ ವಿಷಯದಲ್ಲಿ ಶೂನ್ಯ ಸಹಿಷ್ಣುತೆ ಸಹ ಸಹಿಸುವುದಿಲ್ಲ ಎಂದರು.

ಪಟ್ಟಾ ಜಮೀನಿನಲ್ಲಿ ಮರಳು ಸ್ಟಾಕ್ ಮಾಡುತ್ತಿರುವ ಪ್ರಕರಣಗಳು ನಮ್ಮ ಕಣ್ಮುಂದಿದ್ದರೂ ಜಮೀನು ಮಾಲೀಕರ ಮೇಲೆ ಏಕೆ ಕ್ರಮ ಕೈಗೊಳ್ಳುತ್ತಿಲ್ಲ ಎನ್ನುತ್ತಲೆ ಗರಂ ಆದ ಜಿಲ್ಲಾಧಿಕಾರಿಗಳು, ಕೂಡಲೆ ಅಂತಹ ಅಕ್ರಮ ಮರಳು ವಶಕ್ಕೆ ಪಡೆದು, ಮಾಲೀಕರ ಮೇಲೆ ಮುಲಾಜಿಲ್ಲದೆ ಎಫ್.ಐ.ಆರ್. ದಾಖಲಿಸಬೇಕು ಎಂದ ಅವರು, ಇನ್ನು ಪ್ರಸ್ತುತ ಜಿಲ್ಲೆಯಾದ್ಯಂತ ಕಾನುನುಬದ್ಧ ಮರಳು ಗಣಿಗಾರಿಕೆಯು ಸಹ ನಿಲ್ಲಿಸಿರುವುದರಿಂದ ಮರಳು ಸಂಗ್ರಹ ಪ್ರದೇಶ ಸುತ್ತ ಫೆನ್ಸಿಂಗ್ ಮೂರು ದಿನದೊಳಗೆ ಹಾಕಬೇಕು ಎಂದು ಅಧಿಕಾರಿಗಳಿಗೆ ಸೂಚನೆ ಕೊಟ್ಟರು.

ತಾಲೂಕಾ ಹಂತದಲ್ಲಿ ಸಹಾಯಕ ಆಯುಕ್ತರ ನೇತೃತ್ವದ ಟಾಸ್ಕ್‌ಫೋರ್ಸ್ ಕಮಿಟಿಯು ಕಾಲ–ಕಾಲಕ್ಕೆ ಸಭೆ ಕರೆದು ಎಲ್ಲಾ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದಲ್ಲಿ ಅಕ್ರಮ ಮರಳು ಚಟುವಟಿಕೆ ನಿಲ್ಲಿಸಬಹುದಾಗಿದೆ. ಅಕ್ರಮ ಪ್ರಕರಣ ಎಲ್ಲಿಯೇ ವರದಿಯಾದಲ್ಲಿ ದಂಡ ವಸೂಲಿ ಜೊತೆಗೆ ಪ್ರಕರಣ ಸಹ ದಾಖಲಾಗಬೇಕು. ದಂಡದ ರಸೀದಿ ಹರಿದು ಕೈ ತೊಳೆದುಕೊಳ್ಳುವಂತಿಲ್ಲ. ಇನ್ನು ತಾಲೂಕಾ ಸಮಿತಿಯ ಎಲ್ಲಾ ಸದಸ್ಯರು ಸಮಾನ ಜವಾಬ್ದಾರಿ ಹೊರಬೇಕು ಮತ್ತು ಸಮನ್ವಯುತೆಯಿಂದ ಸಕ್ರಿಯವಾಗಿ ಕಾರ್ಯನಿರ್ಚಗಿಸಿದಲ್ಲಿ ಅಕ್ರಮ ಮರಳು ದಂಧೆ ನಿಯಂತ್ರಣ ಸಾಧ್ಯ ಎಂದರು.

ಸರಳವಾಗಿ ಮರಳು ಸಿಗಲಿ: ಅಕ್ರಮ ಮರಳು ವಶಪಡಿಸಿಕೊಂಡ ನಂತರ ಅದನ್ನು ನಿಗದಿತ ಸ್ಥಳದಲ್ಲಿ ಸಂಗ್ರಹಿಸಿ ಸಾರ್ವಜನಿಕರಿಗೆ ಡಿ.ಎಸ್.ಆರ್ ದರದಂತೆ ಮತ್ತು ಗುತ್ತಿಗೆದಾರರಿಗೆ ಹರಾಜಿನ ಮೂಲಕ ವಿಲೇವಾರಿ ಮಾಡುವ ನೂತನ ವ್ಯವಸ್ಥೆ ಜಾರಿಗೆ ತರಬೇಕು, ಈ ಕುರಿತು ಸಾರ್ವಜನಿಕವಾಗಿ ಮೊದಲೆ ಮಾಹಿತಿ ನೀಡಬೇಕು ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪನಿರ್ದೇಶಕ ಸೋಮಶೇಖರ್ ಅವರಿಗೆ ನಿರ್ದೇಶನ ನೀಡಿದ ಡಿ.ಸಿ. ಅವರು, ಮುಂದಿನ 15 ದಿನಗಳ ನಂತರ ಮತ್ತೆ ಸಭೆ ಕ–ರೆದು ಇಂದಿನ ಸಭೆಯ ನಾಡವಳಿ ಅನುಷ್ಠಾನದ ಕುರಿತು ಪರಾಮರ್ಶೆ ಮಾಡಲಾಗುವುದೆಂದರು.

ಗಣಿಗಾರಿಕೆ ಸ್ಥಳಕ್ಕೆ ಭೇಟಿ ಕೊಡಿ: ತಾಲೂಕಾ ಮಟ್ಟದ ಟಾಸ್ಕ್‌ಫೋರ್ಸ್ ಕಮಿಟಿ ಸದಸ್ಯರು ಆಗಾಗ ತಮ್ಮ ತಾಲೂಕಿನ ವ್ಯಾಪ್ತಿಯ ಮರಳು ಗುತ್ತಿಗೆ ಲೈಸೆನ್ಸ್ ಪಡೆದ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿ ಕಾನೂನು ಉಲ್ಲಂಘನೆಯಾಗದಿರುವ ಕುರಿತು ಪರಿಶೀಲಿಸಬೇಕು. ಮರಳು ಸಾಗಾಟ ತಪಾಸಣೆಗೆಂದೆ ಪ್ರತ್ಯೇಕ ಚೆಕ್ ಪೋಸ್ಟ್ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಹಾಕುವ ಅವಶ್ಯಕತೆ ಇದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ ಮತ್ತು ಎಸ್.ಪಿ. ಅಡ್ಡೂರು ಶ್ರೀನಿವಾಸಲು ತಿಳಿಸಿದರು.

6.17 ಕೋಟಿ ರಾಜಸ್ವ ಸಂಗ್ರಹ: ಜಿಲ್ಲೆಯಾದ್ಯಂತ ಕಾನೂನುಬದ್ಧ ಮರಳು ಗಣಿಗಾರಿಕೆಯಿಂದ 2023–24 ಹಾಗೂ 2024–25ನೇ ಸಾಲಿನಲ್ಲಿ ಒಟ್ಟಾರೆ 7.72 ಲಕ್ಷ ಮೆಟ್ರಿಕ್ ಟನ್ ಮರಳು ಮಾರಾಟದಿಂದ 9.08 ಕೋಟಿ ರೂ. ರಾಜಸ್ವ ಸಂಗ್ರಹವಾಗಿದೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿಯಮಿತ ತಪಾಸಣೆ ಪರಿಣಾಮ 2024–25ರಲ್ಲಿ 179 ಅಕ್ರಮ ಮರಳು ಸಾಗಾಣಿಕೆ ಪ್ರಕರಣಗಳನ್ನು

ಪತ್ತೆ ಹಚ್ಚಿ 123 ಪ್ರಕರಣಗಳಲ್ಲಿ 44.36 ಲಕ್ಷ ರೂ. ದಂಡ ವಿಧಿಸಿ ಒಂದು ಪ್ರಕರಣದಲ್ಲಿ ಮೊಕದಮ್ಮೆ ದಾಖಲಿಸಿದೆ. ಅದೇ ರೀತಿ ಒಂದು ಅಕ್ರಮ ಮರಳ ಸಂಗ್ರಹಣೆ ಪ್ರಕರಣದಲ್ಲಿಯೂ ಎಫ್.ಐ.ಆರ್. ದಾಖಲಿಸಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪನಿರ್ದೇಶಕ ಸೋಮಶೇಖರ್ ಎಂ. ಸಭೆಗೆ ಮಾಹಿತಿ ನೀಡಿದರು.

ಇದಲ್ಲದೆ ಜಿಲ್ಲೆಯ

ವಿವಿಧ ಪೊಲೀಸ್ ಠಾಣೆ ವ್ಯಾಪ್ತಿಯಡಿ 160 ಪ್ರಕರಣಗಳು ದಾಖಲಾಗಿವೆ. ಆರ್.ಟಿ.ಓ ದಿಂದ ಕಳೆದ ವರ್ಷದಲ್ಲಿ 3,291 ವಾಹನ ಪರಿಶೀಲಿಸಿ 159 ಪ್ರಕರಣ ದಾಖಲಿಸಿ 39.83 ಲಕ್ಷ ರೂ. ಮತ್ತು ಕಂದಾಯ ಇಲಾಖೆಯಿಂದ 6.40 ಲಕ್ಷ ರೂ. ದಂಡ ವಸೂಲಿ ಮಾಡಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಡಿ.ಸಿ.ಪಿ ಕನಿಕಾ

ಸಿಕ್ರಿವಾಲ್, ಸಹಾಯಕ ಆಯುಕ್ತ ಪ್ರಭುರೆಡ್ಡಿ,

ಲೋಕೋಪಯೋಗಿ ಇಲಾಖೆ ಇ.ಇ. ಸುಭಾಷ ಸೇರಿದಂತೆ ತಾಲೂಕಿನ ತಹಶೀಲ್ದಾರರು, ತಾಲೂಕಾ ಪಂಚಾಯತ್ ಇ.ಓ.ಗಳು, ಪೊಲೀಸ್ ಅಧಿಕಾರಿಗಳು ಭಾಗವಹಿಸಿದ್ದರು.

## ಗ್ರಾಮೀಣ ಭಾಗದಲ್ಲೂ ವೈದ್ಯಕೀಯೇ ಸೇವೆಗೆ ಆದ್ಯತೆ ನೀಡಿ : ವೈದ್ಯ ವಿದ್ಯಾರ್ಥಿಗಳಿಗೆ ರಾಜ್ಯಪಾಲರ ಸಲಹೆ




ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು,ಮೇ6:"ಪ್ರತಿಯೊಬ್ಬರೂ ಸಂತೋಷವಾಗಿರಬೇಕು, ಎಲ್ಲರೂ ಆರೋಗ್ಯವಾಗಿರಬೇಕು – ಇದು ವೈದ್ಯಕೀಯ ಸೇವೆಗಳ ಮುಖ್ಯ ಉದ್ದೇಶವಾಗಿದೆ. ವೈದ್ಯಕೀಯ ಸೇವೆಯನ್ನು ಮಾನವೀಯ ದೃಷ್ಟಿಯಿಂದ ಅಳವಡಿಸಿಕೊಂಡು ಪ್ರಾಮಾಣಿಕವಾಗಿ ಜನರಿಗೆ ವೈದ್ಯಕೀಯ ಸೌಲಭ್ಯ ಕಲ್ಪಿಸಬೇಕು" ಎಂದು ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಹೇಳಿದರು.

ಕರ್ನಾಟಕದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ 27 ನೇ ಘಟಿಕೋತ್ಸವದ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು. "ವೈದ್ಯಕೀಯ ಸೇವೆಯೇ ಶ್ರೇಷ್ಠ ಮಾನವ ಮತ್ತು ದೈವಿಕ ಸೇವೆ, ವೈದ್ಯರನ್ನು ದೇವರ ಸ್ವರೂಪ ಎಂದು ಪರಿಗಣಿಸಲಾಗುತ್ತದೆ. ವೈದ್ಯಕೀಯ ಪದವಿ ಪಡೆದು ವಿದ್ಯಾರ್ಥಿಗಳು ವೈದ್ಯರಾಗಿ ಸೇವೆಗಳನ್ನು ಒದಗಿಸಿದಾಗ ಮತ್ತು ಅದನ್ನು ಮಾನವೀಯ ಸೇವೆಯಾಗಿ ಮಾಡಿದಾಗ, ಖಂಡಿತವಾಗಿಯೂ ಯಶಸ್ವಿ ವೈದ್ಯರಾಗುತ್ತೀರಿ ಮತ್ತು ಭವಿಷ್ಯದಲ್ಲಿ ಶ್ರೇಷ್ಠತೆಯನ್ನು ಸಾಧಿಸುವಿರಿ" ಎಂದರು. "ಪ್ರಾಚೀನ ಭಾರತವು ವೈದ್ಯಕೀಯ ವಿಜ್ಞಾನದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ ಎಂದು ನೀವು ತಿಳಿದಿರಲೇಬೇಕು, ಮಹರ್ಷಿ ಚರಕನನ್ನು ಭಾರತದಲ್ಲಿ ಆಯುರ್ವೇದ ಮತ್ತು ಔಷಧದ ಪಿತಾಮಹ ಎಂದು ಪರಿಗಣಿಸಲಾಗುತ್ತದೆ. ಮಹರ್ಷಿ ಸುಶ್ರುತನನ್ನು ಶಸ್ತ್ರಚಿಕಿತ್ಸೆಯ ಪಿತಾಮಹ ಎಂದು ಪರಿಗಣಿಸಲಾಗುತ್ತದೆ. ಸ್ವಾತಂತ್ರ್ಯದ ನಂತರ, ದೇಶವು ವೈದ್ಯಕೀಯ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಅಭೂತಪೂರ್ವ ಪ್ರಗತಿಯನ್ನು ಸಾಧಿಸಿದೆ, ಇದು ಭಾರತೀಯರ ಕಠಿಣ ಪರಿಶ್ರಮ, ನಾವೀನ್ಯತೆ ಮತ್ತು ಉದ್ಯಮಶೀಲತೆಯ ಪ್ರತಿಬಿಂಬವಾಗಿದೆ" ಎಂದು ತಿಳಿಸಿದರು.

"ಪ್ರಸ್ತುತ ವೈದ್ಯಕೀಯ ಕ್ಷೇತ್ರದಲ್ಲಿ ತಂತ್ರಜ್ಞಾನವು ಅತ್ಯಂತ ವೇಗವಾಗಿ ಬದಲಾಗುತ್ತಿದೆ. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಟೆಲಿಮೆಡಿಸಿನ್, ರೋಬೋಟಿಕ್ ಸರ್ಜರಿಯಂತಹ ಆವಿಷಾ??ರಗಳು ನಿರಂತರವಾಗಿ ಔಷಧದ ಸ್ವರೂಪವನ್ನು ಬದಲಾಯಿಸುತ್ತಿವೆ. ಹಾಗಾಗಿ, ವೈದ್ಯಕೀಯ ಕ್ಷೇತ್ರಕ್ಕೆ ಕಾಲಿಡುತ್ತಿರುವ ವಿದ್ಯಾರ್ಥಿಗಳು ನಿರಂತರವಾಗಿ ಕಲಿಕೆಯಲ್ಲಿ ತೊಡಗಿಸಿಕೊಳ್ಳಬೇಕು. ಅಲ್ಲದೆ, ಗ್ರಾಮೀಣ ಭಾರತದ ಆರೋಗ್ಯ ವ್ಯವಸ್ಥೆಯು ಇನ್ನೂ ಬಲವಾದ ವೈದ್ಯರಿಗಾಗಿ ಕಾಯುತ್ತಿದೆ. ಇಂದು ನಮ್ಮ ಯುವ ವೈದ್ಯರು ಹಳ್ಳಿಗಳತ್ತ ಮುಖ ಮಾಡುವ ಅವಶ್ಯಕತೆ ಇದೆ. ಹಳ್ಳಿಗಳಲ್ಲಿ ವಾಸಿಸುತ್ತಿರುವ ಜನರ ಸೇವೆ ಮಾಡಲು ಯುವ ವೈದ್ಯರು ಮುಂದಾಗಬೇಕು ಎಂದು ಕರೆ ನೀಡಿದರು.

ಸಮಾಜದ ಬಗ್ಗೆ ನಿಮ್ಮ ಜವಾಬ್ದಾರಿಯನ್ನು ಅರ್ಥಮಾಡಿಕೊಳ್ಳಿ, ಆರೋಗ್ಯ ಜಾಗೃತಿಯನ್ನು ಹರಡಿ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಸಕ್ರಿಯವಾಗಿ ಭಾಗವಹಿಸಿ. ಸರ್ವೇ ಭವಂತು ಸುಖಿನಃ, ಸರ್ವೇ ಸಂತು ನಿರಾಮಯಃ ಎಂಬುದನ್ನು ಪಾಲಿಸಿ ಎಂದ ಅವರು, ಪದವಿ ಪಡೆದ ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯವಾಗಲಿ ಎಂದು ಹಾರೈಸಿದರು.

ಕರ್ನಾಟಕ ರಾಜ್ಯದಲ್ಲಿರುವ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಪ್ರಪಂಚದಾದ್ಯಂತ ವೈದ್ಯಕೀಯ ಶಿಕ್ಷಣದಲ್ಲಿ ಗುಣಮಟ್ಟ ಮತ್ತು ಬದ್ಧತೆಗೆ ಹೆಸರುವಾಸಿಯಾಗಿದೆ. ಡಾ.ಹೊಂಬೇಗೌಡ ಶರತ್ ಚಂದ್ರ, ಡಾ.ಗಿರೀಶ್ ರಾವ್, ಮತ್ತು ಡಾ.ಜಿ.ಟಿ.ಸುಭಾಷ್ ಅವರಿಗೆ ವಿಜ್ಞಾನ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಅವರ ಅತ್ಯುತ್ತಮ ಮತ್ತು ಅನುಪಮ ಕಾರ್ಯಕ್ಕಾಗಿ ಗೌರವ ಪದವಿ ನೀಡಲಾಗಿದೆ. ವೈದ್ಯಕೀಯ ಕ್ಷೇತ್ರಕ್ಕೆ ಅವರ ಸೇವೆ ನಿರಂತರವಾಗಿರಲಿ ಎಂದು ಆಶೀಸುತ್ತೇನೆಂದರು. ಸಮಾರಂಭದಲ್ಲಿ ಸಚಿವರಾದ ಡಾ.ಶರಣ್ ಪ್ರಕಾಶ್ ಪಾಟೀಲ್, ವಿಪ್ರೋ ಲಿಮಿಟೆಡ್ ಸಂಸ್ಥಾಪಕ ಅಧ್ಯಕ್ಷ ಅಜೀಂ ಪ್ರೇಮ್‌ಜಿ, ಕುಲಪತಿ ಡಾ.ಭಗವಾನ್.ಬಿ.ಸಿ ಮತ್ತು ಇತರ ಗಣ್ಯರು ಉಪಸ್ಥಿತರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.